# ಹೊಸ ಮನುಷ್ಯ ಸಮಾಜವಾದಿ ಮಾಸಿಕ

ಫೆಬ್ರುವರಿ, ೨೦೧೪ ಸಂಪುಟ: ೩ ಸಂಚಿಕೆ ೭

**ಸಂಪಾದಕ : ಡಿ.ಎಸ್.ನಾಗಭೂಷಣ**

**ಚಂದಾ :** ವಾರ್ಷಿಕ: ರೂ. ೧೫೦/–(ವ್ಯಕ್ತಿಗಳಿಗೆ) ರೂ.೨೫೦/–(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ.೧೫/–



**ವಿಳಾಸ:** ಎಚ್.ಐ.ಜಿ–೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ–೫೭೭ ೨೦೪

**ದೂ:** ೦೮೧೮೨–೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಲೋಕಸಭಾ ಚುನಾವಣೆಗಳು ದಿನೇ ದಿನೇ ಹತ್ತಿರ ಬರುತ್ತಿರುವಂತೆ ಪ್ರಮುಖ ಪಕ್ಷಗಳ ನಡುವಿನ ಸ್ಪರ್ಧೆಯ ತುರುಸು ಹೆಚ್ಚುತ್ತಿದೆ. ಬಿಜೆಪಿ ಮತ್ತು ಕಾಂಗ್ರೆಸ್ ರಾಷ್ಟ್ರಾದ್ಯಂತ ದಿನಕ್ಕೊಂದರಂತೆ ಪ್ರಚಾರ ಸಭೆಗಳನ್ನು ಆಯೋಜಿಸುತ್ತಿವೆ. ಭರ್ಜರಿ ಮಾತುಗಾರರೆನಿಸಿರುವ ಮೋದಿ ಒಳ್ಳೆಯ ರಂಗನಟನ ಹಾಗೆ ಆಕರ್ಷಕ ಆಂಗಿಕ ಹಾವಭಾವಗಳು, ಧ್ವನಿಯ ಏರಿಳಿತ ಮತ್ತು ಕುತೂಹಲಕಾರಿ ಮೌನಗಳಿಂದೊಡಗೂಡಿದ ಭರ್ಜರಿ 'ಷೋ'ಗಳನ್ನು ನೀಡುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ರಾಹುಲ್ ಕೆಲವೇ ದಿನಗಳ ಹಿಂದಿನವರೆಗೆ ಅತಿಥಿ ನಟರಂತೆ ರಾಷ್ಟ್ರ ಜೀವನದಲ್ಲಿ ಆಗಾಗ್ಗೆ ಮಾತ್ರ ಇಣುಕಿ ಮಾಯವಾಗುತ್ತಿದ್ದವರು ಈಗ ತಾವು ಮೋದಿ ವಿರುದ್ಧ ಪ್ರಧಾನಿ ಅಭ್ಯರ್ಥಿಯಾಗಿ ಸೆಣಸಬೇಕಿಲ್ಲ ಎಂಬ ಘೋಷಣೆಯಾಗುತ್ತಿದ್ದಂತೆ ಒಂದು ದೀರ್ಘ ಉಸಿರು ತೆಗೆದುಕೊಂಡವರಂತೆ ಆ ಘೋಷಣೆ ಮಾಡಲಾದ ಏಐಸಿಸಿ ಸಭೆಯಲ್ಲೇ ಒಂದು 'ಭರ್ಜರಿ' ಭಾಷಣ ಬಿಗಿದು ಕುಸಿದೇ ಹೋಗಿದ್ದ ಕಾಂಗ್ರೆಸ್ಸಿಗರ ಚೈತನ್ಯಕ್ಕೆ ಒಂದಿಷ್ಟು ಕಾವು ಒದಗಿಸಿದ್ದಾರೆ.

ಹಾಗೆ ನೋಡಿದರೆ ಈ ಇಬ್ಬರ ಈ 'ಭರ್ಜರಿ' ಭಾಷಣಗಳಲ್ಲಿಯೂ ಭಾರತದ ಸದ್ಯದ ಸಾಮಾಜಿಕ–ಆರ್ಥಿಕ ಚಿತ್ರವನ್ನು ನಿರ್ಣಾಯಕವಾಗಿ ಬದಲಾಯಿಸಬಲ್ಲವೆಂದು ತೋರುವ ಯಾವುದೇ ಹೊಸ ಒಳನೋಟಗಳು ಕಾಣುತ್ತಿಲ್ಲ. ಮೋದಿ ಕಾಂಗ್ರೆಸ್ಸಿಗರ ಭ್ರಷ್ಟಾಚಾರದ ಹಳೆಯ ಬಟ್ಟೆಗಳನ್ನು ಮತ್ತೆ ಮತ್ತೆ ಎತ್ತಿ ಎತ್ತಿ ಒಗೆಯುತ್ತಿದ್ದಾರೆ. ಕಾಂಗ್ರೆಸ್ಸಿಗರೇ ತಮ್ಮ ಭ್ರಷ್ಟಾಚಾರವನ್ನು ಒಪ್ಪಿಕೊಂಡು ಕಿವಿ ಹಿಡಿದು ಬಸ್ಕಿ ಹೊಡೆಯುತ್ತಿರುವಾಗ ಮೋದಿಯ ಮಾತುಳನ್ನು ಕಿವಿಗೆ ಹಾಕಿಕೊಳ್ಳುವರಾರು? ಇನ್ನು ಅವರ ಗುಜರಾತ್ ಮಾದರಿ ಅಭಿವೃದ್ಧಿ ಈಗಾಗಲೇ ಸಾಕಷ್ಟು ಚರ್ಚೆಗೆ ಒಳಗಾಗಿ ಅದು ಮೂಲತಃ 'ಚೇಲಾ ಬಂಡವಾಳಶಾಹಿ'ಯ ಸಂಕೇತವೆನಿಸಿಕೊಂಡುಬಿಟ್ಟಿದೆ. ಅದೇನೇ ಇದ್ದರೂ, ಮೋದಿ ಕುರಿತು ಚರ್ಚೆಯೇ ಆಗದಿರುವ ಒಂದು ಮುಖ್ಯ ಸಂಗತಿಯೆಂದರೆ, ಅವರು ಭಾರತದಂತಹ ಬಹು ಸಂಕೀರ್ಣವಾದ ವಿದ್ಯಮಾನವನ್ನು ಸಹಾನುಭೂತಿಯಿಂದ ಅರಿತು ಅದರ ನಿಜವಾದ ಹಿತಾಸಕ್ತಿಗಳನ್ನು ಗುರುತಿಸಿ, ಅವನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ನಿರ್ವಹಿಸುವ ಕನಿಷ್ಟ ಬೌದ್ಧಿಕ ಸಿದ್ಧತೆ–ಸಾಮರ್ಥ್ಯ ಅವರಲ್ಲಿದೆಯೇ ಎಂಬುದು. ಮಣಿಶಂಕರ್ ಅಯ್ಯರ್ ಎಂಬ ಬಾಯಿಬಡುಕ ಮೋದಿಯನ್ನು 'ಟೀ ಮಾರುವವ' ಎಂದು ಕರೆದಿದ್ದರಲ್ಲಿ ಕೀಳು ಅಭಿರುಚಿಯ ಕುಹಕವಿದ್ದು(ಅದರಿಂದ ಮೋದಿಯವರಿಗೇ ಲಾಭವಾಗಿರುವುದಾದರೂ) ಅದು ಪರೋಕ್ಷವಾಗಿ ಈ ಸತ್ಯವನ್ನು ಸೂಚಿಸುತ್ತಿದೆ ಎಂದು ಹೇಳಬಹುದು. ಕೆಲವು ದಿನಗಳ ಹಿಂದೆ ತಮ್ಮ ಪಕ್ಷದ ಮೂಲ ನಾಯಕರ(ಶ್ಯಾಮಾ ಪ್ರಸಾದ್ ಮುಖರ್ಜಿ) ಚರಿತ್ರೆಯೂ ಸೇರಿದಂತೆ ಭಾರತದ ಚರಿತ್ರೆಯ (ತಕ್ಷಶಿಲೆ ಮತ್ತು ಚಂದ್ರಗುಪ್ತನಿಗೆ ಸಂಬಂಧಿಸಿದಂತೇ) ಪ್ರಾಥಮಿಕ ಪಾಠಗಳನ್ನೂ ಅರಿಯದೆ ಸಲ್ಲದ ಮಾತುಗಳನ್ನಾಡಿ ತಮ್ಮ ಪಕ್ಷಕ್ಕೆ ಮುಜುಗರವನ್ನುಂಟು ಮಾಡಿದ್ದ ಮೋದಿ ಈ ದೇಶದ ಪ್ರಧಾನ ಮಂತ್ರಿಗೆ ಅಗತ್ಯವೆನಿಸುವ ಕನಿಷ್ಟ ಮಟ್ಟದ ಶೈಕ್ಷಣಿಕ ಹಿನ್ನೆಲೆ ಹಾಗೂ ಬೌದ್ಧಿಕ ಸಾಮರ್ಥ್ಯ ಹೊಂದಿದ್ದಾರೆಯೇ ಎಂಬುದು ನಿಜವಾಗಿ ಯೋಚಿಸಬೇಕಾದ ವಿಚಾರವಲ್ಲವೇ? ಈ ವಿಷಯದಲ್ಲಿ ಅವರದೇ ಪಕ್ಷದ ಅದ್ವಾನಿ, ಜಶವಂತ್ ಸಿಂಗ್, ಯಶವಂತ ಸಿನ್ಹಾ ಅವರುಗಳ ಮುಂದೆ ಇವರು ಕುಬ್ಜರಾಗಿ ಕಾಣುತ್ತಾರೆ. ಆದರೂ ಸದ್ಯಕ್ಕೆ ಸ್ಪರ್ಧೆಯಲ್ಲಿ ಮೋದಿಯೇ ಬಹು ಮುಂದಿದ್ದಂತೆ ಕಾಣುತ್ತಿದೆ.

ಇದಕ್ಕೆ ಮುಖ್ಯ ಕಾರಣ, ಕಾಂಗ್ರೆಸ್ಸಿನ ಅಧೋಗತಿಗಿಳಿದ ರಾಜಕಾರಣ. ಕುಟುಂಬದ ಹಿನ್ನೆಲೆಯ ಹೊರತಾಗಿ ರಾಷ್ಟ್ರೀಯ ನಾಯಕತ್ವದ ಯಾವ ಲಕ್ಷಣ ಅಥವಾ ಸಾಮರ್ಥ್ಯವನ್ನೂ ತೋರದ ರಾಹುಲರನ್ನು ಈ ಪಕ್ಷ ತನ್ನ ಪರಮೋಚ್ಛ ನಾಯಕನೆಂದು ಘೋಷಿಸಿಕೊಂಡಿದೆ ಎಂದರೆ ರಾಜಕೀಯ ಪ್ರಬುದ್ಧತೆಯ ದೃಷ್ಟಿಯಿಂದ ಅದು ಯಾವ ಮಟ್ಟ ಮುಟ್ಟಿದೆ ಎಂಬುದನ್ನು ಸೂಚಿಸುತ್ತದೆ. ಅದರ ಹಿರಿಯ ನಾಯಕರು ಯಾವುದೇ ಆಧಾರಗಳಿಲ್ಲದೇ ಇವರ ಗುಣಗಾನ ಮಾಡುವ ಪರಿ ಯಾವುದೇ ಸಂಬಳದಾರ ವಂದಿಮಾಗಧನನ್ನು ನಾಚಿಸುವಂತಿದೆ. ಈ ನಾಯಕ ಹೊಸ ಜವಾಬ್ದಾರಿಯನ್ನು ವಹಿಸಿಕೊಂಡ ಸಂದರ್ಭದಲ್ಲಿ ಮಾಡಿದ 'ಭರ್ಜರಿ' ಭಾಷಣದಲ್ಲಿ ಜನರ ಮುಂದೆ ಇಟ್ಟಿದ್ದಾದರೂ ಏನು? ಅಡಿಗೆ ಮನೆಗೆ ಮೂರು ಹೆಚ್ಚುವರಿ ಸಿಲಿಂಡರುಗಳ ಮತ್ತು ಜೈನರಿಗೆ ಅಲ್ಪಸಂಖ್ಯಾತರೆಂಬ ವಿಶೇಷ ಸವಲತ್ತುಗಳ ಸ್ಥಾನಮಾನದ ಆಮಿಷಗಳು. ಕಳೆದ ಅರವತ್ತೈದು ವರ್ಷಗಳ ರಾಜಕಾರಣದ ಅದೇ ಹಳೇ ಸರಕು. ಕಾಂಗ್ರೆಸ್ ನಿಜವಾಗಿ ದಿಕ್ಕುಗಾಣದಾಗಿದೆ.

ಇದರ ಸ್ಥಳೀಯ ಪರಿಣಾಮಗಳೇ ನಮ್ಮ ಸಿದ್ಧರಾಮಯ್ಯನವರು ಒಂದಾದರಮೇಲೊಂದು ನಡೆಸುತ್ತಿರುವ ಜಾತಿ ಸಮ್ಮೇಳನಗಳು. ಅರಸು, ಬಂಗಾರಪ್ಪ, ಮೊಯ್ಲಿ, ಧರಂಸಿಂಗ್ ಮತ್ತು ತಮ್ಮಂಥವರು ಮುಖ್ಯ ಮಂತ್ರಿಗಳಾಗಲು ಕಾಂಗ್ರೆಸ್ಸಿನಲ್ಲಿ ಮಾತ್ರ ಸಾಧ್ಯವೆಂದು ಅವರು ಹೇಳಿದ್ದಾರೆ. ಸಿದ್ಧರಾಮಯ್ಯ ಕಾಂಗ್ರೆಸ್ ಸೇರುವ ಮುನ್ನ ಈ ಮಹನೀಯರುಗಳ ರಾಜಕಾರಣದ ಬಗ್ಗೆ ಅವರು ಆಡುತ್ತಿದ್ದ ಮಾತುಗಳನ್ನು ನೆನಪಿಸಿಕೊಂಡರೆ ಈ ಮಾತುಗಳ ಹಿಂದಿರುವುದು ಸಮಯಸಾಧಕತನ ಮಾತ್ರ ಎಂಬುದು ಅರಿವಾದೀತು. ಸಿದ್ಧರಾಮಯ್ಯ ಮುಖ್ಯಮಂತ್ರಿಯಾದಾಗ ಅವರನ್ನು ಸ್ವಲ್ಪವಾದರೂ ಬಲ್ಲವರಾಗಿದ್ದ ನಮ್ಮಂತವರಿಗೆ ಅವರು ರಾಜ್ಯ ರಾಜಕಾರಣಕ್ಕೆ ಹೊಸ ಘನತೆ ಮತ್ತು ಮರ್ಯಾದೆಯನ್ನು ತಂದಾರು ಎಂಬ ಆಸೆಯಿತ್ತು. ಆದರೆ ಅವರು ಇತ್ತೀಚಿನ ಎರಡು ಲೋಕಸಭಾ ಉಪಚುನಾವಣೆಗಳು ಮತ್ತು ಮೊನ್ನೆಯ ಸಂಪುಟ ವಿಸ್ತರಣೆಯ ಸಂದರ್ಭದಲ್ಲಿ ತಮಗೆ ತಾವೇ ಮೋಸಮಾಡಿಕೊಂಡ ರಾಜಕಾರಣದ ರೀತಿ ಅಂತಹ ಆಸೆಯನ್ನು ಕಮರಿಸಿಬಿಟ್ಟಿದೆ. ಅವರು ಅಪ್ಪಟ ಕಾಂಗ್ರೆಸ್ಸಿಗರಾಗಿಬಿಟ್ಟಿದ್ದಾರೆ. ಹಾಗೆ ಆದಾಗ ಮಾತ್ರ ಮುಖ್ಯಮಂತ್ರಿ ಆಗಲು ಸಾಧ್ಯವೆಂದು ಅವರೇ ಹೇಳಿಕೊಂಡೂಬಿಟ್ಟಿದ್ದಾರಲ್ಲಾ! ಹಾಗಿರುವಾಗ ಅವರು ಆ ಅಧಿಕಾರವನ್ನು ಪಣಕ್ಕೊಡ್ಡಿ ಧೀರ ರಾಜಕಾರಣ ಮಾಡುವ ಗೈರತ್ತಾದರೂ ಅವರಿಗೆ ಎಲ್ಲಿಂದ ಬಂದೀತು?

ಹಾಗೆ ಅಧಿಕಾರವನ್ನು ಪಣಕ್ಕೊಡ್ಡುವ ಧೈರ್ಯವಿರುವುದೆಂದರೆ ಸದ್ಯಕ್ಕೆ ಅರವಿಂದ ಕೇಜ್ರಿವಾಲರಿಗೆ ಮಾತ್ರವೆಂದು ಕಾಣುತ್ತದೆ. ಅದಕ್ಕೆ ಕಾರಣ, ಅವರು ನಂಬಿರುವುದು ಅಧಿಕಾರ ರಾಜಕಾರಣವನ್ನಲ್ಲ. ಬದಲಿಗೆ, ಜನತೆಯ ರಾಜಕಾರಣವನ್ನು. ಹಾಗಾಗಿಯೇ ಅವರು ಜನತೆಯ ಹಿತದೃಷ್ಟಿಯಿಂದ ತಮ್ಮ ರಾಜ್ಯದ ಪೋಲಿಸ್ ವ್ಯವಸ್ಥೆಯಲ್ಲಿ ಆಗಬೇಕಾದ ಬದಲಾವಣೆಗಾಗಿ ಜನತೆಯೊಂದಿಗೆ ಬೀದಿಯಲ್ಲಿ ಅಹೋರಾತ್ರಿ ಧರಣಿ ಕೂತರು. ತಾವು ಮುಖ್ಯಮಂತ್ರಿ ಎಂಬ ಸ್ಥಾನ ಮರ್ಯಾದೆಯ ಪ್ರಶ್ನೆ ಅವರನ್ನು ಕಾಡಲಿಲ್ಲ. ಏಕೆಂದರೆ ಇಂತಹ ಪ್ರಶ್ನೆಗಳೆಲ್ಲ, ಈಗ ಜಾರಿಯಲ್ಲಿದ್ದು ಜನತೆಗೆ ಕಂಟಕಪ್ರಾಯವಾಗಿರುವ ಅಧಿಕಾರ ರಾಜಕಾರಣ ಸೃಷ್ಟಿಸಿರುವ ಪರಿಕಲ್ಪನೆಗಳು. ಇಂತಹುದೇ ಇನ್ನೊಂದು ಜಡವಾದ ಪರಿಕಲ್ಪನೆಯೆಂದರೆ ಕಾನೂನಿನ ಆಳ್ವಿಕೆ.(Rule of Law) ಆದರೆ ಈ ಪರಿಕಲ್ಪನೆ ಅಥವಾ ಬಹಳ ಕುಪ್ರಸಿದ್ಧವಾಗಿರುವ ಕಾನೂನು ತನ್ನ ದಾರಿಯಲ್ಲಿ ನಡೆಯಲು ಬಿಡಬೇಕು ('Let law have its own course') ಎಂಬ 'ನಾಣ್ನುಡಿ'ಗಳು ವಾಸ್ತವದಲ್ಲಿ ಜನತೆಯ ವಿರುದ್ಧವೇ ಕೆಲಸ ಮಾಡುತ್ತಿರುವಾಗ (ದೆಹಲಿಯಲ್ಲಿ ಕಾನೂನು ಮಂತ್ರಿ ಸೋಮನಾಥ ಭಾರ್ತಿ ಕಂಡುಕೊಂಡದ್ದೂ ಅದನ್ನೇ) ಅವುಗಳನ್ನು ಪ್ರಶ್ನಿಸದೇ ಅವನ್ನು ಜನತೆಯ ಪರವಾಗಿ ಮರು ವಿನ್ಯಾಸ ಗೊಳಿಸು ವುದಾದರೂ ಹೇಗೆ? ಆಗ ಕೆಲವು ಹಳೆಯ 'ಮರ್ಯಾದೆ'ಗಳು ಉಲ್ಲಂಘಿಸಲ್ಪಡುತ್ತವೆ. ಕೆಲವು ರೂಢಿಗಳು ಕುಸಿದು ಬೀಳುತ್ತವೆ.

ಇಲ್ಲಿ ಮುಖ್ಯ ಪ್ರಶ್ನೆ, ಇದನ್ನೆಲ್ಲ ಏಕೆ ಮತ್ತು ಹೇಗೆ ಮಾಡಲಾಗುತ್ತದೆ ಎಂಬುದೇ ಆಗಿದೆ. ಏಕೆ ಮಾಡಲಾಗುತ್ತದೆ ಎಂದರೆ, ಪ್ರಜಾಪ್ರಭುತ್ವ ಎಂದರೆ ಪ್ರತಿನಿಧಿಗಳ, ಅಧಿಕಾರಿಗಳ, ಪೋಲೀಸರ ಪ್ರಭುತ್ವವಾಗಿ ಹೋಗಿರುವುದನ್ನು ಪ್ರಜೆಗಳದ್ದೇ ಪ್ರಭುತ್ವವನ್ನಾಗಿ ಮಾಡುವ ತುರ್ತು ಅಗತ್ಯವಿದೆ. ತಡ ಮಾಡಿದರೆ ಅನಾಹುತವಾಗುವ ಎಲ್ಲ ಸೂಚನೆಗಳು ಕಾಣುತ್ತಿವೆ. ಇನ್ನು ಹೇಗೆ ಮಾಡಲಾಗುತ್ತಿದೆಯೆಂದರೆ, ಅಹಿಂಸಾತ್ಮಕ ಮತ್ತು ಸವಿನಯ ಕಾನೂನು ಭಂಗದ ಮೂಲಕ. ಹಾಗೆ ಮಾಡಿದಾಗ ತಿಂದ ನೀರು ಅಲ್ಲಾಡದಂತೆ ಕೂತಿದ್ದಂತೆಯೇ ಬದಲಾವಣೆ ಬಯಸುವ ಜನಕ್ಕೆ ಗಾಬರಿಯಾಗುತ್ತದೆ, ಆತಂಕವಾಗುತ್ತದೆ. ಅದೇ ವೇಳೆ ಪ್ರಜೆಗಳ ಹೆಸರಿನಲ್ಲಿ ಪ್ರಭುತ್ವ ನಡೆಸುತ್ತಿರುವ ಸಾಂಪ್ರದಾಯಿಕ ರಾಜಕಾರಣಿಗಳಿಗೆ, ಅವರ ಚೇಲಾ ಅಧಿಕಾರಿ ಮತ್ತು ಪೋಲೀಸರಿಗೂ ಭಯ–ಆತಂಕವಾಗುವುದು ಸಹಜ.

ಈ ದೃಷ್ಟಿಯಿಂದ ಆಂ ಆದ್ಮಿ ಪಕ್ಷ ದೆಹಲಿಯಲ್ಲಿ ನಡೆಸಿದ ಧರಣಿಗೆ ರಾಷ್ಟ್ರಾದ್ಯಂತ ಈ ವರ್ಗಗಳಿಂದ ಬಂದ ಪ್ರತಿಕ್ರಿಯೆ ಯಾರಿಗೂ ಆಶ್ಚರ್ಯವನ್ನುಂಟುಮಾಡದು. ಈ ಶಕ್ತಿಗಳು ಆಂ ಆದ್ಮಿ ಪಕ್ಷಕ್ಕೆ ಸರ್ಕಾರ ನಡೆಸುವುದು ಗೊತ್ತಿಲ್ಲ ಎಂದೆಲ್ಲ ಪ್ರಚಾರ ಮಾಡುತ್ತಿವೆ. ಆದರೆ ಜನತೆಯ ಬಳಿ ಐದು ವರ್ಷಗಳಿಗೊಮ್ಮೆ ಮಾತ್ರ ಹೋಗುವ ಆರಾಮ ರಾಜಕಾರಣದಿಂದ ಉದ್ಭವವಾದ ರೂಢಿ–ಸಂಪ್ರದಾಯ–ವಿಧಾನ ಹಾಗೂ ಅಡಳಿತ ಮೌಲ್ಯಗಳಾಚೆಗೆ ದೃಷ್ಟಿ ಹಾಯಿಸಲಾಗದಷ್ಟು ತಮ್ಮ ಜನದೂರ ಸುಖಗಳಲ್ಲಿ ಜಡವಾಗಿ ಹೋಗಿರುವ ಇವರಿಗೆ ಸರ್ಕಾರ ಕೂಡ ಒಂದು ಜನಾಂದೋಲನದಂತೆ ನಡೆಯಬಲ್ಲುದು ಎಂಬ ಕಲ್ಪನೆಯಾದರೂ ಹೇಗೆ ಸಾಧ್ಯ?

ಈ ಧರಣಿಯಿಂದ ಆಂ ಆದ್ಮಿ ಪಕ್ಷ ಸಾಕಷ್ಟು ಜನಬೆಂಬಲ ಕಳೆದುಕೊಂಡಿದೆ ಎಂದು ಹೇಳಲಾಗುತ್ತಿದೆ. ಹಾಗೆ ಆಗಿದ್ದರೆ ಅದು ಒಳ್ಳೆಯದಕ್ಕೇ ಆಗಿದೆ. ಯಾವುದೇ ಪ್ರಶ್ನೆ, ಉಲ್ಲಂಘನೆಗಳನ್ನು ನಿರೀಕ್ಷಿಸದೆ ಬದಲಾವಣೆಯ ಬಗ್ಗೆ ಭೋಳೆ ಭೋಳೆಯಾಗಿ ಯೋಚಿಸಿ ಈ ಪಕ್ಷವನ್ನು ಬೆಂಬಲಿಸಿದ್ದವರು ಪಕ್ಷದಿಂದ ದೂರವಾಗಿದ್ದಲ್ಲಿ ಪಕ್ಷದ ಸಮರ್ಥ ಬೆಳವಣಿಗೆಯ ದೃಷ್ಟಿಯಿಂದ ಒಳ್ಳೆಯದೇ. ಹಾಗೆ ನೋಡಿದರೆ ಪಕ್ಷ ಈಗ ಕೆಲ ಕಾಲದ ತನ್ನ ಸುಲಭ ಜನಪ್ರಿಯತೆಯಲ್ಲಿ ಗಳಿಸಿಕೊಂಡಿದ್ದ ಅನಗತ್ಯ ಚರ್ಬಿಯನ್ನು ಕಳೆದುಕೊಂಡು ಮತ್ತೆ ಆರೋಗ್ಯಕರ ರೂಪ ಮತ್ತು ಮನಸ್ಸನ್ನು ಪಡೆದಂತಾಗಿದೆ. ಈ ಚರ್ಬಿಯಿಂದ ಪಕ್ಷ ಕೆಲ ಕಾಲ ಮೈಮರೆತಿತ್ತೆಂಬುದೂ ನಿಜ. ಸೋಮನಾಥ ಭಾರ್ತಿ ಮತ್ತು ಕುಮಾರ್ ವಿಶ್ವಾಸ್‌ರಂತಹ ನಾಯಕರ ಮಿತಿ ಮೀರಿದ ಉತ್ಸಾಹ ಮತ್ತು ಮಾತುಗಾರಿಕೆ ಒಳ್ಳೆಯ ಸೂಚನೆಗಳಾಗಿರಲಿಲ್ಲ. ದೊಡ್ಡ ಕೆಲಸ ಮಾಡಲು ಹೊರಟಿರುವ ಜನ ದೊಡ್ಡದಾಗಿ ಯೋಚಿಸಬೇಕು. ಸಣ್ಣತನ, ಸಣ್ಣ ಮಾತು ಸಲ್ಲ.

**–ಸಂಪಾದಕ**

# ಅಸಮಾನತೆಯೊಂದಿಗೆ ಮುಖಾಮುಖಿ: ಮೈಸೂರಿನಲ್ಲಿ ವಿಚಾರ ಸಂಕಿರಣ



**ದೇ**ಶದಲ್ಲಿ ಅಸಮಾನತೆಯನ್ನು ನಿವಾರಿಸಬೇಕಾದರೆ ಈವರೆಗೆ ಪ್ರಯತ್ನಿಸಲಾದ ಬಡತನ ನಿವಾರಣೆಯ ರಾಜಕಾರಣದೊಂದಿಗೆ ಶ್ರೀಮಂತಿಕೆಯ ನಿವಾರಣೆಯ ರಾಜಕಾರಣವನ್ನೂ ಆರಂಭಿಸಬೇಕಾದ ಅಗತ್ಯವಿದೆ ಎಂದು ಸಮಾಜವಾದಿ ಚಿಂತಕ ಡಿ.ಎಸ್. ನಾಗಭೂಣ ಹೇಳಿದರು. ಅವರು ಜನವರಿ ೧೨ರಂದು ಮೈಸೂರಿನಲ್ಲಿ ಸಮಾಜವಾದಿ ಅಧ್ಯಯನ ಕೇಂದ್ರ ಟ್ರಸ್ಟ್ ಚಾಮರಾಜನಗರದಲ್ಲಿ ಸಮಾಜವಾದಿ ಚಿಂತನೆಯನ್ನು ಬೆಳೆಸಿದ ಜಿ. ಶ್ರೀನಿವಾಸ ಕುಮಾರ್ ಅವರ ನೆನಪಿನಲ್ಲಿ ಏರ್ಪಡಿಸಿದ್ದ 'ಅಸಮಾನತೆಯೊಂದಿಗೆ ಮುಖಾಮುಖಿ: ಇಂದಿನ ಸವಾಲುಗಳು' ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡುತ್ತಿದ್ದರು.

ಆಧುನಿಕ ನಾಗರೀಕತೆಯ ಮುಖ್ಯ ಆಶಯ ಸಮಾನತೆ ಎಂದು ಭಾವಿಸಿ ಸಮಾನತೆಯ ಬಗ್ಗೆ ಒಂದು ನಿರಪೇಕ್ಷ ಪರಿಕಲ್ಪನೆಯನ್ನು ಕಟ್ಟಿಕೊಂಡು ರಾಜಕಾರಣ ಮಾಡಿದ ಸಮಾಜವಾದ, ಗಾಂಧಿ ಅದೇ ಆಧುನಿಕ ನಾಗರೀಕತೆಯಲ್ಲಿ ಗುರುತಿಸಿದ ಮನುಷ್ಯನ ಮಿತಿ ಇಲ್ಲದ ಸುಖದ ಹಂಬಲದ ಲಕ್ಷಣವನ್ನು ನಿರ್ಲಕ್ಷಿಸಿದ್ದೇ ಅದರ ಜಾಗತಿಕ ಹಿನ್ನೆಡೆಗೆ ಕಾರಣವಾಗಿದೆ ಎಂದು ನಾಗಭೂಷಣ ವಿಶ್ಲೇಷಿಸಿದರು. ಈ ಹಿನ್ನೆಲೆಯಲ್ಲಿಯೇ ಲೋಹಿಯಾ ಸಮಾನತೆಯನ್ನು 'ಒಳಗಿನ ಪ್ರಶಾಂತಿ ಮತ್ತು ಹೊರಗಿನ ಬಂಧುತ್ವ'ದ ಸಾಧನೆ ಎಂದು ವೈಯುಕ್ತಿಕ ಮತ್ತು ಸಾಮಾಜಿಕ ನೆಲೆಗಳೆರೆಡರಲ್ಲೂ ವ್ಯಾಖ್ಯಾನಿಸಿ ಅದನ್ನು 'ಸಮತೆ' ಎಂದು ಕರೆದಿದ್ದರು ಎಂಬುದನ್ನು ನೆನಪಿಸಿ, ಇಂದು ಇಂತಹ ಸಮತೆಯನ್ನು ಸಾಧಿಸಬಲ್ಲ ರಾಜಕಾರಣದ ಅಗತ್ಯವಿದೆ ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಹಿರಿಯ ಲೇಖಕ ದೇವನೂರ ಮಹಾದೇವ ಅವರು, ಈ ಸಮತೆಯ ರಾಜಕಾರಣಕ್ಕೆ ಸ್ಥಳೀಯ ಜ್ಞಾನ ಮತ್ತು ರಾಜಕೀಯ ವಿಕೇಂದ್ರೀಕರಣ ಮೂಲ ಆಧಾರಗಳಾಗಿರಬೇಕು ಎನ್ನುತ್ತಾ, ಈ ದಿಸೆಯಲ್ಲಿ 'ಆಂ ಆದ್ಮಿ ಪಕ್ಷ' ಆಶಾಕಿರಣವಾಗಿ ಕಾಣುತ್ತಿದೆ ಎಂದರು. ಇನ್ನೋರ್ವ ಅತಿಥಿ ಕವಯತ್ರಿ ಮಲ್ಲಿಕಾ ಬಸವರಾಜು ಅವರು ಮಾತನಾಡಿ, ತಮ್ಮ ಸೋದರ ಶ್ರೀನಿವಾಸ ಕುಮಾರ್‌ರಿಂದ ಕಲಿತ ಸಮಾಜವಾದಿ ಪಾಠಗಳು ಇಂದಿನ ಜಾಗತೀಕರಣದ ಕ್ಲೇಶಗಳಿಂದ ದೂರವಿರಲು ತಮಗೆ ಸಹಾಯ ಮಾಡಿದೆ ಎಂದರು.

ಸಮಾಜವಾದಿ ಅಧ್ಯಯನ ಕೇಂದ್ರ ಟ್ರಸ್ಟಿನ ಮಹೇಶ್ ಹರವೆ ಪ್ರಾಸ್ತಾವಿಕವಾಗಿ ಮಾತನಾಡಿ ಅಧ್ಯಯನ ಕೇಂದ್ರದ ಚಟುವಟಿಕೆಗಳನ್ನು ಪರಿಚಯ ಮಾಡಿಕೊಟ್ಟರು. ದೇವಾನಂದ್ ಮತ್ತು ಸಂಗಡಿಗರು ಕೆಲವು ತತ್ವ ಪದಗಳನ್ನು ಹಾಡಿದರು.

**(ವರದಿ: ಬಿ. ರಾಜೇಶ್)**

## ನಿಮ್ಮ ಮಾತು

ಪ್ರಿಯ ಸಂಪಾದಕರೇ,

ಜನವರಿ ೨೦೧೪ರ ನಿಮ್ಮ ಸಂಪಾದಕೀಯದಲ್ಲಿ 'ಆಂ ಆದ್ಮಿ' ಪಕ್ಷದ ಸಾಧನೆಯ ಬಗ್ಗೆ ಒಂದಿಷ್ಟು ಹೆಚ್ಚೆನಿಸುವಷ್ಟು ಹೊಗಳಿದ್ದೀರಿ. ದೆಹಲಿಯ ರಾಜಕೀಯ ಚಿತ್ರಣ ಇಡೀ ರಾಷ್ಟ್ರದ ಚಿತ್ರಣವಲ್ಲ. ದೆಹಲಿ ಒಂದು ಕಾಸ್ಮೋಪಾಲಿಟನ್ ನಗರ. ಒಂದು ರೀತಿಯಲ್ಲಿ ಅಲ್ಲಿ ನಡೆದಿರುವ ಚುನಾವಣೆ ಒಂದು ದೊಡ್ಡ ಮಹಾನಗರಪಾಲಿಕೆಯ ಚುನಾವಣೆಯಂತೆ. ಜನರು ಸ್ಥಳೀಯ ಅವಶ್ಯಕತೆಗೆ ಅನುಗುಣವಾಗಿ ತಮ್ಮ ಸಮೀಪದ ವ್ಯಕ್ತಿಯನ್ನು ಆರಿಸಿದ್ದಾರೆ. ನೀವು ಬರೆದಂತೆ ಬದಲಾವಣೆ ಗಾಳಿ ನಿಜಕ್ಕೂ ಬೀಸಿದ್ದರೆ, ಬಿ.ಜೆ.ಪಿ ಅತಿ ದೊಡ್ಡ ಪಕ್ಷವಾಗಿ ಹೊಮ್ಮುತ್ತಿರಲಿಲ್ಲ.

ಅದು ಯಾವ ಪಕ್ಷವನ್ನು ವಿರೋಧಿಸುತ್ತಿತ್ತೋ ಅದೇ ಸಮಯಸಾಧಕ ಕಾಂಗ್ರೆಸ್ಸನ್ನು ನೆಚ್ಚಿ ಸರ್ಕಾರ ರಚಿಸಿದ್ದು ಒಂದು ದುರಂತ. ಇಷ್ಟು ಬೇಗ ಆ ಪಕ್ಷವನ್ನು ಅಟ್ಟಕ್ಕೇರಿಸಿ ಬರೆಯುವುದು ಬೇಡವಿತ್ತೇನೋ. ಇರಲಿ, ನಾನೂ ಆಶಾವಾದಿಯೇ. ಕಾಯೋಣ. ಆಂ ಆದ್ಮಿ ಪಕ್ಷಕ್ಕೆ ಶುಭವಾಗಲಿ.

**–ಡಾ. ಎಚ್.ಎಸ್. ರುದ್ರೇಶ್**, ಶಿವಮೊಗ್ಗ

ಅಣ್ಣಾ ಹಜಾರೆ ಮತ್ತು ಅರವಿಂದ ಕೇಜ್ರಿವಾಲರ ಹೋರಾಟಕ್ಕೆ ಕನ್ನಡ ಬರಹ ಜಗತ್ತಿನ ತಮ್ಮ ಸಮಕಾಲೀನರಲ್ಲಿ ಮತ್ತು ಸಮಾನ ಮನಸ್ಕ ಗುಂಪಿನಲ್ಲಿ ನೇರವಾಗಿ ಮತ್ತು ತಾತ್ವಿಕವಾಗಿ ಬೆಂಬಲ ಕೊಡುತ್ತಾ ಬಂದವರು ತಾವೊಬ್ಬರೇ ಅನಿಸುತ್ತದೆ. ಕನ್ನಡದ ಬಹುತೇಕ ಎಲ್ಲ ಸೋ ಕಾಲ್ಡ್ ಚಿಂತಕರು ಕೇಜ್ರಿವಾಲ್ ಮತ್ತವರ ಸಂಗಡಿಗರ ಬಗ್ಗೆ ಅಪನಂಬಿಕೆ ವ್ಯಕ್ತಪಡಿಸುತ್ತಲೇ ಬರುತ್ತಿದ್ದಾಗ ತಾವು ಏಕಾಂಗಿಯಾಗಿ ಅವರ ಹೋರಾಟದ ಬಗ್ಗೆ 'ಹೊಸ ಮನುಷ್ಯ'ದಲ್ಲಿ ಪ್ರೋತ್ಸಾಹಕರವಾಗಿ ಬರೆಯುತ್ತಾ ಬಂದಿದ್ದಿರಿ. ಇದು ತಮ್ಮ ವಾಸ್ತವಮುಖಿ ಮತ್ತು ಆದರ್ಶ ನಿಲುವುಗಳನ್ನು ಎತ್ತಿ ತೋರಿಸುತ್ತದೆ.

ಕರ್ನಾಟಕದ ಪ್ರಗತಿಪರರು ಎಂದುಕೊಂಡಿರುವ ಬಹುತೇಕರು ನಿಮ್ಮಂತಹ ಆಲೋಚನೆ ಮತ್ತು ಬದ್ಧತೆಯನ್ನು ಇಟ್ಟುಕೊಂಡಿದ್ದೇ ಆಗಿದ್ದರೆ ಕರ್ನಾಟಕದ ರಾಜಕೀಯ ಕಳೆದ ಐದಾರು ವರ್ಷಗಳಲ್ಲಿ ಈ ಮಟ್ಟಕ್ಕೆ ಕುಸಿಯುತ್ತಿರಲಿಲ್ಲ. ಇಲ್ಲಿಯೂ ಒಂದು ಪ್ರಬಲ ಪರ್ಯಾಯವನ್ನು ಕಟ್ಟುವ ಅವಕಾಶವನ್ನು ತಮ್ಮ ಸ್ವಾರ್ಥ, ನಿಷ್ಕ್ರಿಯತೆ, ಬಾಲಬಡುಕತನ ಮತ್ತು ಸಿನಿಕತೆಗಳಿಂದಲೇ ಇವರೆಲ್ಲ ಹಾಳು ಮಾಡಿಕೊಂಡರು ಮತ್ತು ಚಾರಿತ್ರಿಕ ಅವಕಾಶವೊಂದನ್ನು ಮಣ್ಣುಗೂಡಿಸಿದರು ಎಂದೇ ಹೇಳಬೇಕು.

ತಮ್ಮ ನಿಷ್ಠುರತೆ ಮತ್ತು ಆಡಲೇಬೇಕಾದ ಮಾತುಗಳಿಂದಾಗಿ ತಾವು ನಮ್ಮ ಕನ್ನಡದ ಮುಖ್ಯವಾಹಿನ ಮಾಧ್ಯಮಗಳಿಂದ, ವಿಶೇಷವಾಗಿ ರಾಜ್ಯ ಮಟ್ಟದ ದಿನಪತ್ರಿಕೆಗಳಿಂದ ಒಂದು ರೀತಿಯಲ್ಲಿ ಬಹಿಷ್ಕೃತರಾಗಿರುವುದು ಇವೊತ್ತಿನ ಕನ್ನಡ ಚಿಂತನ ಲೋಕದ ದುರಂತವನ್ನು ತೋರಿಸುತ್ತದೆ. ಅದು ಆದಷ್ಟು ಬೇಗ ಬದಲಾಗಲಿ ಮತ್ತು ದೆಹಲಿಯಲ್ಲಿ ನಡೆದ ಚಾರಿತ್ರಿಕ ವಿದ್ಯಮಾನಗಳು ನಮ್ಮ ಮಾಧ್ಯಮಗಳನ್ನೂ ಸೇರಿದಂತೆ ಎಲ್ಲರನ್ನೂ ಸಕಾರಾತ್ಮಕ ಬದಲಾವಣೆಗೆ ಪ್ರೇರೇಪಿಸಲಿ ಎಂದು ಆಶಿಸುತ್ತೇನೆ.

**–ರವಿಕೃಷ್ಣಾ ರೆಡ್ಡಿ**, ಬೆಂಗಳೂರು

'ಹೊಸ ಮನುಷ್ಯ' ನಮಗೆಲ್ಲ ನೆಚ್ಚಿನ ಪತ್ರಿಕೆ. ವಿಶೇಷಾಂಕವಂತೂ ಒಂದೇ ಒಂದು ಬರಹವೂ ಬಿಡದಂತೆ ಓದಿಸಿಕೊಂಡಿತು.

**–ಸುನಂದಾ ಪ್ರಕಾಶ್ ಕಡಮೆ,** ಹುಬ್ಬಳ್ಳಿ


ಲೈಂಗಿಕ ದೌರ್ಜನ್ಯಗಳನ್ನು ಕುರಿತ ನಿಮ್ಮ ಸಂಪಾದಕೀಯ ಮುಖ್ಯವಾಹಿನಿ ಮಾಧ್ಯಮಗಳ ಸುದ್ದಿ ಅಬ್ಬರದ ಮಧ್ಯೆ ಕಳೆದೇ ಹೋಗಿದ್ದ ನಮ್ಮ ವಿವೇಕವನ್ನು ಎಚ್ಚರಗೊಳಿಸಿದೆ ಎಂದೇ ಹೇಳಬೇಕು. ಇಂದಿನ ಸಂದರ್ಭದಲ್ಲಿ ದಿಟ್ಟ ಮತ್ತು ಸ್ಪಷ್ಟ ಎಂದೇ ಕರೆಯಬೇಕಾದ ನಿಮ್ಮ ಮಾತುಗಳು ಗಂಡು–ಹೆಣ್ಣಿನ ಸಂಬಂಧದ ಸೂಕ್ಷ್ಮ ಸಮತೋಲನ ಮತ್ತು ಆರೋಗ್ಯ ಕುರಿತು ಇಂದು ನಾವು ಮರುಚಿಂತಿಸುವಂತೆ ಮಾಡಿವೆ.

**–ಎಲ್. ಚಂದ್ರಶೇಖರ್**, ದಾವಣಗೆರೆ

ಮರೆತೇ ಹೋಗಿದ್ದ ಸಮಾಜವಾದಿ ಸೋಗಾಲ ನಾಗಭೂಷಣರನ್ನು ಹುಡುಕಿ ಪರಿಚಯಿಸಿದ್ದಕ್ಕಾಗಿ ನಮಗೆ ಅನಂತಾನಂತ ಧನ್ಯವಾದಗಳು.

**–ಎಂ. ನಾಗರಾಜು,** ಮೈಸೂರು

## ಭದ್ರಾವತಿಯಲ್ಲಿ 'ಜಿಎಸ್ಎಸ್ ನೆನಪು'



**ಭ**ದ್ರಾವತಿಯ ಸರ್ ಎಂ.ವಿ. ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಶಿವಮೊಗ್ಗದ ಲೋಹಿಯಾ ಜನ್ಮ ಶತಾಬ್ದಿ ಪ್ರತಿಷ್ಠಾನದ ಸಹಯೋಗದೊಂದಿಗೆ 'ಜಿ.ಎಸ್.ಶಿವರುದ್ರಪ್ಪ : ಒಂದು ನೆನಪು' ಎಂಬ ಒಂದು ದಿನದ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು. ವಿಚಾರ ಸಂಕಿರಣವನ್ನು ಉದ್ಘಾಟಿಸಿದ ಹಿರಿಯ ಕವಿ ಸತ್ಯನಾರಾಯಣ ರಾವ್ ಅಣತಿಯವರು. ಜಿ.ಎಸ್.ಶಿವರುದ್ರಪ್ಪನವರು ಕುವೆಂಪು ಪರಂಪರೆಯ ವಾರಸುದಾರರು ಎಂದು ಹೇಳಲಾಗುವುದಾದರೂ ಅವರು ಅದನ್ನು ಕುರುಡಾಗಿ ಅನುಕರಣೆ ಮಾಡದೆ ಅದನ್ನು ಸಮಕಾಲೀನ ಹೊಸ ವಿಚಾರಗಳೊಂದಿಗೆ 'ಸರ್ವತೋಮುಖವಾಗಿ ಬೆಳೆಸಿದರು ಎಂದರು.

ಇದಕ್ಕೂ ಮೊದಲು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಸಬಿತಾ ಬನ್ನಾಡಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾಲೇಜಿನ ಪ್ರಾಂಶುಪಾಲರಾದ ಎಚ್.ಆರ್. ಶ್ರೀನಿವಾಸ್ ಅಧ್ಯಕ್ಷತೆ ವಹಿಸಿದ್ದರು.

ನಂತರ ನಡೆದ ಮೊದಲ ಗೋಷ್ಠಿಯಲ್ಲಿ 'ಆಧುನಿಕ ಕನ್ನಡ ಸಾಹಿತ್ಯ ಪರಂಪರೆ ಮತ್ತು ಜಿ.ಎಸ್.ಎಸ್.' ಎಂಬ ವಿಷಯ ಕುರಿತು ವಿಮರ್ಶಕ ಡಿ.ಎಸ್.ನಾಗಭೂಷಣ ಅವರು ಮಾತನಾಡಿ ಜಿಎಸ್ಎಸ್ ಒಬ್ಬ ಕವಿಯಾಗಿ, ವಿಮರ್ಶಕರಾಗಿ, ಸಾಹಿತ್ಯ ಮೀಮಾಂಸಕರಾಗಿ ಅಧ್ಯಾಪಕರಾಗಿ, ಸಾಹಿತ್ಯ ಆಡಳಿತಗಾರರಾಗಿ ಮತ್ತು ಸಾಮಾಜಿಕ ವ್ಯಕ್ತಿಯಾಗಿ ಹೇಗೆ ಸಮಕಾಲೀನ ಕನ್ನಡ ಸಂಸ್ಕೃತಿಯನ್ನು ಸೃಜನಶೀಲವಾಗಿ ಕಟ್ಟಿದರು ಎಂಬುದನ್ನು ಸೋದಾಹರಣವಾಗಿ ವಿವರಿಸಿದರು.

ಮಧ್ಯಾಹ್ನದ ಎರಡನೇ ಗೋಷ್ಠಿಯಲ್ಲಿ 'ಕನ್ನಡ ಕಾವ್ಯ ಮೀಮಾಂಸೆಗೆ ಜಿ.ಎಸ್.ಎಸ್ ಕೊಡುಗೆ' ಎಂಬ ವಿಷಯ ಕುರಿತು ವಿಮರ್ಶಕಿ ತಾರಿಣಿ ಶುಭದಾಯಿನಿಯವರು ಮಾತನಾಡಿ, ಕನ್ನಡ ಸಾಹಿತ್ಯ ಮೀಮಾಂಸೆಯ ತಾತ್ವಿಕ ಬೇರುಗಳನ್ನು ಆಳವಾಗಿ ಅಧ್ಯಯನ ಮಾಡಿದ್ದ ಜಿಎಸ್ಎಸ್ ಭಾರತೀಯವಲ್ಲದೆ ಪಾಶ್ಚಾತ್ಯ ಸಾಹಿತ್ಯ ಮೀಮಾಂಸೆಯ ಜೊತೆಗೆ ಅನ್ಯ ಜ್ಞಾನ ಶಿಸ್ತುಗಳಿಂದ ಸತ್ವ ಹೀರಿ ಅದು ಪರಿಪಕ್ವವಾಗಬೇಕೆಂದು ನಂಬಿ ಆ ದಿಸೆಯಲ್ಲಿ ಗಣನೀಯ ಕೊಡುಗೆ ಸಲ್ಲಿಸಿದರು ಎಂದರು.

ಸಂಜೆ ನಡೆದ ಕವಿಗೋಷ್ಠಿ ಮತ್ತು ಸಮಾರೋಪ ಸಮಾರಂಭದಲ್ಲಿ ಸತ್ಯನಾರಾಯಣರಾವ್ ಅಣತಿ, ತಾರಿಣಿ ಶುಭದಾಯಿನಿ, ದೀಪ್ತಿ ಭದ್ರಾವತಿ, ಸಬಿತಾ ಬನ್ನಾಡಿ ಹಾಗೂ ವಿದ್ಯಾರ್ಥಿ ಕವಿಗಳಾದ ಅನುಪಮಾ, ಸತೀಶ್ ಮತ್ತು ರವಿಕುಮಾರ್ ಕವಿತೆಗಳನ್ನು ವಾಚಿಸಿದರು. ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಸಮಾರೋಪದ ಮಾತುಗಳನ್ನಾಡಿದ ಕವಯತ್ರಿ ಸವಿತಾ ನಾಗಭೂಷಣ ಅವರು, ಜಿಎಸ್ಎಸ್ ಹೇಗೆ ಕಿರಿಯ ಕವಿಗಳಿಗೆ ಮಾರ್ಗದರ್ಶನ ಮಾಡುತ್ತಾ ಅವರನ್ನು ಬೆಳೆಸುವಲ್ಲಿ ಆಸಕ್ತಿ ವಹಿಸುತ್ತಿದ್ದರು ಎಂಬುದನ್ನು ತಮ್ಮದೇ ಉದಾಹರಣೆ ನೀಡುತ್ತಾ ವಿವರಿಸಿದರು. ಸುಷ್ಮಾ ಮತ್ತು ಮಂಜುನಾಥ್ ಜಿ.ಎಸ್.ಎಸ್ ಗೀತೆಗಳನ್ನು ಹಾಡಿದರು.

(ವರದಿ: **ಶಕೀಲ್ ಅಹಮದ್**)

ನಮ್ಮ ಸಮಾಜವಾದಿಗಳು

# ಕೆಚ್ಚೆದೆಯ ಹೋರಾಟಗಾರ ಎನ್ ಕಿಟ್ಟಪ್ಪ ಗೌಡರು



**ಕ**ರ್ನಾಟಕದ ಸಮಾಜವಾದಿ ಚಳವಳಿಯ ಅಗ್ರ ನಾಯಕ ಶಾಂತವೇರಿ ಗೋಪಾಲಗೌಡರಿಗೆ ಪ್ರೇರಕರೂ, ಪೋಷಕರೂ ಆಗಿದ್ದ ಗೆಳೆಯರ ಗುಂಪೇ ತೀರ್ಥಹಳ್ಳಿಯಲ್ಲಿ ಇದೆ. ಇವರೆಲ್ಲ ಪಡ್ಡೆ ಹುಡುಗರಾಗಿದ್ದಾಗಿನಿಂದ ಗೌಡರ ಸಹವರ್ತಿಗಳಾಗಿದ್ದು ಬಗೆಬಗೆಯಲ್ಲಿ ಸಹಕರಿಸಿ ಚಳವಳಿ ಮುಂದುವರೆಯಲು ಕಾರಣರಾದವರು. ಶಾಂತವೇರಿಯವರ ಅಂಥ ಸ್ನೇಹಿತರಲ್ಲೊಬ್ಬರು ನಾಗಡಿಕೇರಿ ಕಿಟ್ಟಪ್ಪ ಗೌಡರು. ಇವರಿಬ್ಬರದ್ದೂ ಸಮಾನ ಆರ್ಥಿಕ ಸ್ಥಿತಿಗತಿಯ ಹಿನ್ನೆಲೆ. ಸಮಾನ ಧ್ಯೇಯ, ಧೋರಣೆ. ಈ ಏಕವಚನದ ಗೆಳೆಯರಲ್ಲಿ ಆತ್ಮೀಯತೆಯ ಬೆಸುಗೆಯಿತ್ತು. ಸಮಾಜವಾದಿ ತತ್ವಗಳ ಕುರಿತ ಬದ್ಧತೆಯಿತ್ತು.

ಇದೀಗ ತಮ್ಮ ಜೀವಿತದ ತೊಂಭತ್ತನೇ ವರ್ಷವನ್ನು ದಾಟಿರುವ ಕಿಟ್ಟಪ್ಪ ಗೌಡರು ಮೇಗರವಳ್ಳಿಗೆ ಸಮೀಪದ ನಾಗಡಿಕೇರಿಯ ಬಡ ಗೇಣಿದಾರ ಪುಟ್ಟಪ್ಪ ಗೌಡ ಮತ್ತು ಗಿಡ್ಡಮ್ಮನವರ ಮಗನಾಗಿ ಹುಟ್ಟಿದವರು. ಪ್ರೌಢಶಾಲೆಯ ಓದಿಗಾಗಿ ತೀರ್ಥಹಳ್ಳಿಗೆ ಬಂದಾಗ ಅಲ್ಲಿ ಶಾಂತವೇರಿಯವರ ಸಹಪಾಠಿಯಾದರು. ಅನೇಕ ಸಾಹಿತಿ, ರಾಜಕಾರಣಿಗಳಿಗೆ ವಿದ್ಯಾಗುರುಗಳಾಗಿದ್ದ ಕಮಕೋಡು ನರಸಿಂಹ ಶಾಸ್ತ್ರಿಗಳು ಇವರಿಗೂ ಅಧ್ಯಾಪಕರಾಗಿ ದೊರೆತರು. ಬರೀ ಮೇಷ್ಟ್ರಲ್ಲ, ಮಾರ್ಗದರ್ಶಕರು. ಅವರು ವಿದ್ಯಾರ್ಥಿಗಳಲ್ಲಿ ದೇಶಭಕ್ತಿಯನ್ನು ಬಿತ್ತಿದರು. ಸ್ವಾತಂತ್ರ್ಯ ಹೋರಾಟದ ಕಿಚ್ಚನ್ನು ಹೊತ್ತಿಸಿದರು.

ಕಿಟ್ಟಪ್ಪ ಗೌಡರು ಈ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವಾಗಲೇ ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಗೆ ಧುಮುಕಿ ಜೈಲು ಶಿಕ್ಷೆ ಅನುಭವಿಸಿದ್ದು. ಆರ್ಥಿಕ ತೊಂದರೆಯಿಂದಾಗಿ ಒಂದು ವರ್ಷ ವ್ಯಾಸಂಗ ಮುಂದೆ ಸಾಗಲಿಲ್ಲ. ನಂತರ ಶಿವಮೊಗ್ಗದಲ್ಲಿ ಇಂಟರ್ ಮುಗಿಸಿ ನಂತರಗ ಬೆಂಗಳೂರಿನ ಕೃಷಿ ಕಾಲೇಜಿಗೆ ಸೇರಿಕೊಂಡರು. ಗೆಳೆಯ ಗೋಪಾಲಗೌಡರ ಕರೆಯ ಮೇರೆಗೆ ಓದು ಬಿಟ್ಟು ಶಿವಮೊಗ್ಗೆಗೆ ಹಿಂದಿರುಗಿ ಬ್ರಿಟೀಷರ ವಿರುದ್ಧದ ಹೋರಾಟದಲ್ಲಿ ತೊಡಗಿಕೊಂಡರು. ಒಂದು ವರ್ಷದ ನಂತರ ಮೈಸೂರು ಮಹಾರಾಜ ಕಾಲೇಜು ಸೇರಿಕೊಂಡು ೧೯೫೦ರಲ್ಲಿ ಬಿ.ಎ. ಮುಗಿಸಿ ತಮ್ಮೂರು ಮೇಗರವಳ್ಳಿಯಲ್ಲಿ ಅಧ್ಯಾಪಕ ವೃತ್ತಿ ಆರಂಭಿಸಿದರು. ತದ ನಂತರದಲ್ಲೇ ಬಡ್ತಿ ಪಡೆದು ಮಾಳೂರು ಪ್ರೌಢಶಾಲೆಯ ಸ್ಥಾಪಕ ಮುಖ್ಯೋಪಾಧ್ಯಾಯರಾಗಿ ಸುಧೀರ್ಘ ಕಾಲ ಅಲ್ಲಿಯೇ ವೃತ್ತಿ ನಿರತರಾಗಿದ್ದು, ೧೯೭೮ರಲ್ಲಿ ನಿವೃತ್ತರಾದರು. ಸಮಾಜವಾದಿ ಧುರೀಣರಾದ ಕಡಿದಾಳು ಶಾಮಣ್ಣ, ಹುಗಳವಳ್ಳಿ ಸುರೇಂದ್ರ ಮುಂತಾದವರು ಗೌಡರ ಶಿಷ್ಯ ಸಮೂಹದಲ್ಲಿ ಸೇರಿದ್ದಾರೆ. ಶಾಲೆ ಬಿಟ್ಟು ಜೀತ ಮಾಡುತ್ತಿದ್ದ ಬಡವರ ಮಕ್ಕಳನ್ನು ಹರಿಜನ ಗಿರಿಜನ ಹುಡುಗರನ್ನು ಕರೆತಂದು ಶುಲ್ಕ ಕಟ್ಟಿ ಶಾಲೆಗೆ ಸೇರಿಸಿಕೊಂಡು ಗೌಡರು ಶಿಕ್ಷಣ ಕೊಡಿಸಿದ್ದಿದೆ. ರಾಜ್ಯ ಸರ್ಕಾರ ಅವರಿಗೆ ಶ್ರೇಷ್ಠ ಶಿಕ್ಷಕ ಪ್ರಶಸ್ತಿ ನೀಡಿದೆ. ಹೈಸ್ಕೂಲು ಅಧ್ಯಾಪಕರಾಗಿದ್ದೂ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್‌ನ ಸದಸ್ಯರಾಗಿದ್ದರು. ಇವೆಲ್ಲ ಅವರ ಶಿಕ್ಷಣ ತಜ್ಞತೆಗೆ ಸಂದ ಗೌರವಗಳಾಗಿವೆ.

ಸರಕಾರದ ಒಳ್ಳೆಯ ನೌಕರಿಯಲ್ಲಿದ್ದ ಗೌಡರಿಗೆ ಸ್ಥಿತಿವಂತ ಕನ್ಯಾಪಿತೃಗಳಿಂದ' ಬಹಳ ಬೇಡಿಕೆ ಇದ್ದರೂ, ತಲೆಮಾರುಗಳ ಹಿಂದೆ ಮನೆಯ ಹೆಣ್ಣು ಮಗಳು ಮದುವೆಗೆ ಮೊದಲೇ ಗರ್ಭಿಣಿಯಾಗಿದ್ದಳೆಂಬ ಕಾರಣಕ್ಕೆ ಕಳಂಕಿತರಾಗಿ ಜಾತ್ಯಸ್ತರಿಂದ ಒಂದು ಬಗೆಯ ಬಹಿಷ್ಕಾರಕ್ಕೆ ಗುರಿಯಾಗಿದ್ದ ಕುಟುಂಬವೊಂದರ ಹೆಣ್ಣನ್ನು ತಾವಾಗೇ ಒಪ್ಪಿ ೧೯೫೩ರಲ್ಲಿ ಸರಳ ವಿವಾಹವಾದರು. ತೀರ್ಥಹಳ್ಳಿ ಪೇಟೆಯಲ್ಲಿ ಮಹಿಳೆಯರ ಪ್ರಭಾತ್ ಪೇರಿಯ ಮುಂಚೂಣಿಯಲ್ಲಿ ಬಾವುಟ ಹಿಡಿದುಹೋಗುತ್ತಿದ್ದಾಗ ಆ ಹುಡುಗಿ ಗುಡ್ಡೇಕೇರಿ ರುಕ್ಮಿಣಿಯವರನ್ನು ಗೌಡರು ಮೊದಲು ನೋಡಿದ್ದರಂತೆ. ಆಕೆಯೂ ಸ್ವಾತಂತ್ರ್ಯ ಹೋರಾಟಗಾರ್ತಿ. ಸಾಮಾಜಿಕ ಕಳಕಳಿ ಇದ್ದಾಕೆ.

ಕಿಟ್ಟಪ್ಪ ಗೌಡರು ಕೇವಲ ಭಾಷಣ ಮೆರವಣಿಗೆ ಮಾಡಿ ಬ್ರಿಟಿಷರ ಕೋಪಕ್ಕೆ ಗುರಿಯಾದವರಲ್ಲ ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಆಗುಂಬೆ ಹೋಬಳಿಯಾದ್ಯಂತ ಮೇಗರವಳ್ಳಿಯನ್ನು ಕೇಂದ್ರವಾಗಿಸಿಕೊಂಡು ಇವರು ನಡೆಸಿದ ಸಮರ ರೋಚಕವಾದದ್ದು. ಚಳುವಳಿಗೆ ಧುಮುಕಿದ ಹಲವರು ದಸ್ತಗಿರಿಯಾಗಿ ಜೈಲು ಸೇರಿದರೆ ಕಿಟ್ಟಪ್ಪ ಪೋಲೀಸರ ಕೈಗೆ ಸಿಗದೇ ಭೂಗತವಾಗಿದ್ದುಕೊಂಡು ಹೋರಾಟ ಮುಂದುವರಿಸಿದ್ದರು. ಅಂಚೆ ಅಪಹರಿಸುವುದು, ತಂತಿ ಕೀಳುವುದು, ಹೆಂಡದಂಗಡಿ ಮುಂದೆ ಧರಣಿ ಮಾಡುವುದು, ಮರಗಳನ್ನು ಕಡಿದು ರಸ್ತೆಗೆ ಅಡ್ಡವಾಗಿ ಉರುಳಿಸುವುದು, ಮೋರಿಗಳನ್ನು ಕೀಳುವುದು ಇತ್ಯಾದಿ ಆಡಳಿತಶಾಹಿಗೆ ಕಿರುಕುಳವನ್ನು ನಿರಂತರ ನಡೆಸಿಯೂ ಪೋಲೀಸರ ಕೈಗೆ ಸಿಗದಂತೆ ತಪ್ಪಿಸಿಕೊಳ್ಳುತ್ತಿದ್ದರು. ಇವರ ಚಟುವಟಿಕೆ ಪೋಲೀಸರನ್ನು ಕೆರಳಿಸಿತ್ತು. ಜೊತೆಗೆ ಅಬ್ಕಾರಿ ಗುತ್ತಿಗೆದಾರರು ಈತನ ಮೇಲೆ ಸೇಡು ತೀರಿಸಿಕೊಳ್ಳಲು ಸರಕಾರದ ಅಧಿಕಾರಿಗಳಿಗೆ ಮಾಹಿತಿ ನೀಡುತ್ತಿದ್ದರು.

ಒಮ್ಮೆ ಕಿಟ್ಟಪ್ಪ ತೀರ್ಥಹಳ್ಳಿ ಮೇಗರವಳ್ಳಿ ನಡುವಿನ ಅಣ್ಣುವಳ್ಳಿ ಸೇತುವೆಯನ್ನೇ ಕೆಡವಿಹಾಕಲು ಯತ್ನಿಸಿದಾಗ ಗುರುತರ ಅಪರಾಧಿಯಾದ ಗೌಡರನ್ನು ಬಂಧಿಸಲೇಬೇಕೆಂದು ಬಂದ ಜಿಲ್ಲಾಧಿಕಾರಿ ಊರ ಹಿರಿಯರನ್ನು ಕರೆದು ಹುಡುಗನಿಗೆ ಬುದ್ಧಿ ಹೇಳಲು ತಿಳಿಸಿ, ಆತ ಶರಣಾಗದಿದ್ದರೆ ಕಂಡಲ್ಲಿ ಗುಂಡಿಕ್ಕುವ ಆಜ್ಞೆ ಮಾಡುವುದಾಗಿ ಹೇಳಿದರು. ಹಿಂದೆಲ್ಲ ಗುಂಪಿನೊಳಗೇ ಕೆಲಸಗಾರರ ವೇಷದಲ್ಲಿದ್ದುಕೊಂಡು ವ್ಯಾನುಗಟ್ಟಲೆ ಬಂದ ಪೋಲೀಸರ ಕಣ್ಣಿಗೆ ಮಣ್ಣೆರೆಚುತ್ತಿದ್ದ ಕಿಟ್ಟಪ್ಪನನ್ನು ಈ ಬಾರಿ ಜನ ರಾತ್ರೋ ರಾತ್ರಿ ತೀರ್ಥಹಳ್ಳಿಗೆ ಸಾಗಿಸಿದರು. ಇದರ ಸುಳಿವು ಪಡೆದ ಪೋಲೀಸರು ಅಲ್ಲಿ ಅವರನ್ನು ಬಂಧಿಸಿ ಜೈಲು ಸೇರಿಸಿ ಬಹುವಾಗಿ ಹಿಂಸಿಸಿದರು. ಕಿಟ್ಟಪ್ಪ ಯಾವುದಕ್ಕೂ ಜಗ್ಗಲಿಲ್ಲ.

೧೯೪೭ರಲ್ಲಿ ಸ್ವಾತಂತ್ರ್ಯ ಬಂದ ಮೇಲೂ ಗೌಡರು ವಿಶ್ರಾಂತಿ ಪಡೆಯಲಿಲ್ಲ. ಮೈಸೂರು ಅರಸೊತ್ತಿಗೆ ವಿರುದ್ಧ ಚಳುವಳಿಯಲ್ಲಿ ಗೋಪಾಲಗೌಡರ ಕರೆಯ ಮೇರೆಗೆ ಸೇರಿಕೊಂಡರು. ಭೂಗತ ಚಟುವಟಿಕೆ ನಡೆಸಿದರು. ಕೊನೆಗೂ ಸೆರೆಸಿಕ್ಕಿ ಮತ್ತೊಮ್ಮೆ ಜೈಲುವಾಸ ಅನುಭವಿಸಿದರು. ಬಿಡುಗಡೆಯಾದ ಮೇಲೆ ಶಾಂತವೇರಿಯವರೊಂದಿಗೆ ಶಿವಮೊಗ್ಗೆಯಲ್ಲಿ ಹರಿಜನರ ದೇವಾಲಯ ಪ್ರವೇಶ ಚಳುವಳಿಯಲ್ಲಿ ಭಾಗವಹಿಸಿದರು. ಹೆಂಡದಂಗಡಿಗಳೆದುರು ಪಿಕೆಟಿಂಗ್ ನಡೆಸಿದರು. ಹೀಗೆ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟವನ್ನು ಮುಂದುರೆಸಿದರು.

ಯಾವ ದಾಖಲೆಗಳನ್ನೂ ಹೊಂದಿರದ ಒಬ್ಬ ನಿಜವಾದ ಉಳುಮೆದಾರನಿಗೆ ಭೂಮಿಯ ಒಡೆತನ ಕೊಡಿಸುವಲ್ಲಿ ಕಡಿದಾಳರೊಂದಿಗೆ ತಾವು ಶಾಮೀಲಾಗಿದ್ದ ಪ್ರಸಂಗವೊಂದನ್ನು ಕಿಟ್ಟಪ್ಪನವರೇ ವರ್ಣಿಸಿದ್ದಾರೆ. ಮುದ್ದಣ್ಣ ಶೆಟ್ಟಿ ಎಂಬ ತೀರ್ಥಹಳ್ಳಿ ಸಮೀಪದ ಬಡ ಗೇಣಿದಾರನೊಬ್ಬ ಭೂನ್ಯಾಯ ಮಂಡಳಿ ತನ್ನ ಅರ್ಜಿಯನ್ನು ವಜಾ ಮಾಡಿರುವುದನ್ನು ಒಮ್ಮೆ ಗೌಡರಲ್ಲಿ ಹೇಳಿದ.

( ೯ನೇ ಪುಟಕ್ಕೆ

# ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ–೧೫

–ಇಂದಿರಾ ಬಿ. ಕೃಷ್ಣಪ್ಪ

## ಕಾವೇರಿದ ದಲಿತ ಹೋರಾಟನಿ ಮತ್ತು ಗಾಯತ್ರಿ ಮದುವೆ!

**'ಪ**ತ್ರೆ ಸಂಗಪ್ಪ' 'ಬೆಲ್ಚಿ', 'ಕಪ್ಪೆಗಳು', ಹಾಗೂ 'ಪೋಲೀಸರು' – ಈ ಕಿರುನಾಟಕಗಳನ್ನು ದಸಂಸದವರೆ ಬರೆದು, ನಿರ್ದೇಶಿಸಿ, ಶಿವಮೊಗ್ಗ ಹಾಗೂ ಭದ್ರಾವತಿಗಳ ಹಲವು ಕಡೆ, ಕೆಲವು ಬೀದಿಗಳಲ್ಲಿ ಪ್ರದರ್ಶಿಸಿದರು. ಕಾಗದನಗರದ ಮೈದಾನದಲ್ಲಿ ಈ ನಾಟಕಗಳು ನಡೆದಾಗ ನಾನೂ ನೋಡಿದೆ. ಈ ನಾಟಕಗಳು ಕಾಲ್ಪನಿಕ ವಿಷಯಗಳಿಂದ ಕೂಡಿದವುಗಳಾಗಿಲ್ಲದ್ದರಿಂದಲೂ, ಜನರ ಸಮಸ್ಯೆ ಹಾಗೂ ಅದರ ಸಂಬಂಧದ ಹೋರಾಟವೇ ನಾಟಕದ ವಸ್ತುವಾಗಿದ್ದರಿಂದಲೂ, ಅವುಗಳು ನಮ್ಮೆಲ್ಲರ ನಾಟಕವೇ ಆಗಿದೆ ಎಂಬಂತೆ ಜನ ಕಿಕ್ಕಿರಿದು ಸೇರುತ್ತಿದ್ದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಭದ್ರಾವತಿಯ ಆಗಿನ ಎಂ.ಐ.ಎಸ್.ಎಲ್.(ಈಗಿನ ವಿ.ಐ.ಎಸ್.ಎಲ್) ಹಾಗೂ ಎಂ.ಪಿ.ಎಂ.ಗಳಲ್ಲಿದ್ದ ಅನೇಕ ಕಾರ್ಮಿಕ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಡುತ್ತಿದ್ದ ಸಮಯವದು. ವೇತನ ತಾರತಮ್ಯ, ನಿಯಮಾನುಸಾರ ಸೌಲಭ್ಯಗಳ ನಿರಾಕರಣೆ, ಬಡ್ತಿಯಲ್ಲಿ ವಂಚನೆ, ಮತ್ತು ದಲಿತ ಕಾರ್ಮಿಕರ ಮೇಲೆ ಹಲ್ಲೆ, ಹೊರ ಕೆಲಸ ಇತ್ಯಾದಿಗಳನ್ನು ಮುಂದಿಟ್ಟುಕೊಂಡು ಕಂಪನಿಗಳ ಮುಂದೆ ಧರಣಿ, ಕರಪತ್ರ ಚಳುವಳಿಗಳು ನಡೆದವು. ಕಂಪನಿಗಳ ಹಿರಿಯ ಅಧಿಕಾರಿಗಳೊಂದಿಗೆ ಕೃಷ್ಣಪ್ಪನವರ ನೇತೃತ್ವದಲ್ಲಿ ಗಿರಿಯಪ್ಪ,, ಟಿ. ರಾಜಣ್ಣ ಮುಂತಾದವರುಗಳನ್ನೊಳಗೊಂಡ ಚರ್ಚೆಗಳೂ ಏರ್ಪಟ್ಟವು.

ಸಮಸ್ಯೆಗಳು ಪರಿಹಾರವಾಗುವುದರೊಂದಿಗೆ, ಅನೇಕ ಹಿರಿಯ ಅಧಿಕಾರಿಗಳು, ವಿಚಾರಣೆಗೆ ಒಳಪಡುವ, ಸಸ್ಪೆಂಡ್ ಆಗುವ ಪ್ರಮೇಯವು ಬಂದಿತು. ಜೊತೆಗೆ ಪತ್ರಿಕಾ ವರದಿಗಳು ಕಾರ್ಖಾನೆಗೆ ಪೋಲೀಸ್ ಪ್ರವೇಶ, ಕಾರ್ಮಿಕ ಸಂಘಗಳಿಗೆ ಹಾಗೂ ಆಡಳಿತ ಮಂಡಳಿಗೆ ನುಂಗಲಾರದ ಬಿಸಿ ತುಪ್ಪವಾಗಿತ್ತು. ಇದೇ ಸಂದರ್ಭದಲ್ಲಿ, ನಾನು ಕೆಲಸ ಮಾಡುತ್ತಿದ್ದ ಕಚೇರಿಯ ಆಗಿನ ಕ್ಷೇತ್ರಾಭಿವೃದ್ಧಿ ಅಧಿಕಾರಿಯವರು ನನ್ನ ವರ್ಗಾವಣೆಯ ಪ್ರಸ್ತಾಪ ಮಾಡಿ, ಅದು ನಿಶ್ಚಿತವಾಗಿದ್ದು ಅದಕ್ಕೆ ಸಿದ್ಧವಾಗಿರಬೇಕೆಂದು ಸೂಚಿಸಿದರು.

ಮನೆಯಲ್ಲಿ ಕೃಷ್ಣಪ್ಪನವರಿಗೆ ಈ ವಿಷಯಗಳನ್ನು ತಿಳಿಸಿದೆ. ಅವರು,–"ನಿಮ್ಮ ಕಚೇರಿಯ ಉಪಾಧ್ಯಕ್ಷ ಮಾಯಿಗಯ್ಯನಿಗೆ ಅವನದೇ ಆದ ಹರಿಜನ ಸಂಘಟನೆಯೊಂದಿದೆ. ಅವನು ವಿ..ಐ.ಎಸ್.ಎಲ್. ನೌಕರ ಕಂಪನಿಯಲ್ಲಿ ನಾವು ನಡೆಸಿದ ಹೋರಾಟ, ಅವನ ಅಸ್ತಿತ್ವಕ್ಕೆ ಧಕ್ಕೆ ತಂದಿರಬಹುದು ಮತ್ತು ನಿಮ್ಮ ಕಚೇರಿಯ ಭೂಮಾಲಿಕ ಸದಸ್ಯರ ಕುಮ್ಮಕ್ಕು ಇರಬಹುದು. ಈರ್ಷೆ ತುಂಬಿಕೊಂಡಿದ್ದಾನೆ. ಅದ್ಕೆ ನಿನ್ನ ಮೇಲೆ ಸೇಡು ತೀರಿಸಿಕೊಳ್ಳಲು ಹೊರಟಿದ್ದಾನೆ. ನಿನ್ನ ಮೂಲಕ ನನಗೆ ತೊಂದರೆಯಾಗಬೇಕೆಂಬ ಇರಾದೆ ಇರುವಂತಿದೆ. ನಾನು ನಾಳೇನೇ ಜಿಲ್ಲಾಧಿಕಾರಿಯವರನ್ನು ಭೇಟಿಮಾಡ್ತೇನೆ" ಅಂದರು. ಎಷ್ಟೇ ಒತ್ತಡ ಬಂದರೂ ಬಿ.ಡಿ.ಓ.ರವರು ಸ್ವಲ್ಪಕಾಲ ನನ್ನನ್ನು ರಿಲೀವ್ ಮಾಡದೇ ಮುಂದುವರಿಸಿದರಾದರೂ, ತೀವ್ರ ಒತ್ತಡ ಬಂದಾಗ ರಿಲೀವ್ ಮಾಡಲೇಬೇಕಾಯಿತು. ನಂತರ ಸುಮಾರು ಒಂದೂವರೆ ತಿಂಗಳು ನನಗೆ ಮರು ವರ್ಗಾವಣೆ ಆದೇಶ ಬರಲೇ ಇಲ್ಲ.

ಮಧ್ಯಂತರದಲ್ಲಿ ಕಾಗದ ನಗರದ ಪ್ರಾಥಮಿಕ ಶಾಲೆಯಲ್ಲಿ ದಸಂಸದ ಅಧ್ಯಯನ ಶಿಬಿರ ಏರ್ಪಡಿಸಿದ್ದರು, ನಾನು ಮಕ್ಕಳನ್ನು ಕರೆದುಕೊಂಡು ಅಲ್ಲಿಗೆ ಹೋಗುತ್ತಿದ್ದೆ. ಶಿಬಿರದಲ್ಲಿ "ರಿಕ್ಷಾ ತುಳಿವ ರಹಿಮಣ್ಣ, ಕಲ್ಲು ಒಡೆವ ಕಾಮಣ್ಣ, ರೈತರ ಮಲ್ಲಣ್ಣ", "ಇಕ್ರಲಾ, ಒದೀರ್ಲಾ, ಚರ್ಮಎಬ್ರಲಾ", "ಹಳ್ಳಿಗಾಡ ಹಸುಗೂಸೆ, ಹಸುಕಾಯೆ ಧೀರ ಬಾಲನೇ" ಮುಂತಾದ ಕ್ರಾಂತಿಗೀತೆಗಳು ಮತ್ತು "ನೀ ಹೋದ 'ಮರುದಿನ, ನಮ್ಮ ಬದುಕು ಹೀಂಗ್ಯಾಗದೋ ಬಾಬಾಸಾಹೇಬ". "ನಾಡ ನಡುವಿನಂದ ಸಿಡಿದ ನೋವಿನ ಕೂಗೆ, ಆಕಾಶದಗಲಕ್ಕೂ ನಿಂತ ಆಲವೇ" ಎಂಬ ಅಂಬೇಡ್ಕರ್ ಕುರಿತಾದ ಹಾಡುಗಳನ್ನು ಕೃಷ್ಣಪ್ಪನನ್ನು ಸೇರಿಕೊಂಡು ಹಾಡುತ್ತಿದ್ದರೆ, ಪುರೋಹಿತ ಶಾಹಿಯ ಕಬಂಧ ಬಾಹುಗಳು, ಅಸ್ಪೃಶ್ಯತೆಯ ಕರಾಳ ಮುಖಗಳು, ದಲಿತರ ಭೂ–ಸಮಸ್ಯೆಗಳು ಮತ್ತು ಸಾಮಾಜಿಕ ಅನ್ಯಾಯಗಳ ವಿರುದ್ಧದ ಸಂಘಟನೆ – ಹೋರಾಟದ ಹಾದಿಗಳು ಸ್ಪಷ್ಟವಾಗತೊಡಗಿತ್ತು.

ಶಿಬಿರದಲ್ಲಿ ರಾತ್ರಿ ಬಾಡೂಟ ಮಾಡಿಸಿದ್ದು. ಅಷ್ಟೊಂದು ಪ್ರಮಾಣದಲ್ಲಿ ಮಾಂಸದಡುಗೆಯನ್ನು ಕಂಡ ನನಗೆ ಒಮ್ಮೆಲೇ ಹೇವರಿಕೆಯಾಗಿ ಬುದ್ಧನ ಕರುಣೆ ಕಣ್ಮುಂದೆ ಸುಳಿದಾಡಿತು. ನಂತರದ ದಿನಗಳಲ್ಲಿ ಸಸ್ಯಾಹಾರಕ್ಕೆ ಪರ್ಯಾಯವಾಗಿ ಪುಷ್ಟಿಕರವಾದ ಮಾಂಸಹಾರಕ್ಕೆಂದುಪ್ರಾಣಿಸಾಕಾಣಿಕೆಯ ವೃತ್ತಿಯನ್ನಾಗಿರಿಸಿಕೊಂಡವರ ಸಂಪರ್ಕ, ಜನ್ಮತಃ ಬಾಡೂಟದವರು, ಬಾಡೂಟದ ಹೊಸ ಅಭ್ಯಾಸಿಗಳ ಮನೆಯಲ್ಲಿ ಮುಂದೆ ಎದುರಾಗಬಹುದಾದ ಸಮಸ್ಯೆಗಳ ಕುರಿತುಸ್ನೇಹ ಸಂಪರ್ಕವಾದ ಬಳಿಕ ಬಾಡೂಟದ ಬಗ್ಗೆ ಇದ್ದ ಹೇವರಿಕೆ ದೂರವಾಯಿತು.

ಚಿಕ್ಕಮಗಳೂರು, ಹಾಸನ, ಗುಲ್ಬರ್ಗ, ತುಮಕೂರು, ಶಿವಮೊಗ್ಗ, ರಾಯಚೂರು, ಮಂಡ್ಯ, ಮಂಗಳೂರು ಜಿಲ್ಲೆಗಳಲ್ಲಿ ದಸಂಸದ ಹೋರಾಟಗಳು ತೀವ್ರವಾಗ ತೊಡಗಿದವು. ಚಿಕ್ಕಮಗಳೂರಿನ ಭೂಹೋರಾಟದ (೬೦ ಏಕರೆ ಜಮೀನು) ಗುಲ್ಬರ್ಗ ಜಿಲ್ಲೆಯ ಚುಂಚನಸೂರಿನ ಓಕುಳಿ ಆಟದ ವಿರುದ್ಧ ಪ್ರತಿಭಟನೆ, ಸಾಗರ ತಾಲ್ಲೂಕಿನ ಕಾನ್ಸೆ ಗ್ರಾಮದ ಜಮೀನು ಹೋರಾಟ, ರಾಯಚೂರಿನ ಮಾನ್ವಿ ತಾಲ್ಲೂಕಿನ ಆರೋಲಿ ಗ್ರಾಮದ ಹುಲಿಗೆಮ್ಮ ಜಾತ್ರೆಯಲ್ಲಿ ಬೆತ್ತಲೆ ಪ್ರದಕ್ಷಿಣೆ ವಿರುದ್ಧ ಚಳುವಳಿ, ತುಮಕೂರಿನ ತಗಡೂರಿನ ದಲಿತರ ನಿವೇಶನ ಹೋರಾಟ, ಭದ್ರಾವತಿಯ ನ್ಯೂ ಮಾಡೆಲ್ ಕಾಲೋನಿಯ ನಿವೇಶನ ಹೋರಾಟಗಳು ಮತ್ತು ಮರಾಠವಾಡ ವಿಶ್ವವಿದ್ಯಾನಿಲಯಕ್ಕೆ ಅಂಬೇಡ್ಕರ್ ಹೆಸರಿಡಬೇಕೆಂಬ ಬಗ್ಗೆ ಕರ್ನಾಟಕದಾದ್ಯಂತ ಹಮ್ಮಿಕೊಂಡ ಆಂದೋಲನದಿಂದ ಕೃಷ್ಣಪ್ಪ ಮನೆಯಲ್ಲಿ ಇರುತ್ತಿದ್ದುದೇ ಕಡಿಮೆಯಾಗ ತೊಡಗಿತು.

ಮನೆಯಲ್ಲಿದ್ದ ಸ್ವಲ್ಪ ಸಮಯದಲ್ಲಿ ಕರಪತ್ರ ತಯಾರಿ, ಪತ್ರಿಕಾ ಹೇಳಿಕೆ ಸಿದ್ಧತೆ, ಪತ್ರ ಬರಬಣಿಗೆ, ಇವುಗಳಲ್ಲೇ ಅವರು ಮುಳುಗಿಹೋಗುತ್ತಿದ್ದರು. ಆದರೆ ಹಲವಾರು ವಿಷಯಗಳಿಗಾಗಿ ಮನೆಗೆ ಬರುತ್ತಿದ್ದ ಹೋರಾಟದ ಒಡನಾಡಿಗಳಾದ ವಿಜಯ ಪಾಟೀಲ್ ಹಿರಿಯಪ್ಪ, ಜೆ.ಜೆ.ಶಿವಲಿಂಗಪ್ಪ, ತಿರುಮಲೇಶ್, ಚಂದ್ರಪ್ರಸಾದ್ ತ್ಯಾಗಿ, ಈರಯ್ಯ, ಗುರುರಾಜ ಬೀಡಿಕರ್, ಮಂಗಳೂರು ವಿಜಯ, ಬಿ.ರಾಜಣ್ಣ, ಟಿ. ರಾಜಣ್ಣ, ದೇವಯ್ಯ ಹರವೆ, ಬಿ.ಆರ್. ಪ್ರಾಜೆಕ್ಟ್ ನಾಗಭೂಷಣ ಇನ್ನೂ ಹಲವು ಆತ್ಮೀಯ ಬಳಗದೊಂದಿಗಿನ ಮಾತುಕತೆಯಿಂದ ಕೃಷ್ಣಪ್ಪ ಪಯಣ ಎಲ್ಲಿಗೆ? ಎಂದು ತಿಳಿದುಕೊಳ್ಳುತ್ತಿದ್ದೆ. ಮನೆಗೆ ಬರುತ್ತಿದ್ದ ಅಸಂಖ್ಯಾತ ಪತ್ರಗಳು, ಅರ್ಜಿಗಳು, ಕರಪತ್ರಗಳು, ಆಹ್ವಾನ ಪತ್ರಗಳ ಮುಖಾಂತರ ನನಗೆ ಕೃಷ್ಣಪ್ಪನವರ ಹೋರಾಟದ ಹಾದಿ ಎತ್ತ ಸಾಗಿದೆ? ಎಂಬುದು ತಿಳಿದು ಬರುತ್ತಿತ್ತು. ಚೆನ್ನಣ್ಣ ವಾಲೀಕರ್, ವಿಜಯ ಪಾಟೀಲ್, ಇಂದೂಧರ ಹೊನ್ನಾಪುರ, ಮಂಗ್ಳೂರ ವಿಜಯ ಇನ್ನು ಮುಂತಾದವರ ಪತ್ರಗಳಲ್ಲಿ "ಅಕ್ಕನವರು/ಸೋದರಿಯವರು/ಅತ್ತಿಗೆಯವರು ಹೇಗಿದ್ದಾರೆ? ಅವರಿಗೆ ವಂದನೆಗಳನ್ನು ತಿಳಿಸಿ" ಎಂಬ ಒಕ್ಕಣಿಕೆಗಳಿರುತ್ತಿದ್ದವು. ಅವರುಗಳ ಈ ಆತ್ಮೀಯ ಸಂಬಂಧದ ಬೆಸುಗೆ, ಕಚೇರಿ–ಮನೆ ಮಕ್ಕಳು–ಓದು ಬರಹ–ಅತಿಥಿಗಳನ್ನು ಸಂಭಾಳಿಸುವ ವ್ಯವಸ್ಥೆಯಲ್ಲಿನ ನನ್ನ ಜಂಜಾಟದ ಮನಸ್ಸಿಗೆ ಆಹ್ಲಾದವನ್ನು ಉಂಟುಮಾಡುತ್ತಿತ್ತು. ಇದೆಲ್ಲದರ ನಡುವೆ ನಾನು ಸರ್ಕಾರಿ ನೌಕರಳೆಂಬುದನ್ನೇ ಮರೆತುಬಿಟ್ಟಿದ್ದೆ. ಆಗ ಧುತ್ತೆಂದು ಬಂದಿತು–ತಾಲ್ಲೂಕು ಕಚೇರಿಗೆ ನನ್ನನ್ನು ನಿಯುಕ್ತಗೊಳಿಸಿದ ಆದೇಶ. ಮರುದಿನ ಕೆಲಸಕ್ಕೆ ಹಾಜರಾಗಿದ್ದೆ.

(೯ನೇ ಪುಟಕ್ಕೆ

# ಮ್ಯೂಸಿಯಂವೊಂದರ ಕಥೆ ಮತ್ತು ವ್ಯಥೆ...

–ಎಲ್. ಕೆ.ಪೂರ್ಣಿಮಾ

ಭಾರತದ ಸಂಸ್ಕೃತಿ ಮತ್ತು ನಾಗರೀಕತೆಗಳ ಹೆಗ್ಗುರತಾದ ಕೈಮಗ್ಗದ(ಮಸ್ಲಿನ್ ಬಟ್ಟೆ ನೆನಪಾಗುತ್ತಿದೆಯೇ?) ಬುಡಕ್ಕೇ ಈಗ 'ಅಭಿವೃದ್ಧಿ'ಯ ಹೆಸರಿನಲ್ಲಿ ಕೊಡಲಿ ಪೆಟ್ಟು ಬೀಳುತ್ತಿದ್ದು ಅದಕ್ಕೆ ರಾಷ್ಟ್ರಾದ್ಯಂತ ಪ್ರತಿಭಟನೆ ವ್ಯಕ್ತವಾಗುತ್ತಿರುವ ಈ ಹೊತ್ತಿನಲ್ಲಿ ಲೇಖಕಿ ನಮ್ಮ ಪರಂಪರೆಯ ಪ್ರತೀಕದಂತಿರುವ ತಾವು ಕಂಡ ಭಾರತದ ಸುವಿಖ್ಯಾತ ಮ್ಯೂಸಿಯೊಂವೊಂದನ್ನು ಕುರಿತ ತಮ್ಮ ಒಳನೋಟವೊಂದನ್ನು ಇಲ್ಲಿ ನೀಡಿದ್ದಾರೆ.–ಸಂ



**ಆ** ದೊಡ್ಡ ದೊಡ್ಡ ಗಾಜಿನ ಬೀರುಗಳಲ್ಲಿ ಪ್ರದರ್ಶನಕ್ಕಿಟ್ಟ ಕರಕುಶಲ ವಸ್ತುಗಳು, ಮೂಲ ಜಾಗದಿಂದ ತಮ್ಮನ್ನು ಕಿತ್ತು ಆ ಬದಲಾವಣೆಯೇ ಇಲ್ಲದ ನಿರ್ಜೀವ ಮ್ಯೂಸಿಯಂ ವಾತಾವರಣದಲ್ಲಿ ಇರಿಸಿರುವುದಕ್ಕಾಗಿ ತಮ್ಮಾಳದಿಂದೆಲ್ಲೋ ರೋಧಿಸುತ್ತಿರುವಂತೆ ಕಂಡಿತು. ಆದರೂ, ಅದೇ ಸಮಯದಲ್ಲೇ ಮೇಲ್ನೋಟಕ್ಕೆ ಅವು ತಮಗೆ ದೊರೆತಿರುವ ಆ ಪೀಠಗಳ ಮೇಲೆ ನಿಂತು, ಬೇರೆ ಪ್ರಪಂಚದವರ ಕುತೂಹಲದ ಕಣ್ಣಿಗೂ ಮತ್ತು ಕ್ಲಿಕ್ಕಿಸುವ ಕ್ಯಾಮೆರಾದ ಮಿಂಚಿನ ಬೆಳಕಿಗೂ ತಾವು ನಿರಂತರವಾಗಿ ಬೀಳುತ್ತಿರುವುದಕ್ಕಾಗಿ ಬೀಗುತ್ತಿರುವಂತೆಯೂ ತೋರಿತು.

ಸಂಶಯಾಸ್ಪದ ಮೂಲದವು ಈ ಮ್ಯೂಸಿಯಂಗಳೆಂಬ ಸಂಸ್ಥೆಗಳು.

ಇದು ಇನ್ನಷ್ಟು ಹೆಚ್ಚೇ ಮನವರಿಕೆಯಾಗುವುದು, ಭೋಪಾಲದ ನಗರಕ್ಕಂಟಿಕೊಂಡೇ ಇರುವಂಥ ಸುಮಾರು ೨೦೦ ಎಕರೆ ದಟ್ಟ ಹಸುರಿನ ಗುಡ್ಡವೊಂದರ ತಟದಲ್ಲಿ ಬೀಡುಬಿಟ್ಟಿರುವ ದೊಡ್ಡ ರೋಷನ್‌ಪುರ ಕೊಳೆಗೇರಿಯನ್ನು ದಾಟಿಕೊಂಡೇ ಆ ಗುಡ್ಡದ ತುದಿಯಲ್ಲಿ ರಾರಾಜಿಸುತ್ತಿರುವ ಭಾರತದ ಪ್ರತಿಷ್ಠಿತ ಕೆಂಪು ಕಲ್ಲಿನ 'ಮಾನವ ಸಂಗ್ರಹಾಲಯ' ಎನ್ನುವ ಮ್ಯೂಸಿಯಂಗೆ ಭೇಟಿ ಕೊಡುವಾಗ. ಒಂದು ಬದಿಗೆ ನಗರದ ಕೊಳಚೆ ನೀರಿನ ಚರಂಡಿಯಿಂದಲೂ ಮತ್ತೊಂದು ಬದಿಗೆ ಎತ್ತರೆತ್ತರಕ್ಕೆ ಬೆಳೆಯುತ್ತಲೇ ಇರುವ ಕಟ್ಟಡಗಳಿಂದಲೂ ಈ ಕೊಳೆಗೇರಿಯು ಸುತ್ತುವರಿದುಕೊಂಡಿದೆ.

ಮ್ಯೂಸಿಯಂ ನೋಡಲು ಆ ಗುಡ್ಡದ ಏರು ರಸ್ತೆಯನ್ನು ನಡೆದೇ ಹೋಗಬೇಕೆಂದು ನೀವೆಲ್ಲಾದರೂ ಬಯಸಿದರೆ ಆ ಚರಂಡಿಯ ಉಸಿರುಗಟ್ಟಿಸುವ ವಾಸನೆಯಿಂದ ತಪ್ಪಿಸಿಕೊಳ್ಳುವ ಪ್ರಶ್ನೆಯೇ ಇಲ್ಲ. ಜೊತೆಗೆ ಕೊಳೆಗೇರಿಯವರ ಅನಿವಾರ್ಯ ಶೌಚಾಲಯವಾಗಿರುವ ಆ ರಸ್ತೆಯ ಕಾಲುದಾರಿಯಲ್ಲಿ ಹೇಲು, ಉಚ್ಚೆಗಳ ರಾಶಿಯನ್ನು ತಪ್ಪಿಸಿಕೊಂಡು ಹೆಜ್ಜೆ ಹಾಕುವುದೂ ಸುಲಭವಲ್ಲ. ಇನ್ನು ಕೊಳಚೇರಿಯ ಮನೆಗಳೆಂಬ ಚಚ್ಚೌಕಾರದ ಆ ಸಣ್ಣ ಸಣ್ಣ ಗೂಡುಗಳು ಬಣ್ಣ ಬಣ್ಣದ ಪ್ಲಾಸ್ಟಿಕ್ ಶೀಟುಗಳನ್ನು ಹೊದ್ದುಕೊಂಡು ರಂಗುರಂಗಾಗಿ ಕಂಡರೂ ತಮ್ಮ ಅಡಿಯಲ್ಲಿರುವ ದುಃಖಾವಸ್ಥೆಯನ್ನವು ಮುಚ್ಚಿಡಲಾರವು. ಇದನ್ನೆಲ್ಲ ನೋಡುವ ಉಸಾಬರಿಯೇ ಬೇಡವೆಂದರೆ ವಾಹನ ಹತ್ತಿ ಭರ್ರನೇ ಹೋಗಿ ಬಿಡುವುದೇ ವಾಸಿ. ಆಗ ಬಣ್ಣ ಬಣ್ಣದ ಚೌಕಾಕಾರದ ರಚನೆಗಳು ತುಸು ಹೆಚ್ಚೇ ರಂಗಾಗಿ ಕಂಡು ಮೇಲೆ ಪವಡಿಸಿರುವ ಮ್ಯೂಸಿಯಂ ಕಟ್ಟಡಕ್ಕೆ ಇನ್ನಷ್ಟು ವೈಭವವನ್ನು ಸೇರಿಸಿಕೊಡಬಹುದು.

ಈ ಮ್ಯೂಸಿಯಂನ ಹೊರಾಂಗಣ ವಿಭಾಗದಲ್ಲಿ ಅಡ್ಡಾಡುವಾಗ ನಿಮಗೆಲ್ಲಾದರೂ ನವಿಲಿನ ಕೂಗು ಕೇಳಿಸಿತಾದರೆ ಅದು ನಿಮ್ಮನ್ನು ಮತ್ತಷ್ಟು ಆ ಮಾಂತ್ರಿಕವಾದ ವಾತಾವರಣಕ್ಕೆ ಎಳೆದುಕೊಂಡು ಬಿಡುತ್ತದೆ. ಹಾಗೇ ಮುಂದೆ ಹೋಗುತ್ತಿರುವಂತೆ ಒಂದು ಸಿಂಹದ ಘರ್ಜನೆಯನ್ನು ಕೇಳಿಸಿಕೊಂಡಿರೋ ನೀವೇನೂ ಗಾಬರಿ ಬೀಳುವುದಿಲ್ಲ, ಬದಲಿಗೆ ಒಂದು ಪ್ರಾಣಿ ಸಂಗ್ರಹಾಲಯವೂ ಪಕ್ಕದಲ್ಲೇ ಇದೆ ಎಂದು ನಿಮ್ಮ ಅನುಭವದಿಂದ ಕಂಡುಕೊಳ್ಳುತ್ತೀರಷ್ಟೆ.



ಕೆಳಗೆ, ಗುಡ್ಡದ ತಟದಲ್ಲಿರುವ ಕೊಳಚೆಗೇರಿಯಲ್ಲಿ ಅನಸೂಯ ಎಂಬ ನಿವಾಸಿಯು ತನ್ನ ಆ ಸಣ್ಣ ಚೌಕಾಕಾರದ ಮನೆಯನ್ನು ಸುಣ್ಣಬಣ್ಣ ಬಳಿದು ಒಪ್ಪವಾಗಿಡುವುದರಲ್ಲಿ ಮುಳುಗಿ ಹೋಗಿದ್ದಳು. ಕ್ಷಯ ರೋಗಿಯಾಗಿ ಸೊರಗಿ ಹೋಗಿದ್ದರೂ ಇನ್ನೂ ಆಕರ್ಷಕವಾಗಿರುವ ಈಕೆಯು ಗೋಡೆಗೆ ನೀಲಿ ಡಿಸ್ಟೆಂಪರ್ ಬಣ್ಣವನ್ನೂ, ಅಂಚಿಗೆ ಬಿಳಿ ಸುಣ್ಣವನ್ನು ಬಳಿದು, ಅದಕ್ಕಾಗಿ ಮನೆಯ ಮಧ್ಯಭಾಗದಲ್ಲಿ ಪೇರಿಸಿಟ್ಟಿದ್ದ ಎಲ್ಲ ವಸ್ತುಗಳನ್ನು ಒಂದು ಅದ್ಭುತವಾದ ಕುಶಲತೆಯಿಂದ ಆ ಪುಟ್ಟ ಜಾಗದಲ್ಲಿ ಹೊಂದಿಸಿ ಹೊಂದಿಸಿ ಇಡುತ್ತಾ, ಮರುದಿನಕ್ಕೆ, ಆ ಮನೆಯ ಒಂದೇ ಕೂಸಾದ ಅವಳ ತಂಗಿಯ ಮಗನ ಹುಟ್ಟು ಹಬ್ಬದ ಆಚರಣೆಗಾಗಿ ಸಜ್ಜುಗೊಳಿಸುತ್ತಿದ್ದಳು. ಅವಳ ತಂದೆ ತಾಯಿಯರೂ, ಅತ್ತೆ ಮಾವಂದಿರೂ ಅವಳು ಹುಟ್ಟುವುದಕ್ಕಿಂತ ' ಮುಂಚೆಯೇ ಈ ನಗರಕ್ಕೆ ವಲಸೆ ಬಂದವರು. ಅವಳಂತೆಯೇ ಆ ಕೊಳಚೆಗೇರಿಯ ಉಳಿದ ನಿವಾಸಿಗಳು ಮೂಲತಃ ಮಧ್ಯಪ್ರದೇಶ, ಗುಜರಾತ್, ಉತ್ತರಪ್ರದೇಶ ಹಾಗೆ ಮಹಾರಾಷ್ಟ್ರದ ಬೇರೆ ಬೇರೆ ಹಳ್ಳಿಗಳಿಗೆ ಸೇರಿದವರಾಗಿದ್ದು, ಬೇರೆ ಬೇರೆ ಕಾರಣಗಳಿಗಾಗಿ ತಮ್ಮ ನೆಲದಿಂದ ಅತಂತ್ರರಾಗಿ ಈ ನಗರಕ್ಕೆ ವಲಸೆ ಬಂದವರಾಗಿದ್ದರು.

ಪ್ರಾಯಶಃ ಆ ಗಾಜಿನ ಬೀರುವಿನಲ್ಲಿದ್ದ ಕರ ಕುಶಲ ವಸ್ತುಗಳು ಅಂತಹ ಮನೆತನಗಳಿಗೇ ಸೇರಿದವಾಗಿದ್ದಿರಬಹುದು... ಆ ನವಿರಾದ ಕುಸುರಿ ಹೆಣಿಗೆಯು ಆ ಬೆರಳುಗಳಿಂದಲೇ ನೇಯ್ದುವಾಗಿರಬಹುದು.... ಅವುಗಳೀಗ ಆ ಚರಂಡಿ ರಿಪೇರಿ ಕೆಲಸದಲ್ಲೋ, ಹೋಟೇಲು ರೂಮ್‌ಗಳನ್ನು ಸ್ವಚ್ಛವಾಗಿರಿಸುವ ಕೆಲಸದಲ್ಲೋ ತೊಡಗಿಕೊಂಡಿರಬಹುದು..... ಮೆಕ್ಯಾನಿಕ್ ಶಾಪ್‌ಗಳ ಮಸಿ, ಗ್ರೀಸ್ ಮೆತ್ತಿಸಿಕೊಂಡಿರಬಹುದು.....

ಅತಂತ್ರರಾದ ಜನರನ್ನು ಹೆಚ್ಚೆಂದರೆ ಚರಂಡಿಗಳ ಪಕ್ಕದಲ್ಲಿ ಇರಿಸಲಾಗುತ್ತದೆ ಅಥವಾ ತಾಳಿಕೊಳ್ಳಲಾಗುತ್ತದೆ. ಅದೇ ಸಮಯದಲ್ಲಿ ಅಂಥ ಮನೆಮಠಗಳಿಂದ ಸಂಗ್ರಹಿಸಲಾಗಿರುವ ವಸ್ತುಗಳನ್ನು ಪ್ರತಿಷ್ಠಿತ ಮ್ಯೂಸಿಯಂ ಕಟ್ಟಡಗಳ ದೊಡ್ಡ ಗಾಜಿನ ಬೀರುಗಳಲ್ಲಿ ಕಾಪಾಡಲಾಗುತ್ತದೆ.

ಇದು ಯಾವ ಕಾರಣಕ್ಕೂ ಮ್ಯೂಸಿಯಂ ಎಂಬ ಸಂಸ್ಥೆಗಳ ಪ್ರಾಮುಖ್ಯತೆಯನ್ನು ಅಲ್ಲಗಳೆಯುವ ಪ್ರಯತ್ನವಲ್ಲ. ಅವು ಆಧುನಿಕ ಜೀವನದ ಬಹಳ ಸಹಜ ಫಲಿತಗಳೇ ಆಗಿವೆ ಮತ್ತು ಆಧುನಿಕ ಕಾಲದ ದೇವಸ್ಥಾನಗಳೆಂದೇ ಪರಿಗಣಿಸಲ್ಪಟ್ಟಿವೆ. ಹೌದಲ್ಲ, ಇನ್ಯಾವ ಬಗೆಯಲ್ಲಿ ನಾವು, ಪಡೆದುಕೊಂಡ ಜ್ಞಾನದ ಮೇಲಿನ ನಂಬಿಕೆಯ ಬುಡವನ್ನು ಕಾಪಾಡಿಕೊಳ್ಳಬಲ್ಲೆವು ಮತ್ತು ಅದನ್ನು ಮುಂದಿನ ಪೀಳಿಗೆಗೆ ರವಾನಿಸಬಲ್ಲೆವು?

ಯುರೋಪಿಯನ್ನರು ಅಮೇರಿಕಾ ನೆಲದ ಮೇಲೆ ನಡೆಸಿದ ಆಕ್ರಮಣವು ಆ ನೆಲದ ನಾಗರಿಕತೆಯನ್ನು ಇಡಿಯಾಗಿ ಮತ್ತು ಬುಡಸಮೇತ ಕಿತ್ತುಹಾಕುವುದರಲ್ಲಿ ಯಶಸ್ವಿಯಾಯಿತು. ಆಸ್ಟ್ರೇಲಿಯಾದ ಮೂಲನಿವಾಸಿಗಳ ವಿಷಯದಲ್ಲೂ ಈ ಮಾತು ಅಷ್ಟೇ ಸತ್ಯ. ನಮ್ಮದೇ



ನೆಲದ ಗೊಂಡ, ಸಂತಾಲರಂಥ ಆದಿವಾಸಿ ಜನ ಸಮುದಾಯಗಳು ಆಗ ಬ್ರಿಟಿಷರ ವಿರುದ್ಧ ಹೋರಾಡಿದ್ದಾಗ ತಮ್ಮದೇ ಯುದ್ಧ ಸಂಹಿತೆಗೆ ಬದ್ಧರಾಗಿದ್ದ ಕಾರಣಕ್ಕೇನೇ ಹಿಮ್ಮೆಟ್ಟುವಂತೆ ಆಗಿದ್ದವು. ಆದರೆ ಈಗ ಅವು ಒಳಗಿನ ಆಕ್ರಮಣಕಾರಿ ಶಕ್ತಿಗಳನ್ನು ಎದುರಿಸಲು ಹೋರಾಟಕ್ಕೆ ಅವಕಾಶವೇ ಇಲ್ಲದಂತೆ ಬಲಿಯಾಗುತ್ತಾ ಬಹುದೊಡ್ಡ ಸಂಖ್ಯೆಯಲ್ಲಿ ಕೊಳಗೇರಿಗಳಲ್ಲಿ ಕೊನೆಗೊಳ್ಳುತ್ತಿರುವುದು ಅವ್ಯಾಹತವಾಗಿ ನಡೆಯುತ್ತಲೇ ಇದೆಯಲ್ಲ. ಇದೇ ರೀತಿಯ ವಿಧ್ವಂಸಕತೆಗಳು ಪ್ರಪಂಚದ ಬೇರೆಬೇರೆ ಕಡೆಗಳಲ್ಲಿ ಇಡೀ ಮಾವನ ಕುಲದ ಇತಿಹಾಸದುದ್ದಕ್ಕೂ ನಡೆದಿದೆ. ಹಾಗೆ ನೋಡಿದರೆ, ಯಾವ ಜನತೆಯೇ ಆಗಲಿ ಅಥವಾ ಸಂಸ್ಕೃತಿಯೇ ಆಗಲಿ, ಇಂಥ ವಿಧ್ವಂಸಕ ಕೃತ್ಯಗಳಲ್ಲಿ ಭಾಗಿಯಾಗಿಲ್ಲ ಎಂದು ತನ್ನ ನಿರಪರಾದಿತ್ವವನ್ನು ಹೇಳಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಕ್ರಿ..ಶ. ೧೫೦೦ರ ನಂತರ ಪ್ರಪಂಚ ಕಂಡ ಅಗಾಧವಾದ ಬದಲಾವಣೆಯಲ್ಲಿ ಪುರಾತನವಾದ, ನೆಲೆಗೊಂಡ ಸಂಸ್ಕೃತಿಗಳು ಸಂಪೂರ್ಣವಾಗಿ ಸತ್ತುಹೋಗಿಲ್ಲದಿದ್ದರೂ ಬಾಹ್ಯ ಮತ್ತು ಆಂತರಿಕ ದಾಳಿಗಳಿಗೆ ಸಿಕ್ಕಿ ಕುಂದಿಹೋದವು. ಈ ಇಡೀ ವಿದ್ಯಮಾನವು ಸ್ಥಳೀಯ ಜನಜೀವನವನ್ನು ಬಹುಮಟ್ಟಿಗೆ ಅಸ್ತವ್ಯಸ್ತಗೊಳಿಸಿದುದೇ ಅಲ್ಲದೇ ಅದರ ಜೊತೆಗೇ ಬೆಳೆದುಬಂದಿದ್ದ ಅಮೂಲ್ಯವಾದ ಜ್ಞಾನವೂ ಕಣ್ಮರೆಯಾಗುವಂತೆ ಮಾಡಿತು.

ಈ ಅವಧಿಯ ನಂತರ ಪ್ರಪಂಚವು ಮ್ಯೂಸಿಯಂಗಳೆಂಬ ಹೊಸ ಸಂಸ್ಥೆಗಳ ಹುಟ್ಟನ್ನು ಕಂಡಿತು. (Mortuary ಎಂಬ ಪದವೇ ಈ ಪದದ ಮೂಲ ಎಂದು ಹೇಳಲಾಗಿದೆ.)

ಒಮ್ಮೆ ಅಸ್ತಿತ್ವದಲ್ಲಿದ್ದ ಅಪೂರ್ವ ನಾಗರಿಕತೆಯಲ್ಲಿ ಈಗ ಉಳಿದಿರುವುದು ಪೂರ್ತಿಯಾಗಿ ಸೊರಗಿ ಹೋದ ಅದರ ನಿವಾಸ ಸ್ಥಾನಗಳು ಮತ್ತು ಮ್ಯೂಸಿಯಂಗಳಲ್ಲಿ ದಾಖಲಾಗಿರುವ ಅದರ ಜ್ಞಾನಸಂಪತ್ತು ಮಾತ್ರವೇ ಆಗಿದೆ.

ಇತಿಹಾಸದ ಇಂಥ ಒಂದು ಹೆಜ್ಜೆಯ ಹಿಂದಿರುವ ಉದ್ದೇಶವೇನಿರಬಹುದು?

ಇತಿಹಾಸವು ತೆಗೆದುಕೊಂಡ ಒಂದು ಅನಿವಾರ್ಯವಾದ ದಿಕ್ಕೇ ಇದಾಗಿದೆ ಎಂದೂ ಮತ್ತು ಈ ಎಲ್ಲ ಹಾನಿಗಳು ಜರುಗಲೇ ಬೇಕಾಗಿದ್ದುವೆಂದು ಪರಿಗಣಿಸಿದ ಮನುಕುಲವು ತನ್ನ ವಿಸ್ತರಣಾ ಚಟುವಟಿಕೆಯನ್ನು ಬಿಡದೇ ಮುಂದುವರೆಸಿಕೊಂಡೇ ಬರುತ್ತಿದ್ದಂತೆ ಅದರ ಒಂದು ಭಾಗವು, ಪ್ರಪಂಚವು ತನ್ನ ಪುರಾತನ ನಾಗರಿಕ ಸಮಾಜಗಳು ದಯಪಾಲಿಸಿದ್ದ ಪೋಷಣಾತ್ಮಕ ಮೌಲ್ಯಗಳೆಲ್ಲವನ್ನೂ ಕಳೆದುಕೊಳ್ಳುತ್ತಾ ಅದಕ್ಕೆ ತದ್ವಿರುದ್ಧವಾದ ಮೌಲ್ಯ ವ್ಯವಸ್ಥೆಯೊಂದನ್ನು ರೂಢಿಸಿಕೊಳ್ಳುತ್ತಿರುವುದನ್ನು ಮನಗಂಡಿತು. ಪ್ರಾಯಶಃ ಮ್ಯೂಸಿಯಂಗಳ ಹುಟ್ಟು ಇಂಥ ತಳಮಳದಿಂದ ಹುಟ್ಟಿದ ಎಚ್ಚರಿಕೆಯ ಪರಿಣಾಮವೇ ಆಗಿದ್ದು, ಈ–ಈಗಲ್ಲದೆ ಹೋದರೆ ಎಲ್ಲವನ್ನೂ ಕಳೆದುಕೊಳ್ಳ ಬೇಕಾಗಬಹುದು ಎನ್ನುವ ಅರಿವು–ಮ್ಯೂಸಿಯಂಗಳಿಗೆ ಒಂದು ಬೇರೆಯೇ ಅರ್ಥವನ್ನು, ಆಯಾಮವನ್ನು ಕೊಟ್ಟಿತು. ಅವುಗಳ ಅಸ್ತಿತ್ವಕ್ಕೆ ಒಂದು ಸಮರ್ಥನೆಯನ್ನು ಕೊಟ್ಟು ಅವು ಕೇವಲ ಸ್ಮಾರಕಗಳ ರಾಕ್ಷಸ ರಾಶಿಯಾಗಿ ಕೊನೆಗೊಳ್ಳುವುದನ್ನು ತಪ್ಪಿಸಿತು.

ಅಧಿಕಾರದಿಂದ ಮುಕ್ತವಾಗಿರುವ ಯಾವುದೇ ಕಲಿಕೆಯ ಸಾಧ್ಯತೆಗಳ ಬಗ್ಗೆ ಮತ್ತು ಜ್ಞಾನಾರ್ಜನೆಯ ಹಂಬಲಕ್ಕೆ ಬೌದ್ಧಿಕ ಕುತೂಹಲವೇ ಕಾರಣವೆಂಬ ನಂಬಿಕೆಯ ಬಗ್ಗೆ ಬಹಳಷ್ಟೇ ಸಂದೇಹಗಳಿವೆ ಎಂದು ಹೇಳುವ ಅಮರ್ತ್ಯಸೇನರು ಜ್ಞಾನಶೋಧನೆಯ ಬಗ್ಗೆ ಹೀಗೆ ಹೇಳುತ್ತಾರೆ: "ಬೇರೆ ಬೇರೆ ಕಾರಣಗಳಿಗೆ ಜನರು ಜ್ಞಾನವನ್ನು ಶೋಧಿಸುತ್ತಾರೆ. ಪ್ರಯೋಜನಕ್ಕೆ ಬರುವಂಥ ಜ್ಞಾನವು ಅದನ್ನು ಪಡೆದಿರುವಂಥ ವ್ಯಕ್ತಿಗೆ ಒಂದಲ್ಲ ಒಂದು ರೂಪದ ಅಧಿಕಾರವನ್ನು ಕೊಡುವುದು ಸತ್ಯವಾದರೂ ಆದೇ ಜ್ಞಾನದ ಗಣನೀಯ ಅಂಶವಾಗಿರಲಾರದು ಅಥವಾ ಜ್ಞಾನ ಶೋಧನೆಯ ಮೂಲ ಕಾರಣವೂ ಆಗಿರಲಾರದು. ಜ್ಞಾನದ ಬೆನ್ನು ಹತ್ತುವುದೂ ಅಧಿಕಾರದ ಹುಡುಕಾಟವೂ ಒಂದೇ ಎಂದು ಭಾವಿಸುವುದು ಜ್ಞಾನದ ಮೌಲ್ಯವನ್ನು ಅವಗಣನೆ ಮಾಡಿದಂತೆ. ಇದು ಮನುಷ್ಯನ ಒಂದು ಮೂಲ ಲಕ್ಷಣವನ್ನೇ ಕುಂದಿಸಿ ಬಿಡುತ್ತದೆ."

ಈ ಹಿನ್ನೆಲೆಯಲ್ಲಿ ಮಾತ್ರ ನಾವು ಮ್ಯೂಸಿಯಂ ಎಂಬ ಸಂಸ್ಥೆಗಳ ಪ್ರಾಮುಖ್ಯತೆಯನ್ನು ಕಂಡುಕೊಳ್ಳಲು ಸಾಧ್ಯ.

ಭೋಪಾಲದಲ್ಲಿರುವ ಮಾನವ ಸಂಗ್ರಹಾಲಯದ ಹುಟ್ಟು ಇಂಥ ಒಂದು ಹಿನ್ನೆಲೆಯಿಂದಲೇ ಬಂದುದಾಗಿದೆ. ಆ ಪ್ರಾಂತ್ಯದ ಕಲಾಕಾರರೂ, ವಿದ್ವಾಂಸರೂ, ತಮ್ಮ ಕನಸನ್ನು ನನಸಾಗಿಸಲು ಪಟ್ಟ ಅವಿರತ ಶ್ರಮದ ಫಲವೇ ಇದಾಗಿದೆ. ಈಗದು ಒಂದು ಬೃಹತ್ ಸರ್ಕಾರಿ ಸಂಸ್ಥೆಯಾಗಿ ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿ ಹೋಗಿದ್ದರೂ ಕೆಲವೇ ನಿಷ್ಠಾವಂತ ಅಧಿಕಾರಿಗಳ ಮತ್ತು ನಿರ್ದೇಶಕರಿಂದ ಅದು ಇವತ್ತಿಗೂ ತನ್ನ ಮೂಲ ಆಸಕ್ತಿಗಳನ್ನೂ, ಕಾಳಜಿಗಳನ್ನೂ ಉಳಸಿಕೊಂಡು ಬಂದಿದೆ ಎಂದೇ ಹೇಳಬಹುದು. ಒಂದು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಕಲಿಕೆಯ ಕೇಂದ್ರವಾಗಿರುವ ಇಲ್ಲಿ ವರ್ಷ ಪೂರ್ತಿ ನಡೆಯುವ ಚಟುವಟಿಕೆಯಲ್ಲಿ ದೇಶದ ಮೂಲೆಮೂಲೆಯಿಂದ ಬಂದ ಕಲಾಕಾರರೂ, ವಿದ್ಯಾರ್ಥಿಗಳೂ, ಶಿಕ್ಷಣ ಸಂಸ್ಥೆಗಳೂ, ಸಮಾಜ ಸೇವಾ ಸಂಸ್ಥೆಗಳೂ ಒಂದು ಅರ್ಥಪೂರ್ಣ ಸಂವಾದದಲ್ಲಿ ತೊಡಗಿಸಿಕೊಳ್ಳುವ ವ್ಯವಸ್ಥೆಯನ್ನು ಇಲ್ಲಿ ರೂಪಿಸಲಾಗಿದೆ.

ಅಧಿಕಾರ ಒಂದು ಯಂತ್ರದಂತೆ ಆದ ಸಂದರ್ಭದಲ್ಲಿಯೂ ಇಂಥ ಒಂದು ಸಂಸ್ಥೆಯು ಒಬ್ಬ ದೂರದೃಷ್ಟಿಯುಳ್ಳ ವ್ಯಕ್ತಿಯ ನಾಯಕತ್ವದಲ್ಲಿ ಹೇಗೆ ತನ್ನೆಲ್ಲ ಸೀಮಿತತೆಯನ್ನು ದಾಟಿಕೊಳ್ಳುತ್ತಾ ಇಡೀ ಅರ್ಥಕ್ಕೆ ದೊಡ್ಡ ಬದಲಾವಣೆಯನ್ನೇ ತಂದುಕೊಡಬಹುದೆನ್ನುವುದಕ್ಕೆ ಸ್ವಾತಂತ್ರಪೂರ್ವದಲ್ಲಿ ನಡೆಯಿತೆಂದು ಹೇಳಲಾದೇಈ ಘಟನೆಯೇ ಒಂದು ಉದಾಹರಣೆಯಾಗಿದೆ:

ಮ್ಯೂಸಿಯಂಗಳ ರಾಜಧಾನಿ ಎಂದೇ ಹೇಳಲಾಗಿರುವ ಭೋಪಾಲ್‌ನಲ್ಲಿ ಮೊದಲು ಎಡ್ವರ್ಡ್ ಮ್ಯೂಸಿಯಂ ಮಾತ್ರವೇ ಇದ್ದು, ಘೋಷಾಲ್ ಎಂಬುವವರೊಬ್ಬರು ಅದರ ಕ್ಯೂರೇಟರ್ ಆಗಿದ್ದರಂತೆ. ಆಗ ನಮ್ಮನ್ನಾಳುತ್ತಿದ್ದ ಬ್ರಿಟಿಷರು ಒಮ್ಮೆ ಸಾಂಚಿಯ ಸ್ತೂಪವನ್ನು ಯಾವುದೋ ಒಬ್ಬ ಪ್ರಮುಖ ವ್ಯಕ್ತಿಗೆ (ನೆಪೋಲಿಯನ್ ಎಂದು ಭಾವಿಸಲಾಗಿದೆ) ಉಡುಗೊರೆಯಾಗಿ ಕೊಡುವ ಸಲುವಾಗಿ ತೆಗೆದುಕೊಂಡು ಹೋಗಲು ನಿರ್ಧರಿಸಿದರಂತೆ.... ದೇಶದ ಇಂಥ ಒಂದು ಅಮೂಲ್ಯ ಪಾರಂಪರಿಕ ಆಸ್ತಿಯನ್ನು ಕಳೆದುಕೊಳ್ಳಬೇಕಾದ ಅಪಾಯವನ್ನು ಕಂಡ ಘೋಷಾಲರು ಅದನ್ನು ಉಪಾಯದಿಂದ ತಪ್ಪಿಸಿದರಂತೆ. ಅಷ್ಟು ಪುರಾತನವಾದ ಕಲ್ಲಿನ ಕೆತ್ತನೆಯು ಅಂಥ ಪ್ರಯಾಸಕರ ಸಮುದ್ರಯಾನದಲ್ಲಿ ಉಳಿಯುವುದು ಕಷ್ಟವೆಂದೂ; ಹಾಗಾಗಿ ಉಡುಗೊರೆಯು ಮುಜುಗರವೇ ಆಗಿ ಪರಿವರ್ತಿತವಾಗಬಹುದು ಎಂದೂ; ಅದರ ಬದಲಿಗೆ ಹಗುರವಾದ ಕಲ್ಲಿನಲ್ಲಿ ಅದರ ಪ್ರತಿಯನ್ನು ಕೆತ್ತನೆ ಮಾಡಿ ಕಳಿಸುವುದು ಹೆಚ್ಚು ಸೂಕ್ತವೆಂದು ಬ್ರಿಟಿಷರಿಗೆ ಮನವರಿಕೆ ಮಾಡಿದರಂತೆ.





ಅಂಥ ಒಂದು ಪ್ರತಿಯನ್ನು ಮಾಡಲಾಯಿತೋ ಇಲ್ಲವೇ ಎಂಬುದು ಗೊತ್ತಿಲ್ಲದಿದ್ದರೂ ಶ್ರೀಯುತ ಗೋಶಾಲರ ದೂರದೃಷ್ಟಿಯಿಂದ ಮೂಲ ಕೆತ್ತನೆಯು ದೇಶದ ಜನತೆಗೇ ಉಳಿದು ಬಂದಿತ್ತು.

ಈ ರೀತಿಯ ಚೈತನ್ಯ–ಸ್ಫೂರ್ತಿಗಳೊಂದಿಗೆ ಕೆಲಸ ಮಾಡುತ್ತಿರುವ ಮಾನವ ಸಂಗ್ರಹಾಲಯವು ತನ್ನ ಸೀಮಿತ ಅರ್ಥವನ್ನು ಕಳೆದುಕೊಂಡು ಒಂದು ಹೊಸ ಮ್ಯೂಸಿಯಂ ಚಳುವಳಿಯನ್ನು ಬೆಳೆಸಲು ಶ್ರಮಿಸುತ್ತಿರುವುದು ವರ್ಷಪೂರ್ತಿ ನಡೆಯುವ ಅದರ ಚಟುವಟಿಕೆಗಳಲ್ಲಿ ವ್ಯಕ್ತವಾಗುತ್ತದೆ. ಅಲ್ಲಿ ವಿವಿಧ ತೆರನ ಶಿಕ್ಷಣ ಸಂಸ್ಥೆಗಳಿಂದ ಬಂದ ವಿದ್ಯಾರ್ಥಿಗಳು, ವಿವಿಧ ಜ್ಞಾನ ಶಿಸ್ತುಗಳ ಪರಿಣತರು ಮತ್ತು ಸಮಾಜ ಸೇವಕರು ಪ್ರಧಾನವಾಗಿ ಗ್ರಾಮೀಣ ಹಿನ್ನೆಲೆಯಿಂದ ಬಂದ ಕಲಾಕಾರರು ಮತ್ತು ಕುಶಲಕರ್ಮಿಗಳ ಜೊತೆ ಬೆರೆತು ಅಭಿವೃದ್ಧಿ ಕುರಿತ ಹೊಸ ಸಂಕಥನ ಕಟ್ಟಲು ಅವಕಾಶ ಕಲ್ಪಿಸಲಾಗಿದೆ.

ಮಾನವ ಸಂಗ್ರಹಾಲಯದ ಅಸಂಖ್ಯಾತ ಚಟುವಟಿಕೆಗಳ ಭಾಗವಾಗಿ ಈಶಾನ್ಯ ಭಾಗವನ್ನು ಪ್ರತಿನಿಧಿಸುವ ೪೦ ಮಂದಿ ನೇಕಾರರಿಗಾಗಿ ಒಂದು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ವಿದ್ಯಾರ್ಥಿಗಳೂ, ಇತರೆ ಆಸಕ್ತ ನಾಗರಿಕರೂ ಅದರ ಭಾಗವಾಗಿದ್ದರು.

*ವೀಥಿಸಂಕುಲ* ವಿಭಾಗದ ಮೂರು ದೊಡ್ಡ ಹಜಾರಗಳಲ್ಲಿ ಮಗ್ಗಗಳಿಗಾಗಿ ತಾತ್ಕಾಲಿಕ ಬಿದಿರ ಚೌಕಟ್ಟುಗಳನ್ನಿರಿಸಿ ನೇಕಾರರಿಗಾಗಿ ಅವನ್ನು ಬಿಟ್ಟುಕೊಡಲಾಗಿತ್ತು. ಸಾಧಾರಣ ದಿನಗಳಲ್ಲಿ ಜೀವವಿಲ್ಲದ ವಸ್ತುಗಳನ್ನಿರಿಸಿಕೊಂಡು ಸತ್ತಂತಿರುತ್ತಿದ್ದ ವಾತಾವರಣವು ಆ ಹತ್ತು ದಿನಗಳಲ್ಲಿ ಬಣ್ಣ ಬಣ್ಣದ ಸಾಂಪ್ರದಾಯಿಕ ಉಡುಗೆಯಲ್ಲಿದ್ದ ನೇಕಾರರಿಂದಲೂ ಅವರ ಬಣ್ಣ ಬಣ್ಣದ ನೇಯ್ಗೆಯಿಂದಲೂ ಜೀವ ತುಂಬಿ ಸಂಭ್ರಮಿಸಿತು.

ಆ ವಾತಾವರಣವೆಷ್ಟು ಮರುಳುಗೊಳಿಸುವಂಥದ್ದಾಗಿತ್ತು ಎಂಬುದು ಅದೇ ಸಮಯದಲ್ಲಿ ಮ್ಯೂಸಿಯಂಗೆ ಭೇಟಿ ಕೊಡಲು ಬಂದಿದ್ದ ಒಂದು ಗುಂಪು ಶಾಲಾ ಮಕ್ಕಳ ಬಾಯಿಯಿಂದಲೇ ವ್ಯಕ್ತವಾಗುತ್ತಿತ್ತು. “ಅಬ್ಬಾ ಎಷ್ಟೆಷ್ಟು ಬಣ್ಣಗಳು!” ಎಂಬ ಉದ್ಗಾರಗಳು ಅಲ್ಲಿ ಇಲ್ಲಿ ಎಲ್ಲೆಂದರಲ್ಲಿ ಆ ಮಕ್ಕಳ ಬಾಯಿಯಿಂದ ಹೊರಹೊಮ್ಮುತ್ತಾ ಆ ವಾತಾವರಣಕ್ಕೆ ಮತ್ತಷ್ಟು ಉಲ್ಲಾಸವನ್ನು ತುಂಬಿಕೊಟ್ಟಿತ್ತು.

ತಾತ್ಕಾಲಿಕ ಮಗ್ಗಗಳ ಬುಡಕ್ಕೆ ಹಾಸಾಗಿ ಸುತ್ತಲಾಗಿದ್ದ ಹತ್ತಾರು ಬಗೆಯ ಕೆಂಪು, ನೀಲಿ, ಹಸಿರು, ಹಳದಿ ನೂಲುಗಳೂ ಮತ್ತು ಆಕರ್ಷಕ ಮಂದ ಬಣ್ಣಗಳಾದ ಬೂದು, ಹಸಿರು ಮಿಶ್ರಿತ ಬೂದು ನೂಲುಗಳು ಬಿಳಿ ಮತ್ತು ಕಪ್ಪು ನೂಲುಗಳ ಜೊತೆ ಸೇರಿ ಒಂದರ ಜೊತೆಗೆ ಒಂದು ಪೈಪೋಟಿಯಲ್ಲಿರುವಂತೆ ಕಣ್ಣನ್ನು ಸೆಳೆಯುತ್ತಿದ್ದವು. ಅಷ್ಟೇ ಬಣ್ಣ ಬಣ್ಣದ ಸಾಂಪ್ರದಾಯಿಕ ಶೈಲಿಯ ಉಡುಗೆಯಲ್ಲಿದ್ದ ನೇಕಾರರು ಯಾವುದೋ ಬೇರೆ ಪ್ರಪಂಚದವರೇನೋ ಎನ್ನುವಂತೆ ಕಾಣುತ್ತಿದ್ದರು. ಹಾಸಿನ ಒಂದೊಂದೇ ನೂಲನ್ನು ಎತ್ತಿ ಬಿದಿರಿನ ಕಡ್ಡಿಗೆ ಜೋಡಿಸುವ ಸೂಕ್ಷ್ಮ, ಕ್ಲಿಷ್ಟವಾದ ಕೆಲಸವನ್ನು ಮಾಡುತ್ತಿದ್ದ ಅವರ ಬೆರಳುಗಳು ನಂಬಲಾಗದಷ್ಟು ವೇಗವಾಗಿ ಚಲಿಸುತ್ತಿದ್ದವು.

ಇವರನ್ನು ನೋಡಿ ಗಾಂಧೀಜಿ “ನೂಲಿನಿಂದ ಯಕ್ಷ ಕಥೆಯನ್ನೇ ನೇಯುವ ಜನ ಇವರು” ಎಂದು ಉದ್ಗರಿಸಿದ್ದರಲ್ಲಿ ಉತ್ಪ್ರೇಕ್ಷೆಯೇ ಇಲ್ಲ ಎನಿಸುತ್ತದೆ

ಕಣ್ಣರಳಿಸಿ ಮಂತ್ರ ಮುಗ್ಧರಂತೆ ನಿಂತಿದ್ದ ನನ್ನನ್ನೂ ಸೇರಿಕೊಂಡು ಬಾಕಿ ಎಲ್ಲರಿಂದಲೂ ತುಂಬಿ ಹೋಗಿದ್ದ ಹಜಾರದ ವಾತಾವರಣವು ಚಟುವಟಿಕೆಗಳಿಂದ ಉಕ್ಕೇರಿತ್ತು. ಮಾಧ್ಯಮದ ಜನರೂ ತಮಗೆ ದೊರಕಬೇಕಾದ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದರು. ಒಂದು ಘಳಿಗೆಯೂ ಬಿಡುವಿಲ್ಲದೇ ನೇಯುತ್ತಿದ್ದ ಬೆರಳುಗಳು ಕ್ಯಾಮೆರಾ ಎದುರು ಬಂದಾಗ ಮಾತ್ರ ಸುಮ್ಮನಾಗುತ್ತಿದ್ದವು.

ತನ್ನ ಆಜ್ಞಾಪನೆಯ ಮಾತುಗಳಿಂದಲೇ ಎಲ್ಲರನ್ನು ಹಿಂದಕ್ಕೆ ತಳ್ಳಿದ ಕ್ಯಾಮೆರಾಮನ್ ಒಬ್ಬನು ಎಲ್ಲರನ್ನೂ ಅತ್ತಿತ್ತ ದಬ್ಬುತ್ತಾ ಮುಂದೆ ತೂರಿಕೊಂಡು ತನಗೆ ಬೇಕಾದ ಒಂದು ವಿಶೇಷವಾದ ಚಿತ್ರಕ್ಕಾಗಿ ದೊಡ್ಡದಾದ ಜಾಗವನ್ನು ಆಕ್ರಮಿಸಿಕೊಂಡನು. ಯಾರೋ ಇತ್ತೀಚೆಗೆ ಇವರೊಂದು ತಲೆನೋವಾಗಿ ಪರಿಣಮಿಸಿಬಿಟ್ಟಿದ್ದಾರೆ ಎಂದು ಗೊಣಗಿದರು. ಅವನ ಬದಿಯಿಂದಲೇ ಹಣಿಕಿಕ್ಕಿದ ನಮಗೆ ಕ್ಯಾಮೆರಾಕ್ಕೆ ಪೋಸು ಕೊಡುತ್ತಿದ್ದ ನೇಕಾರಳು ಕಂಡಳು.... ತಲೆ ತುಸು ಮೇಲಕ್ಕೇತ್ತಿಕೊಂಡಿತ್ತು..... ಕಣ್ಣುಗಳು ನೇರವಾಗಿ ಕ್ಯಾಮೆರಾವನ್ನೇ ದಿಟ್ಟಿಸುತ್ತಿದ್ದವು.... ಬೆರಳುಗಳು ಮಗ್ಗದ ಮೇಲೆ ಸ್ತಬ್ಧವಾಗಿದ್ದವು..... ಮುಖದ ಮೇಲೆ ಭಯ, ಸಂಕೋಚ ತುಂಬಿದ ಸಣ್ಣ ನಗುವು.....

ಕ್ಯಾಮೆರಾ ಕ್ಲಿಕ್ಕಿಸಿದೊಡನೆ ಅವಳ ಮೇಲ್ತುಟಿಯ ಮೇಲೆ ಹನಿಗೊಂಡು ನಿಂತಿದ್ದ ಬೆವರಗುಳ್ಳೆಗಳು ಆ ಬೆಳಕಿಗೆ ಫಳಕ್ಕನೆ ಮಿಂಚಿದವು....

ನೇಕಾರರು ನೇಯ್ಗೆಯಲ್ಲಿ ನಿರತರಾಗುತ್ತಿದ್ದಂತೆ ಅವರನ್ನು ಗುಂಪಾಗಿಸಿ ಕರೆತಂದಿದ್ದ ಮಧ್ಯವರ್ತಿಗಳು ತಂತಮ್ಮ ‘ವ್ಯವಹಾರ’ದಲ್ಲಿ ನಿರತರಾಗಿದ್ದರು. ಅವರ ಊಟ ವಸತಿಗಳ ಉಸ್ತುವಾರಿ, ಪ್ರಯಾಣಕ್ಕೆ ಟಿಕೇಟು ಕಾಯ್ದಿರಿಸುವುದೂ ಇತ್ಯಾದಿ ಇತ್ಯಾದಿ.... ಹಳ್ಳಿಯ ಮೂಲೆ ಮೂಲೆಗಳಿಂದ ಬಂದಿದ್ದ ನೇಕಾರರಿಗೆ ಈ ಎಲ್ಲ ‘ಅಫೀಷಿಯಲ್’ ಕೆಲಸಗಳಿಗಾಗಿ ಮಧ್ಯವರ್ತಿಗಳ ಅವಶ್ಯಕತೆ ಬೇಕೇಬೇಕಿತ್ತು.

ನೇಯ್ಗೆಯ ಸ್ಥಳಗಳಾಗಿ ಬದಲಾಗಿದ್ದ ಮೂರು ದೊಡ್ಡ ಹಜಾರಗಳಲ್ಲಿ ಒಂದನೆಯದನ್ನು ಅಸ್ಸಾಂ ಮತ್ತು ಮೇಘಾಲಯದ ನೇಕಾರರಿಗಾಗಿ ಬಿಟ್ಟುಕೊಡಲಾಗಿತ್ತು. ಎರಡನೆಯದರಲ್ಲಿ ಮಣಿಪುರಿ ನೇಕಾರರು ತಮ್ಮ ಕಲಾತ್ಮಕ Loin Loomಗಳ ಜೊತೆ ಬೀಡುಬಿಟ್ಟಿದ್ದರು. ಮೂರನೆಯದು ನಾಗಲ್ಯಾಂಡ್, ತ್ರಿಪುರ ಮತ್ತು ಅರುಣಾಚಲ ಪ್ರದೇಶದ ನೇಕಾರರಿಗೆ ಆಶ್ರಯವಾಗಿತ್ತು.

ಈಶಾನ್ಯ ಭಾಗದ ಉದ್ದಗಲಕ್ಕೆ ಪ್ರತಿ ಹೆಣ್ಣು ಮಗಳು ಮದುವೆ ವಯಸ್ಸಿಗೆ ಬರುವುದರೊಳಗೆ ಒಬ್ಬ ದಕ್ಷ ನೇಕಾರಳಾಗಿ ತಯಾರಾಗುವುದು ಅತ್ಯವಶ್ಯಕವಾಗಿತ್ತು. ಹೇಗೆ ಅಡುಗೆ ಕಲಿಯುವುದು ಅವಶ್ಯಕವೋ ಅದೇ ರೀತಿಯಲ್ಲಿ. ಆಕೆ ಎಲ್ಲಾದರೂ ಎಲ್ಲಾ ಸೂಕ್ಷ್ಮ ನೇಯ್ಗೆಯನ್ನು ಕಲಿಯದೆ ಹೋದಲ್ಲಿ ಅವಳಿಗೆ ವರನನ್ನು ಹುಡುಕುವುದೇ ಕಷ್ಟವಾಗುತ್ತಿತ್ತು. ಹಾಗಾಗಿ ಚಿಕ್ಕವಯಸ್ಸಿನಿಂದಲೇ ತನ್ನ ತಾಯಿಯನ್ನೂ ಇತರೇ ಹೆಣ್ಣು ಮಕ್ಕಳನ್ನು ನೋಡುತ್ತ ಅವಳಿಗೆ ನೇಯ್ಗೆ ಕಲಿಯುವುದು ಉಳಿದ ಯಾವುದೇ ಮನೆಗೆಲಸದಷ್ಟೇ ಸಹಜವಾಗಿ ಸಿದ್ಧಿಸುತ್ತಿತ್ತು.

ಈ ಪ್ರಾಂತ್ಯದ ಮೂಲೆ ಮೂಲೆಯಿಂದ ಬಂದಿದ್ದ ಈ ಎಲ್ಲಾ ನೇಕಾರರಲ್ಲಿ ಮೂರು ಮಂದಿ ಮಾತ್ರ ಗಂಡಸು ನೇಕಾರರಿದ್ದರು. ಆಶ್ಚರ್ಯವೆಂಬಂತೆ ಈ ಮೂವರೂ ಅತ್ಯಂತ ಸಾಧು ಸ್ವಭಾವದವರಾಗಿದ್ದರು. ಇದುವರೆಗೂ ಹೆಂಗಸರ ಅಧಿಪತ್ಯದಲ್ಲೇ ಇದ್ದ ನೇಕಾರಿಕೆಯನ್ನು ಈ ಗಂಡಸರು ಒಂದು ದೂರ ದೃಷ್ಟಿಯಿಂದಲೇ ತಮ್ಮ ಕಸುಬಾಗಿ ಆಯ್ಕೆ ಮಾಡಿಕೊಂಡಿದ್ದರು ಎಂದು ಅನಿಸುತ್ತಿತ್ತು.

ಉಳಿದ ಹತ್ತು ದಿನಗಳಲ್ಲಿ ಈ ಈಶಾನ್ಯ ಭಾಗದ ಇಡೀ ಪ್ರಪಂಚವೇ ತೆರೆದುಕೊಂಡಿತ್ತು.... .ಅದರ ಸ್ಪಷ್ಟ ಪ್ರಕಾಶಮಾನವಾದ ಅಂಶಗಳಿಂದ ಮೊದಮೊದಲು ನಂತರ ಕ್ರಮೇಣವಾಗಿ ತನ್ನೊಳಗಿದ್ದ ಎಲ್ಲ ಅಂದಕಾರವನ್ನು ಬಿಚ್ಚಿಡುತ್ತಾ.....

*

೪ನೇ ಪುಟದಿಂದ)

ವಕೀಲರಾಗಿ ಈ ಬಗ್ಗೆ ವಾದಿಸಲು ದಾಖಲೆಗಳಿಲ್ಲದೇ ಅಸಹಾಯಕರಾಗಿದ್ದ ಮಂಜಪ್ಪನವರು ಈ ಕೇಸನ್ನು ರಾಜಿ ಮಾಡಿಸುವಂತೆ ಹೇಳಿ ಕಳಿಸಿದ್ದರು. ಆಗ ಕಿಟ್ಟಪ್ಪ ಗೌಡರು ಸಮಾಜವಾದಿ ಮುಂದಾಳು ಜಿ.ಸದಾಶಿವರಾಯರು (ಈ ಸದಾಶಿವರಾಯರೂ ಕಿಟ್ಟಪ್ಪ ಗೌಡರ ಒಡನಾಡಿ. ಅವರ ಜೀವಿತದ ಕೊನೆಗಾಲದಲ್ಲಿ ಎಷ್ಟೋ ದಿನಗಳನ್ನು ಅವರು ಗೌಡರ ತೀರ್ಥಹಳ್ಳಿ ಮನೆಯಲ್ಲೇ ಕಳೆದಿದ್ದರು) ಮತ್ತು ಇನ್ನೊಬ್ಬ ಭೂನ್ಯಾಯ ಮಂಡಳಿಯ ಸದಸ್ಯರನ್ನು ಮುದ್ದಣ್ಣ ಶೆಟ್ಟಿಯ ಮನೆಗೆ ಸ್ಥಳ ಪರಿಶೀಲನೆಗೆಂದು ಕರೆದೊಯ್ದು ಆತ ನಿಜವಾದ ಸಾಗುವಳಿದಾರನಾಗಿದ್ದ ಸ್ಥಿತಿಯನ್ನು ತೋರಿಸಿ, ಇದನ್ನೇ ಸಾಕ್ಷಿಯಾಗಿ ಒದಗಿಸಿ ನ್ಯಾಯ ದೊರಕಿಸಿಕೊಡಿ ಎಂದು ಕೇಳಿಕೊಂಡರು. ಇವರ ಉಪಾಯ ಫಲಿಸಿ ಶೆಟ್ಟರು ನಾಲ್ಕು ಎಕರೆ ಜಮೀನಿಗೆ ಒಡೆಯರಾದರು.

ಶಿಕ್ಷಕ ವೃತ್ತಿಯಿಂದ ನಿವೃತ್ತರಾದ ನಂತರದಲ್ಲಿಯೂ ಗೌಡರು ಮನೆಯಲ್ಲಿ ತಣ್ಣಗೆ ಕುಳಿತವರಲ್ಲ. ೧೯೮೦ರ ಹೊತ್ತಿಗೆ ಮುಳುಗಡೆ ರೈತರ ಪರವಾಗಿ ಕಡಿದಾಳರೊಂದಿಗೆ ತೀರ್ಥಹಳ್ಳಿಯಲ್ಲಿ ಸಭೆ ನಡೆಸಿಮಾರ್ಗದರ್ಶನ ಮಾಡಿದ್ದಾರೆ. ರೈತ ಹೋರಾಟದಲ್ಲಿ ಭಾಗವಹಿಸಿದ್ದಕ್ಕೆ ಗುಲ್ಬರ್ಗಾದಲ್ಲಿ ಮತ್ತೆ ಜೈಲುವಾಸ ಅನುಭವಿಸುತ್ತಾರೆ. ಗೋಕಾಕ್ ಚಳುವಳಿ, ಕನ್ನಡ ಪರವಾದ ಎಲ್ಲ ಚಳುವಳಿಗಳಲ್ಲಿ ಸಕ್ರಿಯವಾಗಿದ್ದು, ಯುವಕರಿಗೆ ದಾರಿ ತೋರುತ್ತಾರೆ. ರೈತರಿಗೆ, ದಲಿತರಿಗೆ, ಬಡವರಿಗೆ ಅನ್ಯಾಯವಾಗುವಂಥ ಯಾವುದೇ ಘಟನೆ ನಡೆಯಲಿ ದೈಹಿಕವಾಗಿ ನಿತ್ರಾಣರಾಗಿರುವ ವೃದ್ಧಾಪ್ಯದಲ್ಲೂ ಅವರು ಕೆರಳಿ ಕೆಂಡವಾಗುತ್ತಾರೆ. ಅದು ಸ್ಥಳೀಯ ಸಮಸ್ಯೆಯೇ ಆಗಬೇಕೆಂದಿಲ್ಲ. ದೇಶದ ಯಾವ ಮೂಲೆಯಾದಾದರೂ ಗೌಡರು ಅದಕ್ಕೆ ಸ್ಪಂದಿಸುತ್ತಾರೆ. ಮಾಗಡಿ (ರಾಮನಗರ ಜಿಲ್ಲೆ) ತಾಲ್ಲೂಕಿನ ಗಜಗಾರ ಗುಪ್ಪೆಯಲ್ಲಿ ದಲಿತ ಮಹಿಳೆಯೊಬ್ಬಳು ಸವರ್ಣೀಯರಿಂದಾದ ಅವಮಾನದಿಂದ ನೊಂದು ಆತ್ಮಹತ್ಯೆ ಮಾಡಿಕೊಂಡರೆ ಅನ್ಯಾಯವನ್ನು ಖಂಡಿಸಿ ಆಕೆಯ ಪರವಾಗಿ ಮಲೆನಾಡಿನ ಕಿಟ್ಟಪ್ಪಗೌಡರು ನ್ಯಾಯಾಲಯದ ಮೊರೆ ಹೋಗುತ್ತಾರೆ. ಅಣ್ಣಾ ಹಜಾರೆಯವರ ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ತೀರ್ಥಹಳ್ಳಿಯ ತಾಲ್ಲೂಕು ಕಛೇರಿ ಎದುರು ಏಕಾಂಗಿಯಾಗಿ ಉಪವಾಸ ಕುಳಿತುಕೊಳ್ಳುತ್ತಾರೆ.

ತೀರ್ಥಹಳ್ಳಿಯ ಸಮಾಜವಾದಿ ಧುರೀಣರೆಲ್ಲರೊಡನೆ ಹೆಗಲೆಣೆಯಾಗಿ ದುಡಿದವರಾದರೂ ಕಿಟ್ಟಪ್ಪನರು ಪಕ್ಷ ರಾಜಕಾರಣ ನಡೆಸಿ ಆ ಮೂಲಕ ಅಧಿಕಾರ ಸ್ಥಾನ ಅಥವಾ ಜನನಾಯಕ ಪಟ್ಟ ಗಳಿಸಿದವರಲ್ಲ. (ಅವರು ಸರ್ಕಾರಿ ನೌಕರರಾಗಿದ್ದುದ್ದೂ ಇದಕ್ಕೆ ಕಾರಣವಾಗಿದ್ದಿರಬಹುದು) ಸಮಾಜವಾದಿ ತತ್ವಾದರ್ಶಗಳನ್ನೇ ನೆಮ್ಮಿ ಸರಳವಾಗಿ ಬದುಕುತ್ತಿರುವ ಇಂತವರ ಇರುವಿಕೆಯೇ ದಾರಿ ತಪ್ಪಿರುವ ಸಮಾಜಕ್ಕೆ ಸರಿದಾರಿ ತೋರುವ ದೀವಿಗೆಯಾಗಿದೆ.

**–ಡಾ. ಜೆ.ಕೆ. ರಮೇಶ್**

---

೫ನೇ ಪುಟದಿಂದ)

ಇದೇ ಹೊತ್ತಿನಲ್ಲಿ ಭದ್ರಾ ಪ್ರಾಜೆಕ್ಟ್‌ನಲ್ಲಿದ್ದ ಸ್ನಾತಕೋತ್ತರ ಕೇಂದ್ರದಲ್ಲಿ ಅರ್ಥಶಾಸ್ತ್ರದ ಆಧ್ಯಾಪಕರಾಗಿದ್ದ, ಹುಟ್ಟಿನಿಂದ ದಲಿತರಾದ ರುದ್ರಪ್ಪ ಹನಗವಾಡಿಯವರು ಮಿತ್ರ ಜ್ಞಾನೇಂದ್ರ ಪ್ರಭುರವರೊಂದಿಗೆ ನಮ್ಮ ಮನೆಗೆ ಬಂದು ಬ್ರಾಹ್ಮಣ ಜಾತಿಗೆ ಸೇರಿದ ತಮ್ಮ ವಿದ್ಯಾರ್ಥಿನಿ ಗಾಯಿತ್ರಿಯನ್ನು ವಿವಾಹವಾಗುವ ಪ್ರಸ್ತಾಪವನ್ನು ಕೃಷ್ಣಪ್ಪನವರ ಮುಂದಿಟ್ಟರು. ಬ್ರಾಹ್ಮಣರು ಮತ್ತು ದಲಿತರ ವಿವಾಹದ ಪರಿಣಾಮಗಳನ್ನು ಸ್ವತಃ ಎದುರಿಸಿದ್ದ ಕೃಷ್ಣಪ್ಪ ಹಾಗೂ ನಾವೆಲ್ಲರೂ ಸೇರಿ ವಿವರವಾಗಿ ಚರ್ಚಿಸಿದೆವು. ಮುಂದಿನವಾರದಲ್ಲಿ ಭದ್ರಾವತಿಯ ಸಬ್–ರಿಜಿಸ್ಟ್ರಾರ್ ಕಚೇರಿಯಲ್ಲಿ ಮದುವೆ ಮಾಡಿಸಲು ದಿನಾಂಕ ಗೊತ್ತುಪಡಿಸಿದೆವು. ಆ ದಿನ ಗಾಯತ್ರಿ ಗೆಳತಿ ಯಶೋದಾಳೊಂದಿಗೆ ನಮ್ಮ ಮನೆಗೆ ಬಂದರು. ರುದ್ರಪ್ಪ,, ಪ್ರಭು ಮತ್ತು ಗೆಳೆಯರೆಲ್ಲರೂ ಸೇರಿ ನೋಂದಣಾಧಿಕಾರಿಗಳವರ ಕಚೇರಿಯಲ್ಲಿ ವಿವಾಹ ನೋಂದಣಿ ಮಾಡಿಸಿದೆವು.

ಗಾಯಿತ್ರಿಯವರ ತಂದೆ ಎನ್.ಆರ್.ಪುರದ ನಂಜುಂಡಭಟ್ಟರು ಶೃಂಗೇರಿ ಮಠದ ಅನುಯಾಯಿಗಳು, ವೇದ ಪಂಡಿತರು. ಎನ್.ಆರ್.ಪುರದಲ್ಲಿ ವಾಸವಿದ್ದರು. ನಮ್ಮ ಮನೆಯಲ್ಲಿ ಮುಂದೆ ಎದುರಾಗಬಹುದಾದ ಸಮಸ್ಯೆಗಳ ಕುರಿತು ಚರ್ಚಿಸಲಾಗುತ್ತಿತ್ತು. ನಾನು ಆ ದಿನ ರಜೆ ಹಾಕಿ ಮನೆಯಲ್ಲಿದ್ದೆ. ಮುಗ್ಧೆ ಗಾಯಿತ್ರಿ ಭಾವೋದ್ವೇಗಕ್ಕೊಳಗಾಗಿದ್ದಳು. ತಾನು ತನ್ನ ಮನೆಗೆ ಹೋಗಿ, ತಾನು ಮದುವೆಯಾದ ವಿಚಾರ ಹೇಳಿ ಬರುವುದಾಗಿ ಕೇಳಿಕೊಳ್ಳುತ್ತಿದ್ದಳು. ಆದರೆ ಇಂತಹ ಮದುವೆಯಾಗಿ ಮದುಮಗಳು ತಾಯಿಯ ಮನೆಗೆ ಹೋದರೆ ಜೀವಂತವಾಗಿ ಹೊರಬರಲು ಸಾಧ್ಯವೇ? ಎಂಬ ಚಿಂತೆ ನಮ್ಮದಾಗಿತ್ತು. ಕೊನೆಗೆ ಜ್ಞಾನೇಂದ್ರ ಪ್ರಭು ಹಾಗೂ ಅವರ ಸಹೋದ್ಯೋಗಿ ಕೇಶವಮೂರ್ತಿಯವರು ಮದುವೆ ಸಂದೇಶವನ್ನು ಅವರ ಮನೆಗೆ ತಿಳಿಸಿ ಬರುವುದೆಂದು ನಿರ್ಧರಿಸಲಾಯಿತು. ಅವರು ಅಲ್ಲಿಗೆ ಹೊರಟ ನಂತರ, ರುದ್ರಪ್ಪ – ಗಾಯಿತ್ರಿ ಜೋಡಿ ಮೈಸೂರಿಗೆ ಪ್ರಯಾಣ ಬೆಳೆಸಿತು.

ಒಂದು ವಾರದ ನಂತರ ಪ್ರಾಜೆಕ್ಟ್‌ನ ಸ್ನಾತಕೋತ್ತರದ ಕೇಂದ್ರದ ಸಭಾಂಗಣವೊಂದರಲ್ಲಿ ಇವರಿಬ್ಬರಿಗಾಗಿ ಸಂತೋಷ ಕೂಟವೊಂದನ್ನು ಏರ್ಪಡಿಸಲಾಯಿತು. ತೀನಂ. ಶಂಕರನಾರಾಯಣ, ಶ್ರೀಕಂಠ ಕೂಡಿಗೆ ಮುಂತಾದ ಅಧ್ಯಾಪಕ ಮಿತ್ರರು, ಹರಿಹರದ ಮಹಾಂತೇಶ್, ವೀರಪ್ಪಮಾರು, ಶಿವಮೊಗ್ಗದ ವಿದ್ಯಾರ್ಥಿ ಮಿತ್ರರು, ದಸಂಸದ ಗೆಳೆಯರ



**ಗಾಯತ್ರಿಯವರ ಮದುವೆಯ ಸಂದರ್ಭದಲ್ಲಿ ವಧೂವರರೊಂದಿಗೆ ಇಂದಿರಾ ಮತ್ತು ಕೃಷ್ಣಪ್ಪ, ದಿ. ಪ್ರೊ. ಕೇಶವ ಮೂರ್ತಿ, ಅವರ ಪತ್ನಿ, ಸುಶೀಲಾ ನೆಲ್ಲಿಸರ ಮುಂತಾದವರು.**

ಬಳಗ, ಪ್ರಗತಿಪರರಾದ ನಾಗೇಂದ್ರರಾವ್, ಬಿ. ರಾಜಣ್ಣ, ಮುಂತಾದ ಸ್ನೇಹಿತರು ಅಲ್ಲಿ ಸೇರಿದ್ದರು. ಹಾರ ವಿನಿಮಯ, ಹಾಡುಗಳು, ರುದ್ರಪ್ಪನವರ ಸ್ವಾಗತ, ಕೃಷ್ಣಪ್ಪನವರ ಮಾತು, ಗೆಳೆಯರ ಮಾತುಕತೆಗಳು ನಡೆದು ಸಂತೋಷಕೂಟದ ಅಂತಿಮ ಹಂತಕ್ಕೆ ಬಂದಾಗ ಗಾಯಿತ್ರಿಯವರ ತಂದೆ ಹಾಗೂ ಅಣ್ಣ ಜಗನ್ನಾಥರು ಅಲ್ಲಿಗೆ ಬಂದರು.. ಮಾತನಾಡಲು ಅವಕಾಶ ಕೇಳಿದರು. ತಂದೆ – ಮಕ್ಕಳ ಸಂಬಂಧಗಳಲ್ಲಿ ಮಮಕಾರ, ಭಾವವೇಶಗಳ ಹಿನ್ನೆಲೆಯಲ್ಲಿ ಸಮಾರಂಭದಲ್ಲಿ ಗೊಂದಲವಾಗುವುದು ಬೇಡವೆಂದೆಣಿಸಿ ಕೂಟವನ್ನು ಮುಕ್ತಾಯಗೊಳಿಸಿ ಅಲ್ಲಿಂದ ಹೊರೆಟವು. ಗಾಯತ್ರಿಯವರ ತಂದೆ ಮತ್ತು ಅಣ್ಣ ನಮ್ಮನ್ನೆಲ್ಲ ಮನಬಂದಂತೆ ಶಪಿಸಿ ಅಲ್ಲಿಂದ ತೆರಳಿದರು.

ಆದರೆ ಮುಂದಿನ ದಿನಗಳಲ್ಲಿ ಗಾಯತ್ರಿಯ ತವರು ಮನೆಯಲ್ಲಿ ರುದ್ರಪ್ಪ ಅಚ್ಚುಮೆಚ್ಚಿನ ಅಳಿಯನಾಗಿಅ ಅವರ ಕಷ್ಟ ಸುಖಗಳಲ್ಲಿ ಭಾಗಿಯಾದದ್ದೂ, ಹಾಗೇ, ರುದ್ರಪ್ಪನ ಮನೆಯಲ್ಲಿ ಗಾಯಿತ್ರಿ ನೆಚ್ಚಿನ ಸೊಸೆಯಾದದ್ದು ಒಂದು ಬೇರೆಯೇ ಕಥೆ!

**(ಮುಂದುವರೆಯುವುದು)**

ಸಮಕಾಲೀನ

# ಕೋಮುವಾದ: ಬೇರು ಮತ್ತು ಬಿಳಲುಗಳು



ಕಳೆದ ಸಂಚಿಕೆಯಲ್ಲಿ ಭಾರತದಲ್ಲಿ ಕೋಮುವಾದದ ರಾಜಕಾರಣ ಇಂದು ಭಯೋತ್ಪಾದನೆಯ ರೂಪ ತಳೆದು ಹೇಗೆ ಕ್ರಿಯೆ-ಪ್ರತಿಕ್ರಿಯೆಗಳ ಸರಣಿಯಾಗಿ ರಾಷ್ಟ್ರ ಜೀವನವನ್ನು ಅಸ್ತವ್ಯಸ್ತಗೊಳಿಸುತ್ತಿದೆ ಎಂಬುದನ್ನು ವಿಷದಪಡಿಸುವ ವಿಶೇಷ ಲೇಖನವೊಂದನ್ನು ಪ್ರಕಟಿಸಿದ್ದೆವು. ಈಗ ಅದರ ಮುಂದುವರಿಕೆಯಾಗಿ ಈ ಕೋಮುವಾದದ ಮೂಲ ನೆಲೆ-ಸೆಲೆಗಳನ್ನು ಗುರುತಿಸುವ ಒಂದು ಪ್ರಯತ್ನವನ್ನು ಇಲ್ಲಿ ಮಾಡುತ್ತಿದ್ದೇವೆ.

ಸ್ವಾತಂತ್ರ್ಯಾನಂತರದ ನಾಲ್ಕು ದಶಕಗಳ ಕಾಲ ಅಲ್ಲಲ್ಲಿ ಆಗಾಗ ತಲೆಯೆತ್ತಿ ಮರೆಯಾಗುತ್ತಿದ್ದ ಕೋಮುವಾದ ಇತ್ತೀಚಿನ ವರ್ಷಗಳಲ್ಲಿ ರಾಷ್ಟ್ರಜೀವನದ ಒಂದು ನಿತ್ಯ ಅನಿಷ್ಟದ ರೂಪ ತಳೆದಿರುವಂತಾಗಲು ನಿಜವಾದ ಕಾರಣ ಏನು? ಈ ಬಗ್ಗೆ ಈಗ ಸಾಕಷ್ಟು ಅಧ್ಯಯನಗಳಾಗುತ್ತಿದ್ದು, ಕೋಮುವಾದದ ಬೀಜಗಳನ್ನು ರಾಷ್ಟ್ರೀಯ ಹೋರಾಟದ ಆಜುಬಾಜಿನಲ್ಲಿ ಮಾತ್ರವಲ್ಲ, ಅದರ ಕೇಂದ್ರದಲ್ಲೇ ಪ್ರಜ್ಞಾಪೂರ್ವಕವಾಗಿಯೂ ಮತ್ತು ಅಪ್ರಜ್ಞಾಪೂರ್ವಕವಾಗಿಯೂ ಬಿತ್ತಲಾಗಿದ್ದರ ಸಾಕ್ಷ್ಯಗಳು ಹೊರಬರುತ್ತಿವೆ. ಮುಖ್ಯವಾಗಿ ಇದರ ಮೂಲ ಬೀಜಗಳು ರಾಷ್ಟ್ರೀಯ ಹೋರಾಟವೆಂಬುದರಲ್ಲಿನ ರಾಷ್ಟ್ರದ ಪರಿಕಲ್ಪನೆಯನ್ನು ಕಟ್ಟುವ ಪ್ರಕ್ರಿಯೆಯಲ್ಲಿ ಉಂಟಾದ ತೊಡಕುಗಳನ್ನು ಸ್ವಾತಂತ್ರ್ಯ ಗಳಿಕೆಯ ಹೊತ್ತಿನವರೆಗೂ ನೇರವಾಗಿ, ದಿಟ್ಟವಾಗಿ ಎದುರಿಸಿ ನಿವಾರಿಸಲಾಗದೆ ರಾಷ್ಟ್ರ ವಿಭಜನೆಯನ್ನು ಒಪ್ಪಿಕೊಳ್ಳಬೇಕಾದ ಅಸಹಾಯಕ ಅನಿವಾರ್ಯತೆಯಲ್ಲಿ ಕಾಣಬರುತ್ತವೆಂದು ಹೇಳಲಾಗುತ್ತದೆ. ಅದರ ನಿರಂತರ ಪರಿಣಾಮಗಳನ್ನು ನಾವಿಂದು ಕೋಮು ಗಲಭೆಗಳ ರೂಪದಲ್ಲಿ ಮತ್ತು ಅವನ್ನು ನಿಲ್ಲಿಸಲಾಗದ ನಮ್ಮ ಅಸಹಾಯಕತೆಯಲ್ಲಿ ಕಾಣುತ್ತಿದ್ದೇವೆ. ಈ ಸಂಚಿಕೆಯ ಮೂರು ಲೇಖನಗಳು ಈ ವಿದ್ಯಮಾನವನ್ನು ಮೂರು ಬೇರೆ ಬೇರೆ ನೆಲೆಗಳಿಂದ ನೋಡುತ್ತಾ, ನಮ್ಮನ್ನು ಬೇರೆ ಬೇರೆ ನೆಲೆಗಳಲ್ಲಿ ಯೋಚನೆಗೆ ಹಚ್ಚುತ್ತವೆ. ಬರಲಿರುವ ಲೋಕಸಭಾ ಚುನಾವಣೆಯಲ್ಲಿ ಜನರ ಆಯ್ಕೆಗೆ ಹೂಡಲಾಗಿರುವ ವಿಷಯಗಳಲ್ಲಿ ಕೋಮುವಾದದ ಪ್ರಶ್ನೆ ಎದ್ದು ಕಾಣುತ್ತಿದ್ದು, ಓದುಗರು ಈ ಕುರಿತು ಅಗತ್ಯ ತುರ್ತಿನೊಂದಿಗೆ ಇಲ್ಲಿ ಚರ್ಚಿಸುವರು ಎಂದು ಭಾವಿಸುವೆ-ಸಂಪಾದಕ

## ರಾಷ್ಟ್ರ ವಿಭಜನೆಯೆಂಬ ದುರಂತದ ಸುತ್ತಮುತ್ತ

-ಪ್ರದೀಪ್ ಕುಮಾರ್ ಶೆಟ್ಟಿ ಕೆ


**ಕೋ**ಮುವಾದ ಮತ್ತು ಕೋಮುವಾದೀ ಪಕ್ಷಗಳು ಪ್ರಸ್ತುತ ಸಾಮಾಜಿಕ-ರಾಜಕೀಯ ಸಂದರ್ಭದ ಪ್ರಮುಖ ವಿದ್ಯಮಾನಗಳು. ಇಂದು ಕೋಮುವಾದ ನೇರವಾಗಿ ರಾಜಕಾರಣ ಮತ್ತು ರಾಜಕೀಯ ಫಲಾಪೇಕ್ಷೆಗೆ ಸಂಬಂಧಿಸಿದೆಯಾದರೂ ಅದನ್ನು ನೇರವಾಗಿ ಮತ್ತು ಬರೀ ರಾಜಕಾರಣದಿಂದ ಉಂಟಾದಂತಹ ವಿದ್ಯಮಾನವೆಂದು ಹೇಳುವ ಹಾಗಿಲ್ಲ. ಇಂತಹ ಸಲೀಸಾದ ಮತ್ತು ಸುಲಭವಾದ ಸಾಮಾನ್ಯೀಕರಣ ಅಥವಾ ತೀರ್ಮಾನ, ಧರ್ಮದ ಉಗಮದ ಕುರಿತು ಮಾರ್ಕ್ಸ್ ಹೇಳಿದ ವಿವರಣೆಯ ರೀತಿಯದಾಗಿಬಿಡುತ್ತದೆ. ಧರ್ಮವನ್ನೇ ತೆಗೆದುಕೊಂಡರೆ ಒಂದು ಸಮಾಜದ ಭೌತಿಕತೆಯ ರೂಪಕವಾಗಿ ಅದನ್ನು ಕಾಣಬಹುದಾದರೂ ಅದು ಅಷ್ಟು ಮಾತ್ರವಲ್ಲದೇ ನೀತಿಗೆ, ಭಾವಾತೀತತೆಗೆ, ಅತಿಮಾನುಷೀಯ ನಂಬಿಕೆಯ ಕ್ರಮ ಮತ್ತು ಮೂಲಾಂಶಗಳ ಫಲವಾಗಿಯೂ ಕೂಡಾ ಅದು ವ್ಯಕ್ತವಾಗುತ್ತದೆ. ಹೀಗೆ ಕೋಮುವಾದವೂ ಕೂಡಾ ಅತ್ಯಂತ ಸಪಾಟಾದ, ನೇರ ತರ್ಕದ ಸರಳ ವಿದ್ಯಮಾನವಲ್ಲ. ಬದಲು ಅತ್ಯಂತ ಸೂಕ್ಷ್ಮವಾಗಿ ಅದನ್ನು ನಾವು ಗ್ರಹಿಸಬೇಕಾಗುತ್ತದೆ. ಏಕೆಂದರೆ, ಕೋಮುವಾದ ಸಮಕಾಲೀನ ಸಮಾಜದ ದೊಡ್ಡ ಸವಾಲು ಹಾಗೆ ಸಮಸ್ಯೆ ಕೂಡಾ.

ಭಾರತದಲ್ಲಿ ಚಾರಿತ್ರಿಕವಾಗಿ ಕೋಮುವಾದದ ಬೆಳವಣಿಗೆಯನ್ನು ಗಮನಿಸಿರುವ ಅಸ್ಗರ್ ಆಲಿ ಇಂಜಿನಿಯರ್ ಮತ್ತು ಬಿಪನ್ ಚಂದ್ರರ ಪ್ರಕಾರ ಸರಿಸುಮಾರು ೧೯೨೦ರ ಹೊತ್ತಿಗೇನೇ ಕೋಮುವಾದ ಆರಂಭವಾಯಿತು. ಕೆಲವು ಚಿಂತಕರು ಇದನ್ನು ಒಪ್ಪದೆ, ೧೮೯೦ರ ದಶಕದ ಸಮಜೋ-ಧಾರ್ಮಿಕ ಚಳುವಳಿಗಳು ಮತ್ತು ೧೯೦೦-೧೯೧೦ರ ಸುಮಾರಿಗೆ ತಿಲಕರು ಸ್ವಾತಂತ್ರ್ಯ ಚಳುವಳಿಯ ಸಂಘಟನೆಗೆ ಬಳಸಿದ ಧಾರ್ಮಿಕ ಪ್ರತಿಮೆಗಳೇ ಕೋಮುವಾದದ ಬೀಜರೂಪವಾಗಿದ್ದವೆಂದೂ ಅಭಿಪ್ರಾಯಪಡುತ್ತಾರೆ. ಜ್ಯೋತಿರ್‌ಮಯ್ ಶರ್ಮರಂತಹ ರಾಜ್ಯಶಾಸ್ತ್ರಜ್ಞರು ಗಾಂಧೀಜಿಯು ಚಳುವಳಿಯಲ್ಲಿ ಬಳಸಿ, ಚಾಲ್ತಿಗೆ ತಂದ ಕೆಲ ಧಾರ್ಮಿಕ ಪರಿಭಾಷೆ ಮತ್ತು ಕಲ್ಪನೆಗಳನ್ನೂ ಕೂಡಾ ಇದಕ್ಕೆ ಕೊಡುಗೆ ನೀಡಿದ ಅಂಶಗಳೆಂದೂ ವಿಶ್ಲೇಷಿಸುತ್ತಾರೆ. ಇಂತಹ ತಾತ್ವಿಕ ಭಿನ್ನಾಭಿಪ್ರಾಯಗಳು ಏನೇ ಇದ್ದರೂ ಕೋಮುವಾದವೆಂಬ ವಾಸ್ತವ ಮತ್ತು ಅನುಭವ ಬಹು ವೈವಿಧ್ಯದ ಭಾರತೀಯ ಸಮಾಜವನ್ನು ನಲುಗಿಸಿದ್ದಂತೂ ನಿಜ.. ಅದು ಬರೀ ೧೯೪೭ರ ನಂತರ ರಾಷ್ಟ್ರೀಯ



ಹೋರಾಟದ ಪ್ರಮುಖ ಬಳುವಳಿಯಾದ ಮತನಿರಪೇಕ್ಷತೆಯ (ಸೆಕ್ಯುಲರಿಸಂ) ತತ್ವ ಮತ್ತು ಸಹಬಾಳ್ವೆಯನ್ನು ಮಾತ್ರ ಘಾಸಿಗೊಳಿಸಲಿಲ್ಲ, ಬದಲಿಗೆ ಈಗಷ್ಟೇ ಸ್ವತಂತ್ರಗೊಂಡು ಸಾಮ್ರಾಜ್ಯಶಾಹಿಯ ತೆಕ್ಕೆಯಿಂದ ಬಿಡಿಸಿಕೊಂಡು ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ದಿಕ್ಕೆಟ್ಟ ಪರಿಣಾಮದಿಂದಾಗಿ ಮತ್ತೆ ತನ್ನ ನೆಲೆಯನ್ನು ಕಂಡುಕೊಳ್ಳಬೇಕಿದ್ದಂತಹ ಸಮಾಜವನ್ನು ಪುನಃ ಸಂಕಷ್ಟಗಳಿಗೆಡೆಗೆ ದೂಡಿದ ಕಾರಣದ ಹಿನ್ನೆಲೆಯಲ್ಲಿ ನಾವು ಕೋಮುವಾದವನ್ನು ವಿಭಜನಾಪೂರ್ವ ಮತ್ತು ವಿಭಜನೋತ್ತರ ಅವಧಿಗಳೆಂದು ವಿಂಗಡಿಸಿಕೊಂಡು ಆ ಅವಧಿಗಳ ರಾಜಕಾರಣವನ್ನು ವಿಶೇಷವಾಗಿ ಗಮನಿಸಬೇಕಾಗುತ್ತದೆ.


೧೯೨೦ರ ದಶಕದಿಂದ ಪ್ರಬಲಗೊಂಡ ಬಲಪಂಥೀಯ ರಾಜಕಾರಣ ಮತ್ತು ಅದಕ್ಕೆ ಸಮಾನಾಂತರವಾಗಿ ಸಾಗಿದ ಮುಸ್ಲಿಂ ಲೀಗ್ ರಾಜಕಾರಣವು ಸ್ವಾತಂತ್ರ್ಯ ಗಳಿಕೆಯ ಹೊಸ್ತಿಲಿನಲ್ಲೇ ದ್ವಿರಾಷ್ಟ್ರ ಸಿದ್ಧಾಂತ ಮತ್ತದರ ಕಾರ್ಯಶೀಲ ರೂಪವಾದ ದೇಶ ವಿಭಜನೆಯನ್ನೂ ಮುಖಾಮುಖಿಯಾಗಬೇಕಾಯಿತು.. ಆಗಸ್ಟ್ ೧೫, ೧೯೪೭ ಹಲವು ವೈರುಧ್ಯಗಳ ವಾಸ್ತವದ ದಿನಾಂಕವಾಗಿ ದೇಶವು ಭಾರತ ಮತ್ತು ಪಾಕಿಸ್ತಾನವೆಂದು ವಿಭಜಿತಗೊಂಡಿತು. ಈ ವಿಭಜನೆ



ಮತ ನಿರಪೇಕ್ಷತೆ ಮತ್ತು ಕೋಮುವಾದೀ ಶಕ್ತಿಗಳ ನಡುವಿನ ಸಮರದ ಹಾಗೆ ಸಾಗಿತು. ವಿಭಜನೆಗೆ ಕಾಂಗ್ರೆಸ್ ಒಪ್ಪಿದ್ದು ಯಾಕೆ? ಬ್ರಿಟಿಷರು ಭಾರತವನ್ನು ಯಾಕೆ ಬಿಟ್ಟು ಹೋದರು? ಎಂಬ ಪ್ರಶ್ನೆಗಳಿಗೆ ಒಮ್ಮತದ ಉತ್ತರಗಳು ಇಲ್ಲವಾದರೂ, ಈ ಪ್ರಶ್ನೆಗಳ ಹೊರತಾಗಿಯೂ ನಾವು ವಿಭಜನೆ, ಮತ್ತದಕ್ಕೆ ಕಾರಣ ಹಾಗೂ ಕೋಮುವಾದದ ಬೆಳವಣಿಗೆಯ ನೆಲೆಗಳನ್ನು ಗುರುತಿಸಬಹುದಾಗಿದೆ. ಬ್ರಿಟಿಷರ ಸಾಮ್ರಾಜ್ಯಶಾಹಿ ಧೋರಣೆಯ ಅಂತಿಮ ಪರಿಣಾಮ ಭಾರತೀಯರಿಗೆ ಸ್ವಯಮಾಡಳಿತವನ್ನು ನೀಡುವುದೇ ಆಗಿತ್ತಾದರೂ ಆ ಪ್ರಕ್ರಿಯೆಯಲ್ಲಿ ವಿಭಜನೆ, ಮತ್ತದು ಸೃಷ್ಟಿಸಿದ ಕೋಮುಗಲಭೆ ಹಾಗೂ ಕೋಮುವಾದ ಸೃಷ್ಟಿಯಾಗುತ್ತದೆಂದು ಯಾರೂ ನಿರೀಕ್ಷಿಸರಲಾರರು.

ವಿಭಜನೆ ಮತ್ತು ಕೋಮುವಾದ ಕುರಿತಂತೆ ಅತ್ಯಂತ ಸೃಜನಶೀಲ ಅಧ್ಯಯನ ಮಾಡಿದ ಗ್ಯಾನೇಂದ್ರ ಪಾಂಡೆ ತಮ್ಮ *'ರಿಮೆಂಬರಿಂಗ್ ಪಾರ್ಟಿಶನ್'* ಮತ್ತು ಸುಚೇತಾ ಮಹಾಜನ್, ತಮ್ಮ *'ಇಂಡಿಪೆಂಡೆನ್ಸ್ ಆ್ಯಂಡ್ ಪಾರ್ಟಿಶನ್ – ದಿ ಇರೋಶನ್ ಆಫ್ ಕಲೊನಿಯಲ್ ಪವರ್ ಇನ್ ಇಂಡಿಯಾ'* ಕೃತಿಯಲ್ಲಿ ದ್ವಿತೀಯ ವಿಶ್ವ ಯುದ್ಧೋತ್ತರ ಅವಧಿಯಲ್ಲಿ ಅತ್ಯಂತ ವೈವಿಧ್ಯವಾಗಿ, ಸಮಾನಾಂತರ ಓಟದ ಹಾಗೆ ಬೆಳೆದಿದ್ದ ಮುಸ್ಲಿಂ ಲೀಗ್‌ನ ರಾಜಕಾರಣ ಮತ್ತು ಕೋಮುವಾದ ಹಾಗೂ ಹಿಂದೂ ಬಲಪಂಥೀಯ ಕೋಮುವಾದಿಗಳನ್ನು ಪ್ರಮುಖ ಗುರಿಯಾಗಿಸುತ್ತಾರೆ. ಅದು ಈ ಸಂದರ್ಭದಲ್ಲಿ ಅತ್ಯಂತ ಬಿರುಸನ್ನು ಕಂಡು ೧೯೪೭ ಸ್ವಾತಂತ್ರ್ಯ– ವಿಭಜನೆ ಮತ್ತು ಅದರ ನಂತರ ಕೋಮು ಗಲಭೆ ಹಾಗೂ ನಂತರ ಮುಂದುವರಿದಂತಹ ಕೋಮುವಾದವನ್ನು ಸೃಷ್ಟಿಸಿತೆಂದೂ ಅಭಿಪ್ರಾಯಪಡುತ್ತಾರೆ. ಸುಚೇತಾ ಮಹಾಜನ್ ಇನ್ನೂ ಮುಂದುವರಿದು, ಬ್ರಿಟಿಷ್ ರಾಜ್ ಮತ್ತು ರಾಷ್ಟ್ರೀಯ ಹೋರಾಟದ ನಡುವಿನ ವೈರುಧ್ಯಗಳ ಫಲ ಕೂಡಾ ವಿಭಜನೆ ಮತ್ತು ಅದರ ಸುತ್ತಲಿನ ಕೋಮುವಾದದ ಬೀಜವೆಂದೂ ಕೂಡಾ ಹೇಳುತ್ತಾರೆ. ಆ ಹೊತ್ತಿಗೆ ರಾಷ್ಟ್ರೀಯ ಹೋರಾಟದ ಒಡಲಿನಲ್ಲಿಯೇ ಕಾಂಗ್ರೆಸ್ ಸೆಕ್ಯುಲರಿಸಂ ಅನ್ನು ಪ್ರಚುರಪಡಿಸುತ್ತಿದ್ದರೆ, ಇನ್ನೊಂದು ಕಡೆ ಕಾಂಗ್ರೆಸ್‌ಗೆ ಕೆಲವೊಮ್ಮೆ ಸ್ವಲ್ಪ ಹತ್ತಿರ ಬರುತ್ತಿದ್ದ ಹಿಂದೂ ಬಲಪಂಥ, ವಿಶೇಷವಾಗಿ ಹಿಂದೂ ಮಹಾ ಸಭಾ ಮತ್ತು ಉಳಿದ ಗುಂಪುಗಳು ಅತ್ಯಂತ ಭಾವನಾತ್ಮಕವಾಗಿ ಮತ್ತು ಉಗ್ರವಾಗಿ ತಮ್ಮ ಹೊಸ ಭಾರತ('ನ್ಯೂ ಇಂಡಿಯಾ')ವನ್ನು ವ್ಯಾಖ್ಯಾನಿಸುತ್ತಾ, ಅದರ ಅನ್ವಯದ ಕಾರ್ಯವನ್ನು ಕೈಗೆತ್ತಿಕೊಂಡಿದ್ದು ಕೂಡಾ ವಿಭಜನೆಯ ಸಂದರ್ಭದಲ್ಲಿ ಕೋಮುವಾದವು ಹೆಡೆಬಿಚ್ಚಿ ಹೂಂಕರಿಸಲು ಕಾರಣವಾಯಿತೆಂದು ಸುಚೇತಾ ಅಭಿಪ್ರಾಯಪಡುತ್ತಾರೆ. ಈ ವಿಭಜನೆ ಮತ್ತು ಕೋಮುವಾದವೆನ್ನುವ ಶಬ್ದಗಳನ್ನೇ ಪ್ರದೇಶ ವಿಶಿಷ್ಠವಾಗಿ ವ್ಯಾಖ್ಯಾನಿಸಿ ಅತ್ಯಂತ ಸಂಕೀರ್ಣವಾಗಿ ಇದನ್ನು, ಇದರ ಚರ್ಚೆಯನ್ನು ನಿರ್ವಹಿಸಿರುವ ಗ್ಯಾನೇಂದ್ರ ಪಾಂಡೆ ಅವರ ಪ್ರಕಾರ ೧೯೪೦ರ ನಂತರದ ರಾಜಕಾರಣದಲ್ಲಿ 'ಹಿಂದೂ' 'ಮುಸ್ಲಿಂ' ಮತ್ತು 'ಸಿಖ್ಖ್' ಎಂಬ ಗುರುತುಗಳ ಬೆಳವಣಿಗೆ, ಅಂತಹ ಗುರುತುಗಳ ನಡುವೆ ನಡೆದ ಪೈಪೋಟಿ, ಚಾರಿತ್ರಿಕ ಫಲ ಮತ್ತು ಅನುಭವದ ರೂಪಕವೇ ಸಮಕಾಲೀನ ಕೋಮುವಾದ.

ವಿಭಜನೋತ್ತರ ನೆಹರೂ ಭಾರತ ಕೂಡಾ ಕೋಮುವಾದವನ್ನು ಪ್ರತ್ಯಕ್ಷೀಕರಿಸಿತು. ಆದರೆ ನಮ್ಮ ಚರಿತ್ರೆ ಮತ್ತು ಚರಿತ್ರಶಾಸ್ತ್ರ (*ಹಿಸ್ಟೋರಿಯೋಗ್ರಫಿ*) ವಿಭಜನೆಯ ಮತ್ತು ಅದರ ನಂತರದ ಸಂದರ್ಭದಲ್ಲಿನ ಹಿಂದೂ ಕೋಮುವಾದ, ಅದರ ಸಾಂಸ್ಥಿಕ ಮತ್ತು ಸಂಘಟಿತ ಪಾತ್ರವನ್ನು ಮತ್ತು ಅದಕ್ಕೆ ಅನುರೂಪವಾಗಿ ವ್ಯಕ್ತವಾದ ಬೇರೆ ಅಥವಾ ಸಮಾನಾಂತರ ಕೋಮುವಾದದ ಮೂಲ ತಿರುಳನ್ನಾಗಲಿ, ಚಾರಿತ್ರಿಕ ಗತಿಯನ್ನಾಗಲಿ ನಿರೂಪಿಸುವಲ್ಲಿ ವಿಫಲವಾಗಿವೆ. ಇದು ಒಂದು ರೀತಿ ವಿಭಜನೆಯು ಸೃಷ್ಟಿಸಿರುವ



ಕೋಮುಹಿಂಸೆಗಿಂತಲೂ ಮಿಗಿಲಾದ ಹಿಂಸೆಯೆನ್ನುವುದು ನನ್ನ ಅನ್ನಿಸಿಕೆ. ಆ ಸಂದರ್ಭದ ಹಿಸ್ಟೋರಿಯೋಗ್ರಫಿಯು ಅತ್ಯಂತ ಪ್ರಜ್ಞಾಪೂರ್ವಕವಾಗಿ ಇದರ ದಾಖಲೆಯನ್ನು ಮತ್ತು ಆ ಹೊತ್ತಿನ ಹಿಂದೂ ರಾಷ್ಟ್ರದ ಸಿದ್ಧಾಂತದ ಭರಾಟೆಯಿರುವಾಗಲೂ ಅತ್ಯಂತ ಸಕ್ರಿಯವಾಗಿದ್ದ ಸೆಕ್ಯುಲರಿಸಂನ ಸಂಪ್ರದಾಯಗಳ ಅಧ್ಯಯನವನ್ನು ಕಡೆಗಣಿಸಿದೆ. ಇದು ಭಾರತದ ರಾಷ್ಟ್ರೀಯತೆಯನ್ನು ಸಮಕಾಲೀನ ಸಂದರ್ಭ ತಪ್ಪಾಗಿ ವ್ಯಾಖ್ಯಾನಿಸಲು ಕಾರಣವಾಗಿದೆ. ಹಾಗಾಗಿ ಒಂದು ರೀತಿಯಲ್ಲಿ ಚರಿತ್ರೆ, ಸಾಹಿತ್ಯ ಮತ್ತು ಒಟ್ಟಾರೆಯಾಗಿ ಜ್ಞಾನದ ಉದ್ಯಮ ಕೂಡಾ ಪ್ರಜ್ಞಾಪೂರ್ವಕವಾಗಿ ಮತ್ತು ಅಪ್ರಜ್ಞಾಪೂರ್ವಕವಾಗಿ ಕೋಮುವಾದದ ಪರಿಸರವನ್ನು ರೂಪಿಸುವಲ್ಲಿ ಮತ್ತದು ಕೋಮುವಾದವನ್ನು ಸಾಕಾರಗೊಳಿಸುವಲ್ಲಿ ಕಾರಣವಾಗುತ್ತದೆ ಎನ್ನುವುದನ್ನು ನಾವು ಇಲ್ಲಿ ಗಮನಿಸಬಹುದಾಗಿದೆ.

ರಾಷ್ಟ್ರ ವಿಭಜನೆಯ ಸಂದರ್ಭದ ಅಥವಾ ೧೯೪೦ರ ದಶಕದ ಕೋಮುವಾದ ಸ್ವಾತಂತ್ರ್ಯೋತ್ತರ ನೆಹರೂ ಯುಗದಲ್ಲಿ ಪುನರುಜ್ಜೀವನವನ್ನು ಪಡೆಯಿತಷ್ಟೇ. ನೆಹರೂ ಪ್ರಣೀತ ಹೊಸ ಆರ್ಥಿಕ ಮಾದರಿಯು ಸಾಮಾಜಿಕವಾಗಿ, ಆರ್ಥಿಕವಾಗಿ ಅನೇಕ ಅವಕಾಶಗಳ ಸೃಷ್ಟಿಗೆ ಮತ್ತು ಭೌತಿಕ ಅಭಿವೃದ್ಧಿಗೆ ಕಾರಣವಾಯಿತಾದರೂ , ಬಡತನ, ನಿರುದ್ಯೋಗ, ಅಸಮಾನತೆಗಳು ಮುಂದುವರಿದುವು. ಈ ಸಂದರ್ಭದ ನೆಹರೂರ ಒಟ್ಟಾರೆ ಆರ್ಥಿಕ ನೀತಿ ಮತ್ತು ಸಾಮ್ರಾಜ್ಯಶಾಹಿ ಯ ಕೊಡುಗೆಯಾದ ಹಿಂದುಳಿದಿರುವಿಕೆ–ದಾರಿದ್ರ್ಯಗಳನ್ನು ಮುಖಾಮುಖಿಗೊಳಿಸಿಕೊಳ್ಳುವಲ್ಲಿ ವಿಫಲವಾದುದು, ಜೊತೆಗೆ ಸ್ಫೋಟಗೊಂಡ ಜನಸಂಖ್ಯೆ ಜನಸಮುದಾಯಗಳಲ್ಲಿ ಒಂದು ರೀತಿಯ ಮಾನಸಿಕ ಸ್ಥೈರ್ಯದ ಕುಸಿತ ಹಾಗೂ ವೈಯಕ್ತಿಕ ಮತ್ತು ಸಾಮಾಜಿಕ ದುಗುಡವನ್ನೂ ಉಂಟು ಮಾಡಿತು. ಇದು ಒಂದು ರೀತಿಯಲ್ಲಿ ಆರ್ಥಿಕ ಅವಕಾಶಗಳ ಅಸಮಾನತೆಯನ್ನು ಸೃಷ್ಟಿಸಿ ಬಡತನದ ಹೆಚ್ಚಳಕ್ಕೆ ಕಾರಣವಾಯಿತು. ಇದು ತೀವ್ರವಾಗುತ್ತಾ ಹೋಗಿ ಜಾತಿ ಮತ್ತು ಸಮುದಾಯ ಹಾಗೂ ಕೋಮುಗಳ ನಡುವೆ ತಪ್ಪು ತಿಳುವಳಿಕೆ, ಸಂಶಯ ಹಾಗೂ ಕೋಮುವಾದಕ್ಕೆ ಕಾರಣವಾಯಿತು.

ನೆಹರೂ ಯುಗದಲ್ಲಿ ಬೇರೆ ಬೇರೆ ಸಾಮಾಜಿಕ–ಆರ್ಥಿಕ, ರಾಜಕೀಯ ಕಾರಣಗಳಿಂದ ಉಂಟಾದಂತಹ ಸಾಮಾಜಿಕ ದ್ವಂದ್ವತೆ, ಉದ್ವಿಗ್ನತೆ ಅಥವಾ ಇಬ್ಬಂದಿತನ ಕೂಡಾ ಮಹತ್ವದ್ದು. ಮಧ್ಯಮ ವರ್ಗ ಅಥವಾ ರಣ್‌ಧೀರ್ ಸಿಂಗ್ ಮತ್ತು ಬಿಪನ್ ಚಂದ್ರರ ಮಾತುಗಳಲ್ಲಿ ಹೇಳುವುದಾದರೆ ಪೆಟ್ಟಿ ಬೂರ್ಜ್ವಾ (ಸ್ಥೂಲವಾಗಿ ಕೆಳ ಮಧ್ಯಮ ವರ್ಗ) ಅತ್ಯಂತ ತೀವ್ರ ತೆರನಾದಂತಹ ನಿರುದ್ಯೋಗ ಮತ್ತು ಸಮಾಜೋ–ಆರ್ಥಿಕ ನೆಲೆಯ ವೈಪರೀತ್ಯಗಳನ್ನು ಅನುಭವಿಸಿತು. ಹಳ್ಳಿಯ, ನಗರದ ಮಧ್ಯಮವರ್ಗ ನೆಹರೂ ಅರ್ಥವ್ಯವಸ್ಥೆ ಸೃಷ್ಟಿಸಿದ ಶಿಕ್ಷಣ, ಉದ್ಯೋಗ, ಅವಕಾಶಗಳನ್ನು ಬಳಸಿತಾದರೂ ಕೆಳ ಮಧ್ಯಮವರ್ಗ ಇದರಿಂದ ವಂಚಿತವಾಯಿತು. ಇವರನ್ನು ಆರ್ಥಿಕ ಮತ್ತು ಅಭಿವೃದ್ಧಿಯ ಮುಖ್ಯವಾಹಿನಿಯಲ್ಲಿ ಸೇರ್ಪಡೆ ಮಾಡಲಾಗಲೇ ಇಲ್ಲ. ಕೋಮುವಾದ ಬೆಳೆಯಲು ಇದು ಅತ್ಯಂತ ಮಹತ್ವದ ಕಾರಣ. ಇಂದು ಇದನ್ನು ಜೆಹಾದೀ ಭಯೋತ್ಪಾದನೆಯ ಮುಂಚೂಣಿಯ ಬಂಟರಾಗಿರುವ ನಗರದ, ಅರೆನಗರದ ಕೆಳವರ್ಗದ ಸಮುದಾಯದ ಯುವಕರೇ ಆಗಿರುವುದರಲ್ಲಿ ಕಾಣಬಹುದು. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಪ್ರಕ್ರಿಯೆಯಿಂದ ಒಂದು ವರ್ಗವನ್ನು

ಹೊರಗಿಡುವಂತಹ ಅಭಿವೃದ್ಧಿ ರಾಜಕಾರಣ ಇಂದಿನ ಕೋಮುವಾದಕ್ಕೆ ಬಹುಮುಖ್ಯ ಕಾರಣಗಳಲ್ಲಿ ಒಂದೆಂದು ಹೇಳಬಹುದು.

ಸಮಕಾಲೀನ ಸಂದರ್ಭದ ಹಳೆಯ ಸಾಮಾಜಿಕ ವ್ಯವಸ್ಥೆ ಮತ್ತು ಸಂಸ್ಥೆಗಳಾದ ಜಾತಿ, ಕೂಡು ಕುಟುಂಬ, ಗ್ರಾಮ, ನೆರೆಹೊರೆ ಮುಂತಾದವುಗಳನ್ನು ಹೊಸ ಸಂಸ್ಥೆಗಳಾದ ವರ್ಗ, ಟ್ರೇಡ್ ಯೂನಿಯನ್, ಕಿಸಾನ್ ಸಭಾ, ರಾಜಕೀಯ ಪಕ್ಷಗಳು, ಒತ್ತಡ ಗುಂಪುಗಳು ಮುಂತಾದವು ಪಲ್ಲಟಗೊಳಿಸಿದ್ದೂ ಕೋಮುವಾದದ ಬೆಳವಣಿಗೆಗೆ ಮತ್ತೊಂದು ಮಹತ್ವದ ಕಾರಣ. ಸಮಕಾಲೀನ ಸಂದರ್ಭ ಆಗಷ್ಟೇ ರಾಷ್ಟ್ರೀಯ ಹೋರಾಟ ಮತ್ತು ಅದರ ಆದರ್ಶಗಳಿಂದ ವಿಮೋಚಿತವಾಗಿ ಯಾವುದೇ ರೀತಿಯ ರಾಜಕೀಯ ಆದರ್ಶವಾದ (ಪೊಲಿಟಿಕಲ್ ಐಡಿಯಲಿಸಂ)ವನ್ನೂ ಅನುಭವಿಸದಿದ್ದದ್ದೂ ಕೂಡಾ ಒಂದು ಸಾಂಸ್ಕೃತಿಕ, ತಾತ್ವಿಕ ಕಾರಣ ಕೋಮುವಾದಕ್ಕೆ. ಕೋಮು ಗಲಭೆ ಮತ್ತು ಕೋಮುವಾದದ ನಿರ್ವಹಣೆಯಲ್ಲಿ ಪೋಲಿಸರ ನಿರ್ವಹಣೆ ಮತ್ತು ಅವರ ಧನಾತ್ಮಕ ಮತ್ತು ಋಣಾತ್ಮಕ ನೆಲೆಯ ಭಾಗಿದಾರಿಕೆ, ರಾಜಕೀಯ ಅವಕಾಶವಾದ, ರಾಜಕೀಯವಾಗಿ ಸಮುದಾಯಗಳ ತುಷ್ಟೀಕರಣ ಮುಂತಾದವೂ ನೆಹರೂ ಯುಗ ಅಥವಾ ವಿಭಜನೋತ್ತರ ಯುಗದಲ್ಲೂ ಕೋಮುವಾದ ಎದ್ದು, ಉಜ್ಜೀವನವನ್ನು ಪಡೆಯಲು ಕಾರಣವಾಯಿತು.

ಹೀಗೆ ವಿಭಜನೆ ಮತ್ತು ೧೯೪೦–೫೦ರ ದಶಕದಲ್ಲಿನ ಕೋಮುವಾದವನ್ನು ಅತ್ಯಂತ ಸೂಕ್ಷ್ಮವಾಗಿ ಗ್ರಹಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ನಾವು ಅವಸರದ ತೀರ್ಮಾನವನ್ನು ಕೈಗೊಳ್ಳುವುದು ಸಾಧ್ಯವಾಗುವುದಿಲ್ಲ. ಗ್ಯಾನೇಂದ್ರ ಪಾಂಡೆಯಂತಹ ಚಿಂತಕ ರಾಷ್ಟ್ರ ವಿಭಜನೆ ಎನ್ನುವ ಶಬ್ದವನ್ನೇ ಹೊಸ ರೀತಿಯಲ್ಲಿ ಮರು ವಿವೇಚನೆಗೆ ಒಳಪಡಿಸಬೇಕಾದ ಅಗತ್ಯವನ್ನು ನಮ್ಮ ಮುಂದೆ ಇಡುತ್ತಾರೆ. ಏಕೆಂದರೆ, ವಿಭಜನೆ, ಕೋಮುವಾದ ಮತ್ತು ಅದರ ಸುತ್ತಲಿನ ಬೆಳವಣಿಗೆಗಳು ಒಂದರೊಳಗೊಂದು ಹಾಸುಹೊಕ್ಕಾಗಿದ್ದು ಅವುಗಳಲ್ಲಿ ಯಾವುದನ್ನೂ ಪ್ರತ್ಯೇಕತೆಯಲ್ಲಿ ಮತ್ತು ಸಾರಾಸಗಟಾಗಿ ನೋಡುವ ಪರಿಪಾಠ ಪ್ರಶ್ನಾರ್ಹವಾಗಿದೆ. ಈ ನೆಲೆಯಲ್ಲಿ ಈ ಬರಹ ಅತ್ಯಂತ ಸಾಪೇಕ್ಷವಾದ ಕೆಲವು ಚದುರಿದ ಚಿಂತನೆಗಳ ದಾಖಲೆ ಅಷ್ಟೆ. *

# ಆರ್‌ಎಸ್‌ಎಸ್‌ನೊಡನೆ ನನ್ನ ಮುಖಾಮುಖಿ


–ಮಧು ಲಿಮಯೆ

**ಸಮಾಜವಾದಿ ಚಿಂತಕ ಡಾ. ರಾಮಮನೋಹರ ಲೋಹಿಯಾ ಅವರ ತಾತ್ವಿಕ ಉತ್ತರಾಧಿಕಾರಿಯೆಂದೇ ಗುರುತಿಸಲ್ಪಡುತ್ತಿದ್ದ ದಿ. ಮಧು ಲಿಮಯೆ ಅವರು, ೧೯೭೭ರಲ್ಲಿ ಜಯಪ್ರಕಾಶ್ ನಾರಾಯಣರ ಮಾರ್ಗದರ್ಶನದ ತುರ್ತು ಪರಿಸ್ಥಿತಿ ವಿರೋಧಿ ಚಳುವಳಿಯ ತಾರ್ಕಿಕ ಅಂತ್ಯವಾಗಿ ಜನತಾಪಕ್ಷ ಉದಯವಾದಾಗ ಅದರಲ್ಲಿ ವಿಲೀನಗೊಂಡ ಹಳೆಯ ಜನಸಂಘ ಹೊಂದಿದ್ದ ಆರೆಸ್ಸೆಸ್ಸಿನ ಕರುಳು ಬಳ್ಳಿ ಸಂಬಂಧವನ್ನು ಚರ್ಚೆಗೀಡು ಮಾಡಿದ ಮುಂಚೂಣೀ ನಾಯಕರು. ಆ ಮೂಲಕ ಜನತಾ ಪಕ್ಷ ಜನಸಂಘದ ಒಳ ರಾಜಕಾರಣಕ್ಕೆ ತುತ್ತಾಗದಂತೆ ಮುನ್ನೆಚ್ಚರಿಕೆ ವಹಿಸಿದ ಅವರು ತಮ್ಮ ಈ ಪ್ರಯತ್ನದ ಬಗ್ಗೆ ಆಗ ಬರೆದ ಲೇಖನದ ಮುಖ್ಯ ಭಾಗಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಸ್ವಾತಂತ್ರ್ಯಪೂರ್ವ ಕಾಲದಿಂದಲೂ ಭಾರತದ ಕೋಮುವಾದಿ ರಾಜಕಾರಣದ ಪ್ರಮುಖ ಪಾತ್ರದಾರಿ ಸಂಸ್ಥೆಗಳಲ್ಲೊಂದು ಎಂದು ಪರಿಗಣಿತವಾಗಿರುವ ಆರ್‌ಎಸ್‌ಎಸ್‌ನ ಕೋಮು ನೀತಿ ಕೇವಲ ಮತಕ್ಕೆ ಮಾತ್ರ ಸಂಬಂಧಿಸಿರದೆ ಹೇಗೆ ಅದೊಂದು ಸಮಗ್ರ ರಾಜಕೀಯ ಕಾರ್ಯಕ್ರಮವೇ ಆಗಿದೆ ಎಂಬುದರ ಒಂದು ಚಿತ್ರಣ ಇಲ್ಲಿದೆ.–ಸಂ**



**ನಾ**ನು ೧೯೩೭ರಲ್ಲಿ ರಾಜಕೀಯವನ್ನು ಪ್ರವೇಶಿಸಿದೆ. ಆಗ ತರುಣನಾಗಿದ್ದ ನಾನು ಚಿಕ್ಕ ವಯಸ್ಸಿನಲ್ಲಿಯೇ ಮೆಟ್ರಿಕ್ಯುಲೇಷನ್ ಪಾಸಾಗಿದ್ದೆ ಮತ್ತು ಕೂಡಲೇ ಕಾಲೇಜಿಗೆ ಪ್ರವೇಶವನ್ನು ಪಡೆದಿದ್ದೆ. ಆ ಕಾಲದಲ್ಲಿ ಪುಣೆಯಲ್ಲಿ ಒಂದು ಕಡೆ ಆರೆಸ್ಸೆಸ್ ಮತ್ತು ಸಾವರ್ಕರ್‌ವಾದಿಗಳು; ಮತ್ತೊಂದು ಕಡೆ ಸೋಷಿಯಲಿಷ್ಟರು, ಸ್ವಾತಂತ್ರ್ಯ ಹೋರಾಟಗಾರರು ಮತ್ತು ಕಮ್ಯುನಿಷ್ಟರು ಕ್ರಿಯಾಶೀಲರಾಗಿದ್ದರು. ೧ನೇ ಮೇ ೧೯೩೭ರಂದು ನಾವೆಲ್ಲ ಮೇ ದಿನವನ್ನು ಆಚರಿಸುತ್ತಿದ್ದೆವು. ಆಗ ಶಾಂತಿಯುತವಾಗಿ ನಡೆಯುತ್ತಿದ್ದ ಮೆರವಣಿಗೆಯ ಮೇಲೆ ಆರೆಸ್ಸೆಸ್ ಮತ್ತು ಸಾವರ್ಕರ್‌ವಾದಿಗಳು ಏಕಾಏಕಿ ಹಲ್ಲೆ ನಡೆಸಿದರು. ಈ ಹಲ್ಲೆಯಿಂದ ಕ್ರಾಂತಿಕಾರಿ ಸೇನಾಪತಿ ಬಾಪಟ್ ಮತ್ತು ಸಮಾಜವಾದಿ ನಾಯಕ ಎಸ್.ಎಂ ಜೋಶಿ ಗಾಯಗೊಂಡರು. ಈ ಘಟನೆಯ ನಂತರ ಅಂದಿನಿಂದ ಇಂದಿನವರೆಗೂ ಈ ಆರೆಸ್ಸೆಸ್ ಮತ್ತು ಸಾವರ್ಕರ್‌ವಾದಿಗಳೊಂದಿಗೆ ನಾವೆಲ್ಲ ತೀವ್ರವಾಗಿ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದೇವೆ.

ಆರೆಸ್ಸೆಸ್‌ನೊಂದಿಗೆ ನಮ್ಮ ಮೊದಲ ತಕರಾರು ಶುರುವಾದದ್ದು ರಾಷ್ಟ್ರೀಯತೆಯ ಕುರಿತಾಗಿ; ನಾವೆಲ್ಲ ಭಾರತದ ಪ್ರತಿಯೊಬ್ಬ ಪ್ರಜೆಗೂ ಸಮಾನ ಹಕ್ಕುಗಳಿವೆ ಎಂದು ನಂಬಿದ್ದರೆ ಈ ಆರೆಸ್ಸೆಸ್ ಮತ್ತು ಸಾವರ್ಕರ್‌ವಾದಿಗಳು ಹಿಂದೂ ರಾಷ್ಟ್ರದ ಕನಸನ್ನು ಪ್ರತಿಪಾದಿಸುತ್ತಿದ್ದರು. ಜಿನ್ನಾ ಅವರು ಸಹ ಈ ಪರಿಕಲ್ಪನೆಯ ಬಲಿಪಶುವಾಗಿದ್ದರು. ಇಂಡಿಯಾ ಎರಡು ದೇಶಗಳಿಂದ ರೂಪಿಸಲ್ಪಟ್ಟಿದೆ. ಅದು ಮುಸ್ಲಿಂ ದೇಶ ಮತ್ತು ಹಿಂದೂ ದೇಶ ಎಂದು ಜಿನ್ನಾ ವಾದಿಸುತ್ತಿದ್ದಾಗ ಅದನ್ನು ಸಾವರ್ಕರ್ ಅನುಮೋದಿಸುತ್ತಿದ್ದರು.



ಅವರೊಂದಿಗಿನ ಮತ್ತೊಂದು ಭಿನ್ನಮತವೆಂದರೆ ನಾವು ಪ್ರಜಾಪ್ರಭುತ್ವ ಮಾದರಿಯ ಗಣರಾಜ್ಯವನ್ನು ಪ್ರತಿಪಾದಿಸುತ್ತಿದ್ದರೆ ಈ ಆರೆಸ್ಸೆಸ್ ಸಂಸ್ಥೆಯು ಪ್ರಜಾಪ್ರಭುತ್ವ ಮಾದರಿಯು ಪಶ್ಚಿಮ ರಾಷ್ಟ್ರಗಳ ಪರಿಕಲ್ಪನೆಯೆಂದೂ ಹಾಗೂ ಇದೆಂದೂ ಇಂಡಿಯಾಕ್ಕೆ ಸರಿ ಹೊಂದುವುದಿಲ್ಲವೆಂದೂ ವಾದಿಸುತ್ತಿತ್ತು. ಆ ದಿನಗಳಲ್ಲಿ ಆರೆಸ್ಸೆಸ್ ಸಂಚಾಲಕರು ಹಿಟ್ಲರ್‌ನನ್ನು, ಗುರೂಜಿ ಗೋಳ್ವಲ್ಕರ್‌ರನ್ನು ಆರಾಧಿಸುತ್ತಿದ್ದರು.

ಈ ಗೋಳ್ವಲ್ಕರ್ ಮತ್ತು ನಾಝಿಗಳ ನಡುವೆ ಅಪಾರ ಸಾಮ್ಯತೆ ಇತ್ತು. ತಮ್ಮ ಪುಸ್ತಕ 'ನಾವು ಮತ್ತು ನಮ್ಮ ರಾಷ್ಟ್ರೀಯತೆ' ಯಲ್ಲಿ ಬರೆಯುತ್ತಾ ಗೋಳ್ವಲ್ಕರ್ ಹೇಳುತ್ತಾರೆ: 'ಭಾರತದಲ್ಲಿರುವ ಅನ್ಯಧರ್ಮೀಯರು ಹಿಂದೂಧರ್ಮದ ಆಚರಣೆಗಳನ್ನು ಮತ್ತು ಸಂಸ್ಕೃತಿಯನ್ನು ಕಡ್ಡಾಯವಾಗಿ ಪಾಲಿಸಬೇಕು. ಹಿಂದೂಧರ್ಮವನ್ನು ಗೌರವಿಸಬೇಕು. ಹಿಂದೂಧರ್ಮವನ್ನಲ್ಲದೆ ಬೇರೇನನ್ನೂ ಪ್ರಚಾರ ಮಾಡಬಾರದು. ಈ ದೇಶದ ಕುರಿತಾದ ಅಸಹನೆಯನ್ನು ಬಿಟ್ಟುಕೊಡಬೇಕು. ಭಾರತದಲ್ಲಿ ಅನ್ಯಧರ್ಮೀಯರನ್ನು ವಿದೇಶಿಯರೆಂದೇ ಪರಿಗಣಿಸಬೇಕು. ಅನ್ಯಧರ್ಮೀಯರು ಈ ದೇಶದಲ್ಲಿ ಎರಡನೆ ದರ್ಜೆಯ ನಾಗರಿಕರಂತೆ ಬದುಕಬೇಕು. ಇವರಿಗೆ ಯಾವುದೇ ವಿಶೇಷ ಸೌಕರ್ಯಗಳನ್ನು ನೀಡಲಾಗುವುದಿಲ್ಲ. ಇವರಿಗೆ ಸಮಾನ ನಾಗರಿಕ ಹಕ್ಕುಗಳಿರುವುದಿಲ್ಲ'.

ಈ ಆರೆಸ್ಸೆಸ್ ಸದಸ್ಯರು ಮತ್ತು ಸಂಚಾಲಕರು ಹಿಟ್ಲರ್‌ನ ಹಿಂಬಾಲಕರಾಗಿದ್ದರು. ಇವರೆಲ್ಲ ಜರ್ಮನಿಯಲ್ಲಿ ಹಿಟ್ಲರ್



ಯಹೂದಿಗಳನ್ನು ನಡೆಸಿಕೊಂಡ ರೀತಿಯಲ್ಲಿಯೇ ಇಂಡಿಯಾದ ಮುಸ್ಲಿಂ ಮತ್ತು ಕ್ರಿಶ್ಚಿಯನ್‌ರನ್ನು ಕಡೆಗಣಿಸಬೇಕೆಂದು ಪ್ರತಿಪಾದಿಸುತ್ತಿದ್ದರು.

ಗೋಳ್ವಲ್ಕರ್ ಬರೆದ 'ನಾವು ಮತ್ತು ನಮ್ಮ ರಾಷ್ಟ್ರೀಯತೆ' ಪುಸ್ತಕದ ಒಂದು ಭಾಗ: 'ತನ್ನ ಬಣ್ಣದ ಮತ್ತು ಸಂಸ್ಕೃತಿಯ ಪರಿಶುದ್ಧತೆಯನ್ನು ಕಾಪಾಡಬೇಕಾದಂತಹ ಸಂದರ್ಭದಲ್ಲಿ ತನ್ನ ದೇಶದ ಅನ್ಯಧರ್ಮೀಯರಾದ ಯಹೂದಿಗಳನ್ನು ಸಂಪೂರ್ಣವಾಗಿ ನಾಶಮಾಡುವುದರ ಮೂಲಕ ಜರ್ಮನಿ ಜಗತ್ತನ್ನೇ ನಿಬ್ಬೆರಗಾಗಿಸಿತು. ಇದು ಇಂದು ನಮಗೆ ಆದರ್ಶವಾಗಬೇಕು' (ಪುಟ ೪೨, *ನಾವು ಮತ್ತು ನಮ್ಮ ರಾಷ್ಟ್ರೀಯತೆ*, ೧೯೪೭) ಎನ್ನುತ್ತದೆ. ನೀವು ಇದನ್ನು ಹಳೇ ಕಾಲದ, ಸ್ವಾತಂತ್ರ್ಯ ಪೂರ್ವದ ಪುಸ್ತಕವೆಂದು ವಾದಿಸಬಹುದು. ಆದರೆ ಗೋಳ್ವಲ್ಕರ್ ಅವರ ಮತ್ತೊಂದು ಪುಸ್ತಕ 'ಚಿಂತನ ಗಂಗಾ' ೧೯೬೬ರಲ್ಲಿ ಪ್ರಕಟವಾಯಿತು. ಆ ಪುಸ್ತಕದಲ್ಲಿ ಗೋಳ್ವಲ್ಕರ್ ಭಾರತದ ಪ್ರತಿಯೊಬ್ಬ ಮುಸ್ಲಿಮ, ಕ್ರಿಶ್ಚಿಯನ್ ಮತ್ತು ಕಮ್ಯುನಿಷ್ಟರನ್ನು ಆಂತರಿಕ ಶತ್ರುಗಳೆಂದು, ಅವರು ದೇಶದ ಭದ್ರತೆಗೆ ಅಪಾಯಕಾರಿಗಳೆಂದು ಬರೆಯುತ್ತಾರೆ. ಇದು ಈ ವ್ಯಕ್ತಿಯ ವಿಕೃತವೂ, ವಿನಾಶಕಾರಿಯೂ ಆಗಿರುವ ಚಿಂತನೆಯಾಗಿದೆ.

ಆ ಆರೆಸ್ಸೆಸ್ ಮತ್ತು ಗೋಳ್ವಲ್ಕರ್ ಜಾತಿಪದ್ಧತಿಯನ್ನು ಬೆಂಬಲಿಸುತ್ತಿದ್ದರು. ಆದರೆ ಸಮಾಜವಾದಿಗಳಾದ ನಮಗೆ ಈ ಜಾತಿಪದ್ಧತಿ ಒಂದು ಅನಿಷ್ಟವಾಗಿತ್ತು. ನಾನು ಈ ಜಾತೀಯತೆ ಮತ್ತು ಬ್ರಾಹ್ಮಣತ್ವದ ಚಿಂತನೆಗಳನ್ನು ವಿರೋಧಿಸುತ್ತಿದ್ದೆ. ಇವೆರಡೂ ನಾಶವಾಗುವವರೆಗೂ ನಮ್ಮ ಸಮಾಜದಲ್ಲಿ ಸಮಾನತೆ ಸಾಧ್ಯವಿಲ್ಲವೆಂಬುದು ನನ್ನ ಅಚಲ ನಂಬಿಕೆಯಾಗಿತ್ತು. ಆದರೆ ಈ ಗೋಳ್ವಲ್ಕರ್ ತಮ್ಮ 'ಚಿಂತನ ಗಂಗಾ' ಪುಸ್ತಕದಲ್ಲಿ ಬರೆಯುತ್ತಾರೆ: 'ನಮ್ಮ ಸಮಾಜದ ವೈಶಿಷ್ಟ್ಯವೆಂದರೆ ಅದು ವರ್ಣಾಶ್ರಮ ಪದ್ಧತಿ; ಈ ಸಮಾಜವು ಶಕ್ತಿಯುತ ದೇವರುಗಳನ್ನು ಒಳಗೊಂಡಿದೆ. ಈ ದೇವರನ್ನು ಸಮಾಜದ ವಿವಿಧ ಸ್ತರಗಳಲ್ಲಿರುವವರಿಗೆ ವಿಭಿನ್ನ ನೆಲೆಗಳಲ್ಲಿ ಪೂಜಿಸಲು ಅವಕಾಶ ನೀಡಲಾಗುತ್ತದೆ. ಬ್ರಾಹ್ಮಣರು ಶ್ರೇಷ್ಠರೆಂದು ಪರಿಗಣಿಸಲಾಗುತ್ತದೆ; ಕ್ಷತ್ರಿಯರನ್ನು ಸಹ ಅದೇ ಮಟ್ಟದ ಶ್ರೇಷ್ಠರೆಂದೇ ಗುರುತಿಸಲಾಗುತ್ತದೆ. ಏಕೆಂದರೆ ಅವರು ಶತ್ರುಗಳನ್ನು ಸಂಹರಿಸುತ್ತಾರೆ. ವೈಶ್ಯರೂ ಅಷ್ಟೇ ಮುಖ್ಯರಾಗುತ್ತಾರೆ. ಏಕೆಂದರೆ ಅವರು ವ್ಯಾಪಾರದ ಮೂಲಕ ಸಮಾಜವನ್ನು ಸಮತೋಲನದಲ್ಲಿಡುತ್ತಾರೆ. ತಮ್ಮ ಕೌಶಲ್ಯ ಆಧರಿಸಿ ಸಮಾಜದ ಅವಶ್ಯಕತೆಗಳನ್ನು ಪೂರೈಸುವುದರ ಮೂಲಕ ಶೂದ್ರರೂ ಮುಖ್ಯರಾಗುತ್ತಾರೆ. ಆದರೆ ಇಲ್ಲಿ ಗೋಳ್ವಲ್ಕರ್ ಅವರು ಚಾಣಕ್ಯನ ಆರ್ಥಿಕ ನೀತಿಯನ್ನು ಅನುಮೋದಿಸುತ್ತಾ ಶೂದ್ರನ ಕಾಯಕವನ್ನು ಅವನ ಕರ್ತವ್ಯವೆಂದೇ ಷರಾ ಬರೆಯುತ್ತಾರೆ. ಅವರ ಪ್ರಕಾರ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರ ಸೇವೆ ಮಾಡುವುದು ಶೂದ್ರರ ಧರ್ಮ, ಅವರ ಕರ್ತವ್ಯ.

ಈ ಆರೆಸ್ಸೆಸ್ ಮತ್ತು ಅದರ ಮುಖ್ಯಸ್ಥ ಗೋಳ್ವಲ್ಕರ್ ಅವರೊಂದಿಗೆ ನಮ್ಮ ಮತ್ತೊಂದು ಪ್ರಮುಖ ಭಿನ್ನಾಭಿಪ್ರಾಯವೆಂದರೆ ಅವರು ಪ್ರತಿಪಾದಿಸುವ ಭಾಷಾ ನೀತಿ. ಗೋಳ್ವಲ್ಕರ್ ಪ್ರಕಾರ ಹಿಂದಿಯನ್ನು ಸಾರ್ವಜನಿಕ ಭಾಷೆಯನ್ನಾಗಿಯೂ, ಸಂಸ್ಕೃತವನ್ನು ರಾಷ್ಟ್ರೀಯ ಭಾಷೆಯನ್ನಾಗಿ ಮಾಡಬೇಕು. ತಮ್ಮ ಪುಸ್ತಕದಲ್ಲಿ ಗೋಳ್ವಲ್ಕರ್ "ಸದ್ಯದ ಅನುಕೂಲಕ್ಕಾಗಿ ಹಿಂದಿ ಭಾಷೆಯನ್ನು ಸಂಪರ್ಕ ಭಾಷೆಯಾಗಿ ಬಳಸಿಕೊಳ್ಳಬೇಕಾಗುತ್ತದೆ. ಆದರೆ ಸಂಸ್ಕೃತವು ರಾಷ್ಟ್ರ ಭಾಷೆಯಾಗಬೇಕೆಂಬುದೇ ನಮ್ಮ ಅಂತಿಮ ಗುರಿ" ಎಂದು ಬರೆಯುತ್ತಾರೆ. ಆದರೆ ಮಹಾತ್ಮಾ ಗಾಂಧಿ ಮತ್ತು ತಿಲಕರಂತೆ ನಾವೆಲ್ಲರೂ ಪ್ರಾಂತೀಯ ಭಾಷೆಗಳನ್ನು ಬೆಂಬಲಿಸುತ್ತಿದ್ದೆವು. ನಾಗರಿಕರ ಮೇಲೆ ಹಿಂದಿ ಭಾಷೆಯನ್ನು ಬಲವಂತವಾಗಿ ಹೇರುವುದನ್ನು ನಾವು ವಿರೋಧಿಸುತ್ತಿದ್ದೆವು. ತಮಿಳುನಾಡಿನಲ್ಲಿ ತಮಿಳು, ಆಂಧ್ರದಲ್ಲಿ ತೆಲುಗು, ಕರ್ನಾಟಕದಲ್ಲಿ ಕನ್ನಡ, ಪಶ್ಚಿಮ ಬಂಗಾಳದಲ್ಲಿ ಬಂಗಾಳಿ, ಮಹಾರಾಷ್ಟ್ರದಲ್ಲಿ ಮರಾಠಿ ಭಾಷೆಗಳ ಬಳಕೆಗೆ ನಮ್ಮ ಬೆಂಬಲವಿತ್ತು. ಸಂಸ್ಕೃತವನ್ನು ರಾಷ್ಟ್ರಭಾಷೆಯನ್ನಾಗಿಸುವುದನ್ನು ನಾವು ತೀವ್ರವಾಗಿ ವಿರೋಧಿಸುತ್ತಿದ್ದೆವು. ಏಕೆಂದರೆ ಅದು ಮೇಲ್ಜಾತಿಯವರ ಭಾಷೆಯಾಗಿತ್ತು; ಜನಸಾಮಾನ್ಯರನ್ನು ವ್ಯವಸ್ಥಿತವಾಗಿ ಸದಾಕಾಲವೂ ದೂರವಿಟ್ಟ 'ವಂಚನೆಯ ಭಾಷೆಯಾಗಿ ದಮನಶೀಲ ಇತಿಹಾಸವನ್ನು ಹೊಂದಿದೆ.

ಸ್ವಾತಂತ್ರ್ಯ ಹೋರಾಟದ ರಾಷ್ಟ್ರೀಯ ಚಳವಳಿಯು ಭಾರತದ ಗಣರಾಜ್ಯ ಸ್ವರೂಪವನ್ನು ಒಪ್ಪಿಕೊಂಡಿತ್ತು. ಕೆಲವು ಪ್ರಮುಖ ಇಲಾಖೆಗಳ ಅಧಿಕಾರವು ದೇಶದ ಹಿತರಕ್ಷಣೆಯ ದೃಷ್ಟಿಯಿಂದ ಕೇಂದ್ರದ ಸುಪರ್ದಿಯಲ್ಲಿದ್ದರೆ ಇತರ ವಿವಿಧ ಇಲಾಖೆಗಳ ಜವಾಬ್ದಾರಿಯು ರಾಜ್ಯ ಸರಕಾರಗಳಿಗೆ ಸೇರಬೇಕೆಂಬ ವಿಕೇಂದ್ರೀಕರಣದ ನೀತಿ ನಮ್ಮದಾಗಿತ್ತು. ಗಣರಾಜ್ಯದ ಈ ಪರಿಕಲ್ಪನೆಯನ್ನು ಸ್ವಾತಂತ್ರ್ಯಾನಂತರ ರಚಿತವಾದ ಸಂವಿಧಾನವೂ ಅನುಮೋದಿಸಿತ್ತು.

ಪ್ರಜಾಪ್ರಭುತ್ವದ, ವಿಕೇಂದ್ರೀಕರಣದ ಈ ಗಣರಾಜ್ಯ ಮಾದರಿಯನ್ನು, ಅದರ ಸಂವಿಧಾನವನ್ನು ಆರೆಸ್ಸೆಸ್ ಮತ್ತು ಗೋಳ್ವಲ್ಕರ್ ನಿರಂತರವಾಗಿ ವಿರೋಧಿಸಿದರು. ಈ ಜನರು ಗಣರಾಜ್ಯಗಳ ಪರಿಕಲ್ಪನೆಯನ್ನೇ ಅಪಹಾಸ್ಯ ಮಾಡುತ್ತಿದ್ದರು. ಈ ಗಣರಾಜ್ಯಗಳ ಬಹುರೂಪಿ ತತ್ವಗಳನ್ನು ಪ್ರತಿಪಾದಿಸುವ ಭಾರತದ ಸಂವಿಧಾನವನ್ನೇ ರದ್ದುಗೊಳಿಸಬೇಕೆಂದು ಈ ಆರೆಸ್ಸೆಸ್ ಮತ್ತು ಗೋಳ್ವಲ್ಕರ್ ಒತ್ತಾಯಿಸುತ್ತಿದ್ದರು. "ಸಂವಿಧಾನವನ್ನು ಪುನರ್ವಿಮರ್ಶಿಸಬೇಕು. ಕೇಂದ್ರಾಡಳಿತ ರಾಜ್ಯವನ್ನು ಸಂವಿಧಾನದಲ್ಲಿ ಸೇರಿಸಬೇಕು" ಎಂದು ಗೋಳ್ವಲ್ಕರ್ ಬಯಸುತ್ತಾರೆ. ಇವರಿಗೆ ಒಂದು ದೇಶ, ಒಂದು ರಾಜ್ಯ, ಒಂದು ಪಾರ್ಲಿಮೆಂಟ್, ಒಂದು ಕಾರ್ಯಾಂಗ ಮಾತ್ರ ಇರಬೇಕು. ಇವರು ವಿಭಿನ್ನ ರಾಜ್ಯಗಳ ವಿಧಾನಸಭೆಗಳನ್ನು ಮತ್ತು ಮಂತ್ರಿ ಮಂಡಳಗಳನ್ನು ರದ್ದುಪಡಿಸಬೇಕೆಂದು ಆಗ್ರಹಿಸುತ್ತಾರೆ; ಅಂದರೆ ಇವರ ಗುರಿ ಸರ್ವಾಧಿಕಾರದ ಆಡಳಿತ; ಕೇಂದ್ರಾಡಳಿತ ರಾಜ್ಯಭಾರ.

ಮತ್ತೊಂದು ವಿವಾದವೆಂದರೆ ತ್ರಿವರ್ಣ ಧ್ವಜ. ಈ ತ್ರಿವರ್ಣ ಧ್ವಜವನ್ನು ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಭಾರತದ ಬಿಡುಗಡೆಯ ಸಂಕೇತವಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಈ ತ್ರಿವರ್ಣ ಧ್ವಜವನ್ನು ಸ್ವಾತಂತ್ರ್ಯದ ಸಂಕೇತವಾಗಿ ಹೋರಾಟಗಳಲ್ಲಿ ಬಳಸಲಾಗುತ್ತಿತ್ತು. ಅದರ ಘನತೆಯನ್ನು ಕಾಪಾಡಲು ಸಾವಿರಾರು ದೇಶಾಭಿಮಾನಿಗಳು ಪ್ರಾಣತ್ಯಾಗ ಮಾಡಿದರು. ಆಶ್ಚರ್ಯವೆಂದರೆ ಆರೆಸ್ಸೆಸ್ ಈ ತ್ರಿವರ್ಣ ಧ್ವಜವನ್ನು ರಾಷ್ಟ್ರ ಧ್ವಜವನ್ನಾಗಿ ಎಂದಿಗೂ ಮಾನ್ಯ ಮಾಡಲೇ ಇಲ್ಲ. ಆರೆಸ್ಸೆಸ್ ಮಾನ್ಯ ಮಾಡಿದ್ದು ಕೇಸರಿಧ್ವಜವನ್ನು. ಭಗವದ್ಧ್ವಜವನ್ನು. ಈ ಕೇಸರಿಧ್ವಜವು ಹಿಂದೂರಾಷ್ಟ್ರದ ಸಂಕೇತವೆಂದು ಆರೆಸ್ಸೆಸ್ ಬಲವಾಗಿ ನಂಬಿತ್ತು.

ಗಣರಾಜ್ಯ ಮಾದರಿಯ ವಿಕೇಂದ್ರೀಕರಣವನ್ನು ತಿರಸ್ಕರಿಸಿದಂತೆಯೇ ಈ ಆರೆಸ್ಸೆಸ್ ಮತ್ತು ಅದರ ಮುಖ್ಯಸ್ಥ ಗೋಳ್ವಲ್ಕರ್ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನೂ ತಿರಸ್ಕರಿಸಿದ್ದರು. ಈ ಪ್ರಜಾಪ್ರಭುತ್ವ ವ್ಯವಸ್ಥೆಯು ಪಶ್ಚಿಮ ದೇಶಗಳಿಂದ ನಕಲು, ಅದು ಭಾರತದ ಚಿಂತನೆಗಳೊಂದಿಗೆ ಬೆರೆಯುವುದಿಲ್ಲವೆಂದು ಇವರು ನಂಬಿದ್ದರು. ಇವರಿಗೆ ಸೋಷಲಿಸಂ ಅಂತೂ ಸಂಪೂರ್ಣ ಪರಕೀಯವಾಗಿತ್ತು.

ಗೋಳ್ವಲ್ಕರ್ ಈ ಎಲ್ಲಾ ಇಸಂಗಳು ವಿದೇಶಿ ಸಂಸ್ಕೃತಿಗಳೆಂದೂ ಇವನ್ನೆಲ್ಲವನ್ನೂ ತಿರಸ್ಕರಿಸಬೇಕೆಂದೂ ಕರೆ ಕೊಟ್ಟಿದ್ದರು.

೧೯೭೫ರಲ್ಲಿ ಇಂದಿರಾ ಗಾಂಧಿಯವರು ದೇಶದ ಮೇಲೆ ತುರ್ತು ಪರಿಸ್ಥಿತಿಯನ್ನು ಹೇರಿದಾಗ ಅದನ್ನು ವಿರೋಧಿಸಿ ನಾವೆಲ್ಲಾ ಈ ಆರೆಸ್ಸೆಸ್‌ನವರೊಂದಿಗೆ ಕೈಜೋಡಿಸಬೇಕಾದಂತಹ ಸಂದರ್ಭ ಬಂದಿತು. ಎಲ್ಲರೂ ಒಂದಾಗಿ ಒಂದೇ ಪಕ್ಷದ ಅಡಿಯಲ್ಲಿ ಕಾಂಗ್ರೆಸ್ ವಿರುದ್ಧದ ಚುನಾವಣೆಯನ್ನು ಎದುರಿಸಬೇಕೆಂದು ಚರಣಸಿಂಗ್ ಒತ್ತಾಯಿಸುತ್ತಿದ್ದರು. ಜಯಪ್ರಕಾಶ ನಾರಾಯಣ್ ಮತ್ತು ಇತರ ನಾಯಕರೂ ಇದನ್ನು ಅನುಮೋದಿಸಿದ್ದರು. ಆಗ ಜನಸಂಘ, ಸೋಷಲಿಸ್ಟ್ ಪಕ್ಷ, ಸಂಸ್ಥಾ ಕಾಂಗ್ರೆಸ್, ಭಾರತೀಯ ಲೋಕದಳ, ಮತ್ತು ಭಿನ್ನಮತೀಯ ಕಾಂಗ್ರೆಸ್ಸಿಗರು ಒಂದಾಗಿದ್ದೆವು. ಈ ಸಂದರ್ಭದಲ್ಲಿಯೂ ನಾವೆಂದೂ ಆರೆಸ್ಸೆಸ್ ಜೊತೆಗೆ ಕೈ ಜೋಡಿಸಬಯಸಿರಲಿಲ್ಲ. ಈ ಸಂದರ್ಭದಲ್ಲಿ ಚರಣಸಿಂಗರು ಸುಮಾರು ಜುಲೈ ೭, ೧೯೭೬ರಂದು ಜೈಲಿನಿಂದ ಬರೆದ ಪತ್ರದಲ್ಲಿ ನಮ್ಮ ಮುಂದಿರುವ ಸಲಹೆಯ ಪ್ರಮುಖ ಬಿಕ್ಕಟ್ಟಾದ ದ್ವಿಸದಸ್ಯತ್ವದ ಕುರಿತಾಗಿ ಪ್ರಸ್ತಾಪಿಸಿದರು. ಆರೆಸ್ಸೆಸ್‌ನ ಕಾರ್ಯಕರ್ತರಾಗಿ ಜನ ಸಂಘದ ಸದಸ್ಯರು ಹೊಸ ಪಕ್ಷದ ಸದಸ್ಯರಾಗಬಹುದೇ ಎಂದು ಅವರು ಪ್ರಶ್ನಿಸಿದರು. ಇದಕ್ಕೆ ಉತ್ತರಿಸುತ್ತಾ ಆಗಿನ ಜನಸಂಘದ ಕಾರ್ಯದರ್ಶಿ ಓಂ ಪ್ರಕಾಶ್ ತ್ಯಾಗಿ ಅವರು ಇದನ್ನು ಮುಕ್ತ ಮನಸ್ಸಿನಿಂದ ಚರ್ಚಿಸಲು ಜನಸಂಘವು ಸಿದ್ಧವೆಂದು ಹೇಳುತ್ತಾ, ಅಂತಹ ಬಿಕ್ಕಟ್ಟು ಎದುರಾದಲ್ಲಿ ಆರೆಸ್ಸೆಸ್‌ಅನ್ನು ವಿಸರ್ಜಿಸಲೂ ಸಹ ತಯಾರು ಎಂದು ಆಶ್ವಾಸನೆ ಕೊಟ್ಟರು.

ಆದರೆ ಜನತಾ ಪಕ್ಷದ ಸಂವಿಧಾನವನ್ನು ರಚಿಸುವ ಜವಾಬ್ದಾರಿ ಹೊತ್ತುಕೊಂಡ ಉಪ ಸಮಿತಿಯು ಹೊಸ ಪಕ್ಷದ ತತ್ವಗಳಿಗೆ, ಚಿಂತನೆಗಳಿಗೆ, ವಿಚಾರಗಳಿಗೆ ಭಿನ್ನವಾಗಿರುವವರಿಗೆ ದ್ವಿಸದಸ್ಯತ್ವವನ್ನು ಕೊಡಬಾರದೆಂದು ಅಭಿಪ್ರಾಯ ವ್ಯಕ್ತಪಡಿಸಿತು. ಇದರ ಮಹತ್ವವನ್ನು ಅರಿತುಕೊಂಡ ಎಲ್ಲರೂ ಇದನ್ನು ಒಪ್ಪಿಕೊಂಡರು. ಈ ಸಂದರ್ಭದಲ್ಲಿ ಇದಕ್ಕೆ ವಿರೋಧ ಬಂದಿದ್ದು ಜನಸಂಘದ ಸುಂದರ್ ಸಿಂಗ್ ಭಂಡಾರಿ ಅವರಿಂದ. ಆಗ ಜನಸಂಘ ಮತ್ತು ಆರೆಸ್ಸೆಸ್‌ನ ಪರವಾಗಿ ಅಟಲ್ ಬಿಹಾರಿ ವಾಜಪೇಯಿಯವರು ಪತ್ರವನ್ನು ಬರೆದು ಜನತಾ ಪಕ್ಷದ ಸದಸ್ಯರ ನೋಂದಣಿಯ ಸಂದರ್ಭದಲ್ಲಿ ಆರೆಸ್ಸೆಸ್ ಕುರಿತಾದ ಚರ್ಚೆಯೇ ಅಪ್ರಸ್ತುತ ಎಂದು ಹೇಳಿದರು. ಆಗ ನಾನು ಜೈಲಿನಲ್ಲಿದ್ದೆ. ಹೀಗಾಗಿ ಆಗ ನಡೆದ ತೀರ್ಮಾನಗಳಿಗೆ ನಾನು ಜವಾಬ್ದಾರನಾಗಿರಲಿಲ್ಲ.

ಜನತಾ ಪಕ್ಷದ ಚುನಾವಣಾ ಪ್ರಣಾಳಿಕೆ ಬರೆಯುವಂತಹ ಸಂದರ್ಭದಲ್ಲಿ ಆರೆಸ್ಸೆಸ್ ಬಗ್ಗೆ ನಾವೆಲ್ಲ ಅಂತಹ ಆತಂಕವನ್ನು ಹೊಂದಿರಲಿಲ್ಲ. ಪ್ರತಿಯೊಂದು ವಾಕ್ಯವನ್ನೂ ಸ್ಪಷ್ಟವಾಗಿ ವಿವರಿಸಲಾಗಿತ್ತು. ನಿಜಕ್ಕೂ ಹೇಳಬೇಕೆಂದರೆ ಜನತಾ ಪಕ್ಷದ ಪ್ರಣಾಳಿಕೆಯು ಸೋಷಿಯಲಿಸ್ಟ್ ಸಮಾಜದ, ಸೆಕ್ಯುಲರ್ ಪ್ರಜಾಪ್ರಭುತ್ವದ, ಗಾಂಧಿ ಕನಸಿನ ಆದರ್ಶಗಳನ್ನು ಹೊಂದಿತ್ತಲ್ಲವೇ? ಅಲ್ಲಿ ಹಿಂದೂ ರಾಷ್ಟ್ರದ ಪ್ರಸ್ತಾಪವೇ ಇರಲಿಲ್ಲ. ಮಿಗಿಲಾಗಿ ನಮ್ಮ ಪ್ರಣಾಳಿಕೆಯಲ್ಲಿ ಅಲ್ಪಸಂಖ್ಯಾತರಿಗೆ ಸಮಾನ ನಾಗರಿಕತೆಯನ್ನು ದೃಢೀಕರಿಸಿದ್ದೆವು. ಪ್ರಣಾಳಿಕೆಯಲ್ಲಿ ಸರಕಾರಿ ನೌಕರಿಯಲ್ಲಿ ಹಿಂದುಳಿದ ಜಾತಿಗಳಿಗೆ ಶೇಕಡಾ ೨೫–೩೩ ಮೀಸಲಾತಿಯನ್ನು ಕಲ್ಪಿಸುವುದಾಗಿ ಹೇಳಿದ್ದೆವು.

ಆದರೆ ಆರೆಸ್ಸೆಸ್ ಸದಸ್ಯರು ಜನತಾ ಪಕ್ಷದ ಈ ಪ್ರಣಾಳಿಕೆಯನ್ನು ಮನಃಪೂರ್ವಕವಾಗಿ ಒಪ್ಪಿರಲಿಲ್ಲ. ಈ ಸಂದರ್ಭದಲ್ಲಿ ಕುಶುಭಾವು ಠಾಕ್ರೆಗೆ ಪತ್ರವನ್ನು ಬರೆದು ಜನಸಂಘ ಮತ್ತು ಆರೆಸ್ಸೆಸ್‌ನ ದ್ವಂದ್ವವನ್ನು ವಿವರಿಸಿ ಇದರಿಂದ ನಿಮ್ಮ ಕಾರ್ಯಸೂಚಿಯ ಕುರಿತಾಗಿಯೇ ಅನುಮಾನ ಮೂಡುತ್ತದೆ ಎಂದು ಹೇಳಿದ್ದೆ. ಆದರೂ ಸಂಯುಕ್ತ ವಿರೋಧ ಪಕ್ಷವಾಗಿ ಕಾಂಗ್ರೆಸ್ಸನ್ನು ಎದುರಿಸಲು ನಾವೆಲ್ಲ ಒಂದಾಗಲೇಬೇಕೆಂಬ ಜಯಪ್ರಕಾಶ ನಾರಾಯಣರ ಆಗ್ರಹವನ್ನು ಒಪ್ಪಿಕೊಳ್ಳುವಲ್ಲಿ ಎರಡು ಮುಖ್ಯ ವಿಷಯಗಳ ಕುರಿತಾಗಿ ನನ್ನಲ್ಲಿ ಖಚಿತತೆ ಇತ್ತು. ಈ ಸಂಯುಕ್ತ ವಿರೋಧ ಪಕ್ಷ ಚಾಲ್ತಿಗೆ ಬರಬೇಕೆಂದರೆ ಆರೆಸ್ಸೆಸ್ ತನ್ನ ಸಿದ್ಧಾಂತಗಳನ್ನು ಬದಲಿಸಿಕೊಳ್ಳಬೇಕು. ಜಾತ್ಯತೀತ ಸಿದ್ಧಾಂತವನ್ನು ಒಪ್ಪಿಕೊಳ್ಳಬೇಕು. ಎರಡನೆಯದಾಗಿ ಆರೆಸ್ಸೆಸ್‌ನ ಇತರೇ ಅಂಗಸಂಸ್ಥೆಗಳು ವಿಸರ್ಜನೆಗೊಂಡು ಸೆಕ್ಯುಲರ್ ಪಕ್ಷಗಳೊಂದಿಗೆ ವಿಲೀನಗೊಳ್ಳಬೇಕು. ಇದನ್ನು ನಾನು ಆರೆಸ್ಸೆಸ್‌ನ ಪ್ರಮುಖರಿಗೆ ಸ್ಪಷ್ಟ ಮಾತುಗಳಲ್ಲಿ ತಿಳಿಸಿದ್ದೆ. ಆಗ ಆರೆಸ್ಸೆಸ್‌ನ ಪ್ರಮುಖರು ಈ ನಿಬಂಧನೆಗಳನ್ನು ಈ ಕೂಡಲೇ ಪಾಲಿಸಲು ಕಷ್ಟ. ಆದರೆ ಹಂತ ಹಂತವಾಗಿ ತಾವು ಬದಲಾಗುತ್ತೇವೆಂದು ಆಶ್ವಾಸನೆಯನ್ನು ಕೊಟ್ಟರು. ಮುಂದಿನ ದಿನಗಳಲ್ಲಿ ಇದರ ಕುರಿತಾಗಿ ಪ್ರಶ್ನಿಸಿದಾಗ ಹಾರಿಕೆಯ ಉತ್ತರಗಳನ್ನು ನೀಡುತ್ತಿದ್ದರು. ಇವರ ಈ ದ್ವಂದ್ವವರ್ತನೆಗಳಿಂದ ನನಗೆ ಖಚಿತವಾಗಿದ್ದು ಇವರು ಬದಲಾಗಲು ತಯಾರಿಲ್ಲ ಎಂದು. ಅದರಲ್ಲೂ ೧೯೭೭ರ ನಂತರ ನಡೆದ ಚುನಾವಣೆಗಳಲ್ಲಿ ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ಹಳೇ ಜನಸಂಘ ಪ್ರಧಾನವಾದ ಜನತಾ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿದಾಗ ಈ ರೀತಿಯ ಜನಬೆಂಬಲವಿದ್ದರೆ ನಾವು ಬದಲಾಗುವ ಅಗತ್ಯವೇ ಇಲ್ಲವೆಂದು ಸಂಘ ಪರಿವಾರ ಭಾವಿಸಿತು.ಇದೇ ತಂತ್ರಗಾರಿಕೆಯ ಮೂಲಕ ದೇಶದ ಇತರೇ ರಾಜ್ಯಗಳಲ್ಲಿಯೂ ಅಧಿಕಾರವನ್ನು ಆಕ್ರಮಿಸಿಕೊಳ್ಳು ಮಹತ್ವಾಕಾಂಕ್ಷೆಯಿಂದಿತ್ತು. ಕಡೆಗೆ ಕೇಂದ್ರದ ಮೇಲೆ ಸಹ ಅದು ಕಣ್ಣಿಟ್ಟಿತ್ತು.

ಆರೆಸ್ಸೆಸ್ ಮುಖವಾಣಿ 'ಪಾಂಚಜನ್ಯ'ದ ಲೇಖನಗಳಲ್ಲಿ ನನ್ನನ್ನೂ ಒಳಗೊಂಡು ಆರೆಸ್ಸೆಸ್‌ನ ನೀತಿಗಳನ್ನು ವಿರೋಧಿಸುವ ಪ್ರತಿಯೊಬ್ಬ ಜನತಾ ಪಕ್ಷದ ಸದಸ್ಯನನ್ನೂ ಟೀಕಿಸಲಾಗಿತ್ತು. ಈ ಸಂದರ್ಭದಲ್ಲಿ ಆರೆಸ್ಸೆಸ್‌ನ ಸರಸಂಚಾಲಕ ಬಾಳಾ ಸಾಹೇಬ್ ದೇವರಸ್ ಅವರು ನನ್ನ ಮನೆಗೆ ಬರುತ್ತಿದ್ದರು. ಆದರೆ ಹೊಸಬಗೆಯ ಬದಲಾವಣೆಗಳಿಗೆ ಅವರು ಮುಕ್ತ ಮನಸ್ಸಿನವರಾಗಿರಲಿಲ್ಲ. ಅವರೊಂದಿಗೆ ನಿರಂತರ ಸಂಭಾಷಣೆ ನಡೆಸುತ್ತ ಅವರನ್ನು ಬದಲಾಯಿಸಲು ನಾನು ನಡೆಸಿದ ನನ್ನ ಎಲ್ಲ ಪ್ರಯತ್ನಗಳು ವಿಫಲಗೊಂಡವು.

ಆರೆಸ್ಸೆಸ್ ಅಂಗಸಂಸ್ಥೆಗಳಾದ ಭಾರತೀಯ ಮಜ್ದೂರ್ ಸಂಘ, ಎಬಿವಿಪಿ, ಯುವಮೋರ್ಚಾ ಮುಂತಾದ ಸಂಘಟನೆಗಳೊಂದಿಗೆ ನಡೆಸಿದ ಮಾತುಕತೆಗಳು ಸಹ ಫಲನೀಡಲಿಲ್ಲ. ಇದಕ್ಕೆ ಪ್ರತಿಯಾಗಿ ನನಗೆ ಅವರಿಂದ ತೆಗಳಿಕೆಗಳು ಉತ್ತರ ರೂಪದಲ್ಲಿ ದೊರೆತವು. ಜನಜೀವನದ ಪ್ರತಿಯೊಂದು ಘಟ್ಟಗಳಲ್ಲೂ ತಾವು ಭಾಗಿಗಳಾಗಬೇಕು ಮತ್ತು ಅವರನ್ನು ನಿಯಂತ್ರಿಸಬೇಕು ಎಂಬುದು ಈ ಜನರ ಉದ್ದೇಶವಾಗಿತ್ತು. ಅವರ ಮೊದಲ ಗುರಿ ಜನತಾ ಪಕ್ಷವನ್ನು ಕಬ್ಜಾ ಮಾಡಿಕೊಳ್ಳುವುದು. ಇದಕ್ಕಾಗಿಯೇ ಸಂಘ ಪರಿವಾರವು ಜನತಾ ಪಕ್ಷದ ಹಲವಾರು ನಾಯಕರ ಮುಂದೆ ಅಧಿಕಾರದ ಕ್ಯಾರೆಟ್‌ಅನ್ನು ಅಲ್ಲಾಡಿಸುತ್ತಿದ್ದರು. ಒಂದು ಕಡೆ ಮೊರಾರ್ಜಿ ದೇಸಾಯಿಯವರಿಗೆ ನೀವೇ ನಮಗೆ ಪ್ರಶ್ನಾತೀತ ನಾಯಕರೆಂದು ಬಣ್ಣಿಸುತ್ತಿದ್ದರು. ಆದರೆ ಮತ್ತೊಂದು ಕಡೆ ಚರಣ್‌ಸಿಂಗ್ ಅವರಿಗೆ ನೀವು ಪ್ರಧಾನಿ ಪಟ್ಟ ಬಯಸಿದರೆ ನಿಮಗೆ ನಮ್ಮ ಬೆಂಬಲ ಖಾತ್ರಿ ಎಂದು ಆಸೆ ಹುಟ್ಟಿಸುತ್ತಿದ್ದರು. ಈಗಲೂ (೧೯೭೯) ಅವರು ಚಂದ್ರಶೇಖರ್, ಜಗಜೀವನ್ ರಾಂ ಮತ್ತು ಜಾರ್ಜ್ ಫರ್ನಾಂಡಿಸ್‌ರಿಗೆ ಈ ಭರವಸೆಗಳನ್ನು ನೀಡುತ್ತಿದ್ದಾರೆ. ಆದರೆ ಒಮ್ಮೆಯೂ ಅವರು ನನ್ನ ಹೆಸರನ್ನು ಎತ್ತಲಿಲ್ಲ! ಅವರಿಗೆ ಗೊತ್ತಾಗಿರಬೇಕು, ಈ ಮನುಷ್ಯನನ್ನು ಮೂರ್ಖನನ್ನಾಗಿಸಲು ಸಾಧ್ಯವಿಲ್ಲವೆಂದು. ಬದಲಾಗಿ ಅಂತಹ ಪ್ರಯತ್ನಗಳು ಆತನನ್ನು ಮತ್ತಷ್ಟು ಹುಷಾರುಗೊಳಿಸುತ್ತದೆ ಎಂದು ಆರೆಸ್ಸೆಸ್ ಮಂದಿಗೆ ಗೊತ್ತಿತ್ತು.

ಈ ಆರೆಸ್ಸೆಸ್ ಮಂದಿ ಜೈಲಿನಲ್ಲಿದ್ದಾಗ ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದರು. ರಾಜನಾರಾಯಣ ಕೇಸ್‌ನಲ್ಲಿ ಸುಪ್ರೀಂಕೋರ್ಟ್ ಇಂದಿರಾ ಗಾಂಧಿಯವರ ಪರ ತೀರ್ಪು ನೀಡಿದಾಗ ಆರೆಸ್ಸೆಸ್ ಸರಸಂಘಚಾಲಕ ಬಾಳಾ ಸಾಹೇಬ್ ದೇವರಸರು ಇಂದಿರಾ ಗಾಂಧಿಯವರಿಗೆ ಶುಭ ಕೋರಿದ್ದರು. ಇವರ ಕುರಿತಾಗಿ ನನಗೆ ನಂಬುಗೆ ಇಲ್ಲ.

(ಹಿಂದಿಯಿಂದ ಇಂಗ್ಲಿಷ್‌ಗೆ: **ಜಾವೇದ್ ಆನಂದ್**
ಇಂಗ್ಲಿಷ್‌ನಿಂದ ಕನ್ನಡಕ್ಕೆ: **ಬಿ. ಶ್ರೀಪಾದ ಭಟ್**)

# ನಾನೇಕೆ ಆರ್‌ಎಸ್‌ಎಸ್ ಬಿಟ್ಟೆ..?

–ನಿತ್ಯಾನಂದ ಬಿ ಶೆಟ್ಟಿ



**ಮಂ**ಗಳೂರಿನ ಉಳ್ಳಾಲ ವಿಧಾನಸಭಾಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 'ಕೋಟೆಕಾರು ಗ್ರಾಮ ನಾನು ಹುಟ್ಟಿ ಬೆಳೆದ ಊರು. ಉಳ್ಳಾಲ ವಿಧಾನಸಭಾ ಕ್ಷೇತ್ರ ಈಗ ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರವಾಗಿ ಮಾರ್ಪಟ್ಟಿದೆ. ನಮ್ಮ ಹಳ್ಳಿ ಮನೆಗೆ ಅಶೋಕ್ ಬಾಡಿ ಎಂಬ ಓರ್ವ ಸಜ್ಜನರು ಬರುತ್ತಿದ್ದರು. ಅವರು ಆರ್‌ಎಸ್‌ಎಸ್ ಪ್ರಚಾರಕ ಎಂದು ನಮ್ಮ ಹಳ್ಳಿಯಲ್ಲಿ ಜನರು ಮಾತಾಡುತ್ತಿದ್ದರು. ಅವರು ನಿಜಕ್ಕೂ ಸಜ್ಜನ ಮನುಷ್ಯರೇ. ಮದುವೆಯಾಗದ, ಮೆದು ಮಾತಿನ, ವಿಶೇಷ ಸೌಜನ್ಯದ ಅವರು ಬಗಲಿಗೊಂದು ಕಡು ನೀಲಿ ಬಣ್ಣದ ನೇತಾಡುವ ಬಟ್ಟೆ ಚೀಲ, ಬಿಳಿ ಅಂಗಿ, ಬಿಳಿ ಲುಂಗಿ(ಪಂಚೆ) ಧರಿಸಿಕೊಂಡು ಬರುತ್ತಿದ್ದ ಅವರು ಪದೇ ಪದೇ ನಮ್ಮ ಮನೆಗೆ ಭೇಟಿಕೊಟ್ಟು ಕಾಲೇಜ್‌ಗೆ ಹೋಗುತ್ತಿದ್ದ ನನ್ನನ್ನು ಆರ್‌ಎಸ್‌ಎಸ್ ಶಾಖೆಗೆ ಕಳುಹಿಸಿ ಕೊಡುವಂತೆ ನನ್ನ ತಂದೆಯವರೊಂದಿಗೆ ಮಾತಾಡಿ ಒತ್ತಾಯಿಸುತ್ತಿದ್ದರು. ನನಗೂ ಶಾಖೆಗೆ ಹೋಗಬೇಕೆಂಬ ಆಸೆ. ಯಾಕೆಂದರೆ ಅಲ್ಲಿ ಒಂದು ಬಗೆಯ ಶಿಸ್ತು ಇದೆ ಎಂದು ನನಗೆ ಭಾಸವಾಗುತ್ತಿತ್ತು. ಆ ಶಿಸ್ತು ಅಲ್ಲಿಯ ಹುಡುಗರನ್ನು ಉಳಿದ ಹುಡುಗರಿಗಿಂತ ಭಿನ್ನವಾಗಿಸಿತ್ತು. ಹೆಚ್ಚಾಗಿ, ಶಾಲೆಗೆ ಹೋಗುವ ಹುಡುಗರನ್ನೇ ಆರ್‌ಎಸ್‌ಎಸ್ ತನ್ನ ಶಾಖೆಗೆ ಆಕರ್ಷಿಸುತ್ತಿತ್ತು. ಚೆನ್ನಾಗಿ ಮಾತು ಬಲ್ಲವರನ್ನು ಅದು ಹುರಿದುಂಬಿಸುತ್ತಿತ್ತು .ಅವರಿಂದ ಸಣ್ಣ ಮಟ್ಟದ ಉಪನ್ಯಾಸ(ಅದನ್ನುಅಲ್ಲಿ'ಬೌದ್ಧಿಕ' ಅಂತ ಕರೀತಾರೆ) ಕೊಡುವಂತೆ ಪ್ರೋತ್ಸಾಹಿಸುತ್ತಿತ್ತು. ಮಾತು ಬಲ್ಲವನೇ ಅಲ್ಲಿ ಜಾಣ ಆಗುತ್ತಿದ್ದ. ಆ ಕಾಲಕ್ಕೆ ನಾನೂ ಶಾಲೆ–ಕಾಲೇಜುಗಳಲ್ಲಿ ಅಲ್ಪ–ಸ್ವಲ್ಪ ಭಾಷಣ ಮಾಡುತ್ತಿದ್ದುದರಿಂದ ಶಾಖೆಗೆ ಸೇರುವುದರಿಂದ ನನ್ನ ಮಾತುಗಾರಿಕೆಗೂ ಹೆಚ್ಚುವರಿ ಒಂದು ಅವಕಾಶ ಒದಗಿದಂತೆ ಎಂದು ನಾನು ಭಾವಿಸಿದ್ದೆ. ಇವೆಲ್ಲವುಗಳ ಜೊತೆಗೆ ನನ್ನನ್ನು ವಿಶೇಷವಾಗಿ ಆಕರ್ಷಿಸಿದ್ದು ಶಾಖೆಯ ಹುಡುಗರು ಆಡುತ್ತಿದ್ದ ಕಬಡ್ಡಿ.

ನನ್ನ ತಂದೆಯವರು ಮಾತ್ರ ಈಗ ಬೇಡ, ಅವನು ಓದಲಿ, ಸ್ವಲ್ಪ ಗಟ್ಟಿಮುಟ್ಟಾಗಲಿ ಎಂದು ಹೇಳುತ್ತಿದ್ದರೇ ಹೊರತು ನನ್ನನ್ನು ಶಾಖೆಗೆ ಕಳುಹಿಸುವ ಯೋಚನೆಯೇ ಮಾಡಿದ್ದಿಲ್ಲ. ಹೀಗೆ ಇರಲು ಒಂದು ದಿನ ನನ್ನ ತಂದೆಯವರು ಏನೋ ಕೆಟ್ಟ ಮೂಡ್‌ನಲ್ಲಿದ್ದರು ಅಂತ ಕಾಣುತ್ತೆ. ಅಶೋಕ್ ಬಾಡಿಯವರು ಬಂದು "ಮತ್ತೆ ಶೆಟ್ರೇ, ಮಗನನ್ನು ಯಾವಾಗ ನಮ್ಮ ಕೈಗಳಿಗೆ ಕೊಡುತ್ತೀರಿ" ಎಂದರು. ನನ್ನ ತಂದೆಯವರಿಗೆ ಸಿಟ್ಟು ನಖಶಿಖಾಂತ ಉರಿಯಿತು. "ಮರ್ಯಾದೆಯಿಂದ ಹೊರಡುತ್ತಿರೋ ಇಲ್ಲವೋ? ನಾಯಿ ಬಿಡಬೇಕಾಗುತ್ತೆ ಈಗ, ಗಾಂಧಿಯನ್ನು ಕೊಂದ ಜನ ನೀವು... ನನ್ನ ಮಗನನ್ನು ಕರೆದುಕೊಂಡು ಹೋಗುವುದಕ್ಕೆ ಬಂದಿರಾ..? ಇವತ್ತೇ ಕೊನೆ ಇನ್ನೊಂದು ಸಲ ನನ್ನ ಮನೆಯ ಮೆಟ್ಟಿಲು ಹತ್ತಬಾರದು ನಿಮ್ಮಂತಹ ಜನ" ಅಂದರು. ಅಶೋಕ ಬಾಡಿಯವರು ಬಹಳ ಬೇಸರದಿಂದ ನಿರ್ಗಮಿಸಿದರು.



ನನಗೆ ನನ್ನ ತಂದೆಯ ಮೇಲೆ ತುಂಬಾ ಸಿಟ್ಟು ಬಂತು. ಒಬ್ಬ ಸಜ್ಜನ ಮನುಷ್ಯನನ್ನು ನಾಯಿ ಬಿಟ್ಟು ಓಡಿಸುತ್ತೇನೆಂದು ನನಗೆ ಸರಿ ಕಂಡು ಬರಲಿಲ್ಲ. ಹೀಗೆ ಇರಲು ನಾನು ಪಿಯುಸಿ ಓದುತ್ತಿರುವಾಗಲೇ ನನ್ನ ತಂದೆಯವರು ನಿಧನರಾದರು. ಅವರು ನಿಧನರಾದ ತಿಂಗಳಲ್ಲೆ ಅಶೋಕ ಬಾಡಿಯವರು ಮತ್ತೆ ಬಂದರು. ನಾನೂ ಆರ್‌ಎಸ್‌ಎಸ್ ಶಾಖೆಗೆ ಸೇರಲು ಉತ್ಸುಕನಾಗಿದ್ದೆ. ಪ್ರತಿದಿನ ಸಂಜೆ ಶಾಖೆಗೆ ಹೋಗಲು ಆರಂಭಿಸಿದೆ. ಮೊದಲ ವರ್ಷ ಸಂಜೆ ಇದ್ದದ್ದು ಆಮೇಲಾಮೇಲೆ ಅದು ಮುಂಜಾನೆ ಐದು ಗಂಟೆಗೆ ನಡೆಯಲು ಆರಂಭಿಸಿತು. ನಾನು ಸ್ವಲ್ಪ ಹೆಚ್ಚು ಚುರುಕಾದುದರಿಂದ ಸೇರಿದ ಒಂದೇ ವರ್ಷದಲ್ಲಿ ಭಡ್ತಿ ಪಡೆದು ಶಾಖೆಯ ಮುಖ್ಯ ಶಿಕ್ಷಕನೂ ಆದೆ. "ನಮಸ್ತೇ ಸದಾ ವತ್ಸಲೇ ಮಾತೃಭೂಮೇ, ತ್ವಯಾ ಹಿಂದು ಭೂಮೇ ಸುಖಂ ವರ್ಧಿತೋಹಮ್..." ಗೀತೆಯನ್ನು ಶುದ್ಧವಾಗಿ ಹೇಳುವುದೇ ನನ್ನ ಬಲು ದೊಡ್ಡ ಅರ್ಹತೆಯಾಗಿತ್ತು.

ಹೀಗೆ ದಿನಗಳು ಕಳೆದು ನನಗೆ ಸುರತ್ಕಲ್‌ನ ಗೋವಿಂದ ದಾಸ್ ಕಾಲೇಜ್‌ನಲ್ಲಿ ಐಟಿಸಿ(ಇಂಟರ್ನಲ್ ಟ್ರೈನಿಂಗ್ ಕ್ಯಾಂಪ್) ಟ್ರೈನಿಂಗ್ ಕೂಡ ಸಿಕ್ಕಿತು. ಈಗ ನಮ್ಮೂರಲ್ಲಿ ನಾನೊಬ್ಬ ಆರ್‌ಎಸ್‌ಎಸ್ ಕಾರ್ಯಕರ್ತ ಮಾತ್ರ ಆಗಿರಲಿಲ್ಲ. ಚಿಗುರೊಡೆಯುವ ಒಬ್ಬ ಯುವ ಮುಖಂಡ ಕೂಡ ಆಗಿದ್ದೆ. ಊರಿಂದೂರಿಗೆ ಹೋಗಿ ಅನ್ಯ ಶಾಖೆಗಳಲ್ಲಿ 'ಬೌದ್ಧಿಕ್' ಕೊಡುತ್ತಿದ್ದೆ. ಸಭೆಗೆ ಬರುವ ಸಂಘದ ಹಿರಿಯರು ನನ್ನ ಮಾತಿಗೆ ಬೆಲೆ ಕೊಡುತ್ತಿದ್ದರು. ಹಾಗಿದ್ದೂ ಸಭೆಗಳಲ್ಲಿ ಚರ್ಚೆಯಾಗುವ ಸಂದರ್ಭದಲ್ಲಿ ಬರುತ್ತಿದ್ದ ಅನ್ಯಮತ ದ್ವೇಷದ ಸಂಗತಿಗಳು ನನಗೆ ಇಷ್ಟವಾಗುತ್ತಿರಲಿಲ್ಲ. ಯಾಕೆಂದರೆ ಫೈಜ್‌ಲ್ ಅಂತ ನನಗೊಬ್ಬ ಗೆಳೆಯನಿದ್ದ. ಅವನು ನಮ್ಮ ಜೊತೆ ಯಕ್ಷಗಾನದಲ್ಲಿ, ನಾಟಕದಲ್ಲಿ ಪಾರ್ಟು ಮಾಡುತ್ತಿದ್ದ. ಅವನ ಮನೆಯವರು ಬಹಳ ಶ್ರೀಮಂತರಾಗಿದ್ದರೂ ನಮ್ಮ ಮನೆಗೆ ಬಂದು ಊಟ ಮಾಡುತ್ತಿದ್ದ. ಅವನನ್ನು ಯಾವ ಕಾರಣಕ್ಕೆ ದ್ವೇಷಿಸಬೇಕೆಂದು ನನಗೆ ಅರ್ಥವಾಗುತ್ತಿರಲಿಲ್ಲ.

ಈ ಸಮಯದಲ್ಲಿ ನಾನು ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜ್‌ನಲ್ಲಿ ಪ್ರಥಮ ಬಿ.ಎ. ಓದುತ್ತಿದ್ದೆ. ಕಾಲೇಜ್‌ನ ಲೈಬ್ರೈರಿ ಬಹಳ ಚೆನ್ನಾಗಿತ್ತು. ಅಲ್ಲಿ ಮೊದಲಿಗೆ ನಾನು ಓದಿದ ಕಾದಂಬರಿಗಳು ಎರಡು. ಒಂದು ವಿಶುಕುಮಾರ್‌ರ 'ಕರಾವಳಿ' ಇನ್ನೊಂದು ತೇಜಸ್ವಿಯವರ 'ಚಿದಂಬರ ರಹಸ್ಯ'. ಈ ಎರಡೂ ಕಾದಂಬರಿಗಳಲ್ಲಿ ನನ್ನಲ್ಲಿ ಏಳುತ್ತಿದ್ದ ಅನೇಕ ಪ್ರಶ್ನೆಗಳಿಗೆ ಉತ್ತರಗಳಿದ್ದವು. ನನ್ನ ದಾರಿಯನ್ನು ಬದಲಾಯಿಸಿಕೊಳ್ಳಬೇಕು ಎಂದು ಅನ್ನಿಸುವ ಭಾವನೆಗಳು ನನಗೇ ಸ್ಪಷ್ಟವಾದ ದಿನಗಳವು. ಆದರೂ ಆರ್‌ಎಸ್‌ಎಸ್‌ನಲ್ಲಿದ್ದೂ ಒಬ್ಬ ಭಿನ್ನಮತೀಯನಾಗಬಹುದು ಎಂದು ನಾನು ಭಾವಿಸಿಕೊಂಡಿದ್ದ ನನಗೆ ನಿಜವಾಗಿ ಆಘಾತವಾದದ್ದು, ಬಹಳ ಜಿಗುಪ್ಸೆ ಮೂಡಿದ್ದು ಗುರುದಕ್ಷಿಣೆಯಂತಹ ಕಾರ್ಯಕ್ರಮ ಅಲ್ಲಿನ ಕೆಲವರಿಗೆ ಸ್ವಂತಕ್ಕೆ ಹಣ ಲಪಟಾಯಿಸುವ ಕಾರ್ಯಕ್ರಮವಾಗಿದ್ದುದನ್ನು ಕಣ್ಣಾರೆ ಕಂಡಾಗ.

*******

ನನ್ನ ಅಮ್ಮ ಓದಿದ್ದು ಮೂರನೇ ತರಗತಿ. ಆದರೆ ಅವರಿಗೆ ಕಾವ್ಯ–ಪುರಾಣಗಳ ಆಳವಾದ ತಿಳುವಳಿಕೆ ಇತ್ತು. ನರಹರಿಯ ತೊರವೆ ರಾಮಾಯಣ, ಕುಮಾರವ್ಯಾಸನ ಭಾರತ ಇವುಗಳನ್ನು ಅವರು ಯಾವಾಗಲೂ ಓದುತ್ತಿದ್ದರು. ಅದರಲ್ಲೂ ತೊರವೆ ರಾಮಾಯಣದ ತಾಂಡವ ಮುನಿ ಪ್ರಕರಣ (ಶ್ರವಣಕುಮಾರ ದಶರಥನ ಶಬ್ದವೇಧಿ ಬಾಣಪ್ರಯೋಗಕ್ಕೆ ಬಲಿಯಾಗಿ ಸಾಯುವುದು) ಆಕೆಗೆ ತುಂಬಾನೇ ಪ್ರಿಯವಾದ ಭಾಗಗಳಲ್ಲಿ ಒಂದು. ಅದನ್ನು ಹೇಳಿ ಆಕೆ ಎಷ್ಟೋ ಸಲ

ಕಣ್ಣೀರುಗರೆದದ್ದು ಇದೆ. ಅಮ್ಮ ಕಣ್ಣೀರು ಸುರಿಸುವಾಗೆಲ್ಲ ನಾನೂ ಕಣ್ಣೀರು ಹಾಕುತ್ತಿದ್ದೆ.

೧೯೯೨ರ ಡಿಸೆಂಬರ್ ತಿಂಗಳಲ್ಲಿ ನಮ್ಮ ಊರಲ್ಲಿ ಕೋಮು ಗಲಭೆಗಳು ಸಂಭವಿಸುತ್ತಿರುವ ಕಾಲದಲ್ಲಿ ಒಂದು ದಿನ ನಟ್ಟನಡು ಹಗಲಲ್ಲಿ ಮನೆಯ ಅಂಗಳದಲ್ಲಿ ಕುಳಿತು ನನ್ನ ಅಮ್ಮ ತೆಂಗಿನ ಮಡಲುಗಳ ಗರಿ ತೆಗೆದು ಪೊರಕೆ ಸಿದ್ಧಪಡಿಸುತ್ತಿದ್ದರು. ನಾನೂ ಅಂಗಳದಲ್ಲೇ ಇದ್ದೆ. ಆಗ ನಮ್ಮ ಮಾವನ ತೋಟದ ಕಡೆಯಿಂದ 'ಅಯ್ಯೋ... ಉಮ್ಮಾ' ಎಂಬ ಆರ್ತನಾದ ಕೇಳಿಬಂತು. ಅಮ್ಮ ಮತ್ತು ನಾನು ಧಿಗ್ಗನೆದ್ದು ನೋಡುವುದೇನು...?

ಉಸ್ಮಾನ್ ಎಂಬ ನಮ್ಮ ನೆರೆಯ ಮಂದ ಬುದ್ಧಿಯ ಹುಡುಗನ ಕೈ ಕಡಿಯಲ್ಪಟ್ಟು ನಮ್ಮ ಮನೆಯಕಡೆಗೆ ಓಡಿ ಬರುತ್ತಿದ್ದಾನೆ.

"ರಾಮರಾಮಾ..."

ಇದು, ತುಂಡಾದ ಕೈಗಳ ಉಸ್ಮಾನ್‌ನನ್ನು ನೋಡಿದ ನನ್ನ ಅಮ್ಮನ ಬಾಯಿಂದ ಬಂದ ಮೊದಲ ಜೋಡಿ ಪದಗಳು. ನಾನು ದಿಙ್ಮೂಢನಾದೆ. ಈ ಇಡೀ ಗಲಭೆ ಆರಂಭವಾಗಿರುವುದೇ ರಾಮನ ಹೆಸರಿನಲ್ಲಿ. ನನ್ನ ಅಮ್ಮ ಉದ್ಗರಿಸುತ್ತಿರುವುದೂ ರಾಮನ ಹೆಸರನ್ನೇ... ಉಸ್ಮಾನ್‌ಗೆ ಏನೋ ಉಪಚಾರ ಮಾಡಿ ನನ್ನ ಅಣ್ಣನ ಜೊತೆ ಮಾಡಿ ಕಳುಹಿಸಿಕೊಟ್ಟ ಅಮ್ಮ ತುಂಬ ವಿಹ್ವಲರಾಗಿದ್ದರು.ನನ್ನ ಮನಸ್ಸೂ ಧ್ವಂಸಗೊಂಡಿತ್ತು.

ಮಂದ ಬುದ್ಧಿಯ ಹುಡುಗ-ರಕ್ತ ಸುರಿಯುತ್ತಿರುವ ಕೈಗಳು-ನೆರೆಮನೆಯ ಸಂಬಂಧ; ಇವೆಲ್ಲವನ್ನೂ ನೆನೆಸಿಕೊಂಡು ನನ್ನ ಅಮ್ಮ ಬಹಳ ವ್ಯಾಕುಲಗೊಂಡಿದ್ದರು. ಆ ದುಃಖದಲ್ಲೇ ಅವರು 'ಬಾಲ ಎಲ್ಲಿಗೆ ಪೋದನ್ಯೆ, ಎನ್ನಯ ಚಾರುಶೀಲ ಏನಾದನ್ಯೆ' -ಹಾಡನ್ನು ಬಹಳ ಆರ್ತವಾಗಿ ಹಾಡುತ್ತಿದ್ದರು. ಆ ಹಾಡು ರಾಮ-ರಾವಣರ ಯುದ್ಧದಲ್ಲಿ ತನ್ನ ಮಗನಾದ ಧರ್ಮಭೀರು ಅತಿಕಾಯನನ್ನು ಕಳೆದುಕೊಂಡ ಆತನ ತಾಯಿ ಧ್ಯಾನಮಾಲಿನಿ ದುಃಖಿಸುವ ಹಾಡು.('ಅತಿಕಾಯ ಮೋಕ್ಷ' ಎಂಬ ಯಕ್ಷಗಾನ ಪ್ರಸಂಗದಲ್ಲಿ ಈ ಹಾಡು ಇದೆ)

ನಾನು ಬಹಳ ಭಾವುಕನಾದೆ. ಮತ್ತೆ ಮತ್ತೆ ನನಗೆ ನನ್ನಅಮ್ಮ ಹೇಳಿದ ಜೋಡಿಪದಗಳಾದ "ರಾಮರಾಮಾ" ಎಂಬ ಪದವೂ ಮತ್ತು 'ಬಾಲ ಎಲ್ಲಿಗೆ ಹೋದನ್ಯೆ' ಎಂಬ ಹಾಡು ಅದರ ಎಲ್ಲ ಅರ್ಥಗಳ ಮೂಲಕ ಇರಿಯತೊಡಗಿತು. ಯಾಕೋ ನಾನು ಶಾಖೆಗೆ ಹೋಗುವ ಆರ್‌ಎಸ್‌ಎಸ್‌ನ ರಾಮ ಮತ್ತು ನನ್ನ ಅಮ್ಮನ ಗರ್ಭದಲ್ಲಿರುವ ರಾಮ ಎಂಬ ಪದ ಎರಡೂ ಬೇರೆ ಬೇರೆ ಅಂತ ಅನ್ನಿಸಿದುವು.

ನಾನು ಇನ್ನು ತಡ ಮಾಡಲಿಲ್ಲ. ಮನೆಯೊಳಗಿದ್ದ ಆರ್‌ಎಸ್‌ಎಸ್‌ನ ಸಮವಸ್ತ್ರದ (ಗಣವೇಷ) ಲಾಂಛನಗಳಾದ ಖಾಕಿ ಚೆಡ್ಡಿ, ಬೆಲ್ಟ್, ದಂಡ ಇತ್ಯಾದಿಗಳಿಗೆ ಬೆಂಕಿ ಕೊಟ್ಟು ಸುಟ್ಟು ಬಿಟ್ಟೆ. ಯಾಕೋ ಮತ್ತೆ ಮತ್ತೆ ಅಪ್ಪ ನೆನಪಾಗುತ್ತಲೇ ಇದ್ದರು.


ನಾನು ಆರ್‌ಎಸ್‌ಎಸ್ ತ್ಯಜಿಸಿದೆ. *

## ಸಾಹಿತ್ಯ-ಸಂಸ್ಕೃತಿ-ಸಂಭ್ರಮ-ಸಮ್ಮೇಳನ ಇತ್ಯಾದಿ

### ಹೀಗೇ ಕೆಲವು ಬಿಡಿ ಟಿಪ್ಪಣಿಗಳು...



ಇನ್ನೊಂದು ಸಾಹಿತ್ಯ ಸಮ್ಮೇಳನ ಮುಗಿದಿದೆ. ಐದಾರು ವರ್ಷಗಳ ಹಿಂದಿನ ಶಿವಮೊಗ್ಗ ಸಾಹಿತ್ಯ ಸಮ್ಮೇಳನದ ಕಾಲದಿಂದಲೂ ಸಮ್ಮೇಳನಾಧ್ಯಕ್ಷತೆಗೆ ಆಶೆಪಡುತ್ತಿದ್ದಂತೆ ಕಂಡ ಹಿರಿಯ ಗೆಳೆಯರಾದ ನಾ. ಡಿ'ಸೋಜಾ ಅವರು ಅದನ್ನೀಗ ಮನದುಂಬಿ ಅನುಭವಿಸಿ ಎಷ್ಟು ಸಂತೃಪ್ತರಾಗಿದ್ದಾರೋ ತಿಳಿಯೆ. ಇವರ ಆಯ್ಕೆಯನ್ನು ಪುಂಡಲೀಕ ಹಾಲಂಬಿ ಎಂಬ ಪರಿಷತ್ತಿನ ಹುಂಬ ಅಧ್ಯಕ್ಷ ಸಾಮಾಜಿಕ ನ್ಯಾಯಕ್ಕೆ ಸಂದ ಜಯ ಎಂದು ವರ್ಣಿಸಿದ್ದರಿಂದ ಹಿಡಿದು, ಅದಕ್ಕೆ ತಕ್ಕಂತೆಯೇ ಸಮ್ಮೇಳನದಲ್ಲಿ ಅಧ್ಯಕ್ಷರ ಭಾಷಣ ಔಪಚಾರಿಕ ಮಾತ್ರವೆಂಬಂತೆ ಅದನ್ನು ಮೊಟಕುಗೊಳಿಸಲು ವೇದಿಕೆಯ ಮೇಲೇ ಸೂಚಿಸಿ, ಕೊನೆಗೆ ಅಧ್ಯಕ್ಷರ ಭಾಷಣದ ತಿರುಳಾಗಿ ಯಾವುದನ್ನು ಅದರಲ್ಲಿ ಎತ್ತಿ ಹಿಡಿಯಲಾಗಿತ್ತೋ ಆ ಪಶ್ಚಿಮ ಘಟ್ಟಗಳ ಸಂರಕ್ಷಣೆ ಕುರಿತ ಕಸ್ತೂರಿ ರಂಗನ್ ವರದಿಯನ್ನು ತಿರಸ್ಕರಿಸುವಂತೆ ಕರೆ ನೀಡುವ ನಿರ್ಣಯವನ್ನು ಸಮ್ಮೇಳನ ಅಂಗೀಕರಿಸಿದ್ದರವರೆಗೆ ಎಲ್ಲವೂ ಅವರಿಗೆ ಮುಜುಗರವನ್ನೇ ಉಂಟುಮಾಡುತ್ತಿರುವಂತಿದ್ದುದು ವಿಷಾದನೀಯ.



ಇದಕ್ಕೆಲ್ಲ ಕಾರಣ, ಕನ್ನಡ ಸಾಹಿತ್ಯ ಪರಿಷತ್ತೆಂಬುದೇ ಕನ್ನಡಿಗರ ಪಾಲಿಗೆ ಒಂದು ವಿಷಾದನೀಯ ಸಂಗತಿಯಾಗಿರುವುದು. ಪರಿಷತ್ತಿಗೆ ಇತಿಹಾಸವಿದೆ. ಆದರೆ ವರ್ತಮಾನವಿಲ್ಲ; ಭವಿಷ್ಯವಂತೂ ಇಲ್ಲವೇ ಇಲ್ಲ. ಕಾರಣ, ಪರಿಷತ್ತು ತನ್ನ ಕರ್ತವ್ಯವನ್ನು ಮುಗಿಸಿ ಎಂದೋ ಅಪ್ರಸ್ತುತವಾಗಿ ಹೋಗಿದೆ. ಹಾಗಾಗಿಯೇ ಇಂದು ಅದು ಎಲ್ಲ ಮಟ್ಟಗಳಲ್ಲೂ ಸಾಹಿತ್ಯದ ದುರ್ವಾಸನೆಯನ್ನು ಮಾತ್ರ ಹಬ್ಬಿಸುವ ಅಪ್ಪಟ ಪುಢಾರಿಗಳ ಕೈವಶವಾಗಿಹೋಗಿದೆ. ಅದೀಗ ಕನ್ನಡಿಗರ ಸಾಹಿತ್ಯಿಕ-ಸಾಂಸ್ಕೃತಿಕ ಆಶೋತ್ತರಗಳ ವೇದಿಕೆಯಾಗಿಲ್ಲ. ಒಂದು ಸರ್ಕಾರಿ ಬಿಳಿಯಾನೆಯಾಗಿ ವರ್ಷಕ್ಕೊಮ್ಮೆ ಸಮ್ಮೇಳನದ ಹೆಸರಿನಲ್ಲಿ ಸುಮ್ಮನೆ ಘೀಳಿಡುತ್ತದೆ. ಮೊನ್ನೆ ಪುಂಡಲೀಕ ಹಾಲಂಬಿ ಘೀಳಿಟ್ಟರಲ್ಲಾ, 'ಸರ್ಕಾರ ಕೂಡಲೇ ಸಮ್ಮೇಳನಕ್ಕಾಗಿ ಇನ್ನೂ ಎರಡು ಕೋಟಿ ರೂಪಾಯಿ ಬಿಡುಗಡೆ ಮಾಡದಿದ್ದರೆ ಪರಿಷತ್ತಿನ ಕಛೇರಿಗೆ ಬೀಗ ಹಾಕಬೇಕಾಗುತ್ತದೆ!' ಎಂದು!! ಸಿದ್ಧರಾಮಯ್ಯನವರು ಈ ಹುಸಿ ಘೀಳಿಗೆ ಕಿವಿಗೊಡದೆ ಹಾಲಂಬಿಯವರು ತಮ್ಮ ಬೆದರಿಕೆಯನ್ನು ಜಾರಿ ಮಾಡಲು ಬಿಟ್ಟಿದ್ದರೇ ಚೆನ್ನಿತ್ತು. ಕನ್ನಡ ಜನತೆ ಅವರಿಗೆ ಕೃತಜ್ಞರಾಗಿರುತ್ತಿದ್ದರು. ಮಡಿಕೇರಿಯ ಈ ಸಮ್ಮೇಳನದ ಮೂರು ದಿನಗಳೂ ಎದ್ದು ಕಂಡ ಖಾಲಿ ಕುರ್ಚಿಗಳ ರಾಶಿಯ ಮೇಲೆ ಸರ್ಕಾರದ ಕೋಟ್ಯಾಂತರ ರೂಪಾಯಿಗಳು ಚೆಲ್ಲಾಡಿತ್ತು. ಇದು ಜನತೆಯ ಹಣದ ದುರ್ವ್ಯಯವೇ ಹೌದು.

ಇನ್ನು ಇದಕ್ಕೆ ಪ್ರತಿಯಾಗಿಯೋ ಎಂಬಂತೆ ನಮ್ಮ ನವ್ಯ ಸಾಹಿತ್ಯದ ಕೆಲವೇ ಪಳೆಯುಳಿಕೆಗಳಲ್ಲಿ ಒಬ್ಬರಾದ ಗಿರಡ್ಡಿ ಗೋವಿಂದರಾಜರ ಸಂಚಾಲಕತ್ವದಲ್ಲಿ ನಡೆದ ಧಾರವಾಡ ಸಾಹಿತ್ಯ ಸಂಭ್ರಮ ಆಯ್ದ ಕೆಲವೇ ಕುರ್ಚಿಗಳಿಗೆ ಸೀಮಿತವಾಗಿದ್ದುದರಿಂದ ಅವು ತುಂಬಿ ತುಳುಕಿದ ವರದಿಗಳು 'ಪ್ರಜಾವಾಣಿ' ಪತ್ರಿಕೆಯ ಪುಟಗಳಲ್ಲಿ ತುಂಬಿ ತುಳುಕಿದವು. ಈ ಪತ್ರಿಕೆಯನ್ನು ಹೊರತುಪಡಿಸಿ ಇನ್ನಾವ ಮಾಧ್ಯಮವೂ ಗಂಭೀರವಾಗಿ ಪರಿಗಣಿಸದಷ್ಟು 'ಖಾಸಗಿ'ಯಾಗಿ ನಡೆದ ಆಯ್ದ ಸಾಹಿತಿಗಳ ಈ ರೋಟರಿ ಕ್ಲಬ್ ಮೀಟಿಂಗ್‌ನ ಸಾಹಿತ್ಯ ಸಾಧನೆಗಳೇನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಈ ಒಂದು ಸಂಗತಿಯ ಹೊರತಾಗಿ: ಖಾಸಗಿ ಪ್ರಯತ್ನವಾಗಿಯಾದರೂ ಈಗ ಅನಂತಮೂರ್ತಿ, ಕಾರ್ನಾಡರ ಜೊತೆ ಭೈರಪ್ಪ ಮತ್ತು ಶತಾವಧಾನಿ ಗಣೇಶರೂ ಆಸೀನರಾಗಿ ಸಂವಾದ ನಡೆಸುವ ಹೊಸ ಸಾಹಿತ್ಯಿಕ ಅನುಸಂಧಾನವೊಂದು ಕನ್ನಡ ಸಾಹಿತ್ಯಲೋಕದಲ್ಲಿ ಆರಂಭವಾಗಿದೆ! ಇದು ನವ್ಯ ಸಾಹಿತ್ಯ ರಾಜಕಾರಣದ ಹೊಸ ಆವೃತ್ತಿಯೋ ಏನೋ ತಿಳಿಯದು!


ಅದೇನೇ ಇದ್ದರೂ, ಇದಕ್ಕೆ ಸರ್ಕಾರ ಹದಿನೈದು ಲಕ್ಷ ರೂಪಾಯಿಗಳ ಅನುದಾನ ನೀಡಿದೆ ಎಂಬ ಸುದ್ದಿಯಿದೆ. ಇದು ನಿಜವಿದ್ದಲ್ಲಿ ಇದು ಅತ್ಯಂತ ಬೇಜವಾಬ್ದಾರಿಯ ಮತ್ತು ಪ್ರಶ್ನಾರ್ಹವಾದ ಅನುದಾನ. ಧಾರವಾಡದಲ್ಲಿ ನಡೆದದ್ದು, ಸಾಹಿತ್ಯ-ಸಂಸ್ಕೃತಿ ಚಟುವಟಿಕೆ ಎಂದಿಟ್ಟುಕೊಂಡರೂ, ಅದು ಯಾವುದೇ ಸಾರ್ವಜನಿಕ ಸಂಹಿತೆಗೆ ಒಳಪಡದ ಒಂದು ಖಾಸಗಿ ಚಟುವಟಿಕೆ. ಇದರ ಮುಂಚೂಣಿಯಲ್ಲಿದ್ದ

ಕೆಲವು ದೊಡ್ಡ ಹೆಸರುಗಳ ಮೇಲೇ ಸರ್ಕಾರದ ಹಣ ಬಿಡುಗಡೆಯಾಗುವುದಾದರೆ ಅದು ಪ್ರಜಾಪ್ರಭುತ್ವದ ಮೂಲ ಭಾವನೆಗೇ ವಿರುದ್ಧವಾದದ್ದು. ಸರ್ಕಾರಕ್ಕೇನಾದರೂ ಸಾಂಸ್ಕೃತಿಕ ನೆಲೆಯ ಮರ್ಯಾದೆಯಿದ್ದರೆ ಮೊದಲು ಅದು ಅಕಾಡೆಮಿಗಳನ್ನು ತನ್ನ ಈ ಮರ್ಯಾದೆಯನ್ನು ಕಾಪಾಡುವ ರೀತಿಯಲ್ಲಿ ರಚಿಸಿ ಅವುಗಳ ಮೂಲಕ ಸಾಹಿತ್ಯ–ಸಂಸ್ಕೃತಿಗಳ ಕೆಲಸ ಮಾಡಲಿ. ಇಂತಹ ಆಯ್ದ ಪ್ರತಿಷ್ಠಿತರ ಚಟುವಟಿಕೆಗಳನ್ನು ಜನತೆಯ ಹಣದಲ್ಲಿ ಪ್ರೋತ್ಸಾಹಿಸುವುದನ್ನು ನಿಲ್ಲಿಸಲಿ.

ಇನ್ನು ಕನ್ನಡದ ಹೆಮ್ಮೆಯ ಪತ್ರಿಕೆ 'ಪ್ರಜಾವಾಣಿ' ಇದಕ್ಕೆ ಸಹ–ಪ್ರಾಯೋಜಕತ್ವ ಒದಗಿಸಿದ್ದನ್ನು ಯಾರೂ ಪ್ರಶ್ನಿಸಲಾರರಾದರೂ, ತನ್ನ ಪ್ರಾಯೋಜಕತ್ವದ ನೆಪದಲ್ಲಿ ಅದು ಕೆಲವರ ಸಂಭ್ರಮವನ್ನು ಎಲ್ಲರ ಸಂಭ್ರಮವೆಂಬಂತೆ, ತನ್ನ ಓದುಗರೆಲ್ಲರ ಮೇಲೆ ಪುಟಗಟ್ಟಲೆ ಹೊರಿಸಿದ್ದು ಮಾತ್ರ ಪ್ರಶ್ನಾರ್ಹ. ಇದು ಪತ್ರಿಕೆಯ ಮಾಲೀಕರ ಮನೆಯ ಮದುವೆ ಸುದ್ದಿಯನ್ನು ಪತ್ರಿಕೆಯ ತುಂಬಾ ಪ್ರಕಟಿಸಿಕೊಳ್ಳುವುದಕ್ಕಿಂತ ಸ್ವಲ್ಪ ಮಾತ್ರ ಕಡಿಮೆಯಾದ ಸಾರ್ವಜನಿಕ ದುರಭಿರುಚಿಯ ಪ್ರಯತ್ನ. 'ಪ್ರಜಾವಾಣಿ' ಟಿಎಸ್ಸಾರ್–ವೈಯೆನ್ಕೆ ಕಾಲದಿಂದಲೂ ಕನ್ನಡ ಸಾಹಿತ್ಯದ ರಾಜಕಾರಣ ಮಾಡುತ್ತಲೇ ಬಂದಿದೆ. ಅದು ಆಗ ಸಂಪಾದಕೀಯ ಬಳಗದ ಮೇಲರಿಮೆಯ ಮೆರೆದಾಟದ ರಾಜಕಾರಣವಾಗಿದ್ದರೆ, ಇದು ಈಗ ಮಾಲೀಕರ ಕೀಳರಿಮೆಯನ್ನು ತುಂಬಿಕೊಳ್ಳಲು ನಡೆದಿರುವ ರಾಜಕಾರಣದಂತೆ ತೋರುತ್ತಿದೆ. ಈ ಮೊದಲು ಪ್ರಸ್ತಾಪಿಸಿದ ಸಾಹಿತ್ಯ ಲೋಕದ ಹೊಸ ಅನುಸಂಧಾನದ ಹಿನ್ನೆಲೆಯಲ್ಲಿ ಇದು ಅಪಾಯಕಾರಿಯಾಗಿ ಕಾಣುತ್ತದೆ.



ಇಷ್ಟೆಲ್ಲ ಹೇಳಿದ ಮೇಲೂ ಒಂದು ಮಾತು ಹೇಳಲೇಬೇಕು: ಈ ಸಂಭ್ರಮದಲ್ಲಿ ನಿಜವಾಗಿಯೂ ಪ್ರಾಮಾಣಿಕವಾಗಿ ಮಾತನಾಡಿದ್ದು ಭೈರಪ್ಪನವರೇ! ಅಥವಾ ಅವರೊಬ್ಬರೇ! ಅನಂತಮೂರ್ತಿಯವರನ್ನು ನೋಡಿ. ಈ ವಯಸ್ಸಿನಲ್ಲೂ ಸುದ್ದಿ ಶೂರತ್ವದ ರೋಗ ಬಡಿದುಕೊಂಡಂತಿರುವ ಅವರು ಅಲ್ಲಿ ಬಂದು ಉದ್ಘಾಟನೆಯ ಸಂದರ್ಭದಲ್ಲೇ ಮೋದಿಯ ಪ್ರಸ್ತಾಪದೊಂದಿಗೆ ಮಾತು ಆರಂಭಿಸುತ್ತಾರೆ! ಸ್ವಾಮಿ, ನಿಮಗೆ ಇಷ್ಟೊಂದು ರಾಜಕೀಯ ತೆವಲಿದ್ದರೆ, ಬೀದಿಗೆ ಬಂದು ಮೋದಿ ವಿರುದ್ಧ ಸಾರ್ವಜನಿಕ ಭಾಷಣಗಳನ್ನು ಶುರು ಮಾಡಿ. ಹೀಗೆ ಸಾಹಿತ್ಯದ ವೇದಿಕೆಗಳ ಮೇಲೆ ಪುಂಡಾಟಿಕೆ ನಡೆಸಿ ಸಾಹಿತ್ಯದ ಜೀವ ಕೋಶದ ಮೇಲಿನ ತೆಳು ಆದರೆ ಅನನ್ಯ ಸೂಕ್ಷ್ಮವಾದ ಪೊರೆಯನ್ನು ಜಖಂಗೊಳಿಸಬೇಡಿ. ಅದು ಉಸಿರಾಡುವುದನ್ನು ನಿಲ್ಲಿಸೀತು.




ಅನಂತಮೂರ್ತಿಯವರ ಇಂತಹ ಹುಚ್ಚಾಟದ ಪರಿಣಾಮಗಳನ್ನು ನಾವು ಎಲ್ಲೆಲ್ಲೂ ಕಾಣತೊಡಗಿದ್ದೇವೆ. ಮೊನ್ನೆ ಗೆಳೆಯರೊಬ್ಬರ ಕಥಾಸಂಕಲನದ ಬಿಡುಗಡೆಗೆ ಹೋದರೆ, ಅದು ಅಪ್ಪಟ ಮೋದಿ ವಿರೋಧಿ ಭಾಷಣಗಳ ವೇದಿಕೆಯಾಗಿ ಮಾರ್ಪಟ್ಟು ಸಾಹಿತ್ಯ ಹಿನ್ನೆಲೆಗೆ ಸರಿದುಹೋಯಿತು. ಆ ಕಥೆಗಾರ ಮುಸ್ಲಿಮರಾಗಿದ್ದುದಂತೂ ಇವರಿಗೆ ತಮ್ಮ ಭಾಷಣಗಳ ಕಾವು ಏರಿಸಿಕೊಳ್ಳಲು ವಿಶೇಷ ಸ್ಫೂರ್ತಿ ಸಿಕ್ಕಂತಾಯಿತು. ಸಾಹಿತ್ಯದ ಗೊಬರು ಹಾಕಿಕೊಂಡ ಈ ಪುಢಾರಿ ಭಾಷಣಗಳನ್ನು ಕೇಳುತ್ತಾ ಹೋದಂತೆ ಮೋದಿಯ ಕೈಗಳಿಂದ ತಪ್ಪಿಸಿಕೊಂಡ ಜನ ಇವರ ಕೈಗೆ ಸಿಗುವಂತಾದರೆ ಗತಿಯೇನು ಎಂದು ಭಯವಾಯಿತು. ಸಾಹಿತ್ಯ–ಸಂಸ್ಕೃತಿಗಳ ಸ್ವಾಯತ್ತತೆಯನ್ನು ಗೌರವಿಸದ ಜನ ತಮಗೆ ಗೊತ್ತಿಲ್ಲದಂತೆಯೇ ಫ್ಯಾಸಿಸ್ಟರನ್ನೂ ಮೀರಿಸುವ ಕ್ರೂರಿಗಳಾಗಬಲ್ಲರು.

ಕೊನೆಯದಾಗಿ ಗೆಳೆಯ ಶಿವಪ್ರಕಾಶ್ 'ಪ್ರಜಾವಾಣಿ'ಯಲ್ಲಿ ಇತ್ತೀಚೆಗೆ ಬರೆದ ಎರಡು ಅಂಕಣಗಳ ಬಗ್ಗೆ ಎರಡು ಮಾತು. ಶಿವಪ್ರಕಾಶರೀಗ ತಾವು ಹಿಂದೆ ಸಾಹಿತ್ಯ ಕ್ಷೇತ್ರದ ಹೊರಗೋ, ಪರಿಧಿಯಲ್ಲೋ ಇಟ್ಟಿದ್ದವರನ್ನೆಲ್ಲ ತಮ್ಮ ಹೊಸ ಲೋಕಾನುಸಂಧಾನದಲ್ಲಿ



ಒಳಕ್ಕೆ ಆಹ್ವಾನಿಸಿಕೊಂಡು ತಮ್ಮ ಹೊಸ ಹೃದಯ ವೈಶಾಲ್ಯವನ್ನು ಮೆರೆಯುತ್ತಿದ್ದಾರೆ. ಸಂತೋಷ. ಆದರೆ ಈ ಭಾಗ್ಯ ಈಗ ಲೋಕ ತ್ಯಜಿಸಿದವರಿಗಿಲ್ಲ ಎಂದು ಕಾಣುತ್ತದೆ. ಹಾಗಾಗಿಯೇ ಮೊನ್ನೆ ಜಿಎಸ್ಸೆಸ್ ಬಗ್ಗೆ ಬರೆಯುತ್ತಾ ಅವರ ಕಾವ್ಯ ಮಧ್ಯಮ ವರ್ಗದ ಹುಸಿ ಕಾವ್ಯವೆಂಬರ್ಥದ ಮಾತುಗಳನ್ನಾಡಿದ್ದಾರೆ. ಇದು ಬೇಜವಾಬ್ದಾರಿತನದ ಪರಮಾವಧಿಯೆಂದೇ ಹೇಳಬೇಕು. ಜಿಎಸ್ಸೆಸ್ ಶಿವಪ್ರಕಾಶರಷ್ಟು ದಟ್ಟ ಸಂಕೀರ್ಣತೆಯ ಪದ್ಯಗಳನ್ನು ಬರೆದಿರುವ ಅಸಾಧಾರಣ ಕವಿಯಲ್ಲದಿರಬಹುದು. ಆದರೆ ಕನ್ನಡ ಜನಮಾನಸದಲ್ಲಿ, ಶಿವಪ್ರಕಾಶರ ಕಾವ್ಯಕ್ಕಿಂತ ಹೆಚ್ಚು ಕಾಲ ಉಳಿಯಬಲ್ಲ ಸಾಕಷ್ಟು ಸಂಖ್ಯೆಯ ಒಳ್ಳೆಯ ಕವಿತೆಗಳನ್ನು ಬರೆದಿದ್ದಾರೆ. ಇರಲಿ ಬಿಡಿ, ಶಿವಪ್ರಕಾಶ್ ಈ ಹಿಂದೆ ಬೇಂದ್ರೆ ಅಂತಹ ಒಳ್ಳೆಯ ಕವಿಯೇನೂ ಅಲ್ಲ ಎಂಬ ಪ್ರಮೇಯವೊಂದನ್ನು ಪ್ರಚುರಪಡಿಸಲು ಯತ್ನಿಸಿ ವಿಫಲರಾದವರಲ್ಲವೇ?

ಶಿವಪ್ರಕಾಶರ ಇಂತಹುದೇ ಬೇಜವಾಬ್ದಾರಿತನದ ಇನ್ನೊಂದು ಪ್ರಯತ್ನವೆಂದರೆ, ವೀರಶೈವರು ಹಿಂದೂ ಸಮುದಾಯಕ್ಕೆ ಸೇರದ ಭಿನ್ನ ಧರ್ಮವೆಂಬ ವೀರಶೈವ ಮಹಾಸಭಾದ ವಾದಕ್ಕೆ ಪುಷ್ಟಿಯನ್ನೀಯುವ ವಾದವೊಂದನ್ನು ಮಂಡಿಸಿರುವುದು. ಇವರ ಪ್ರಕಾರ ಹಿಂದೂ' ಎಂಬ ಶಬ್ದ ಪರಕೀಯರಿಂದ ಬಂದೆದ್ದೆಂಬುದನ್ನು ಬಾಲಗಂಗಾಧರರು ಈಗ ಸಾಬೀತುಪಡಿಸಿದ್ದಾರಂತೆ!(ಇವರ ಹೊಸ ಲೋಕಾನುಸಂಧಾನದ ಎರಡನೇ ಮಜಲಿದು!) ಶಿವಪ್ರಕಾಶರ ವಾದ ಎಷ್ಟು ಸರಳೀಕೃತವಾಗಿದೆಯೆಂದರೆ, ಇವರ ವಾದದ ಪ್ರಕಾರ ಈಗ ಹಿಂದೂ ಧರ್ಮವೆಂದು ಹೇಳಲಾಗುವ ಜನಸಮುದಾಯದ ವ್ಯಾಪ್ತಿಗೆ ಬರುವ ಪ್ರತಿಯೊಂದು ಜಾತಿ ಸಮುದಾಯವೂ ಒಂದು ಧರ್ಮವೆನಿಸಿಕೊಳ್ಳಲು ಒಂದಲ್ಲ ಒಂದು ಮಟ್ಟದಲ್ಲಿ ಅರ್ಹವಾತ್ತವೆ. ಹಾಗೇ ಈ ಎಲ್ಲವೂ ಅಲ್ಪಸಂಖ್ಯಾತ ಧರ್ಮಗಳಾಗಿ ಬಹುಸಂಖ್ಯಾತ ಧರ್ಮವೆಂಬುದಿಲ್ಲವಾಗುವ ವಿಪರ್ಯಾಸದ ಸಂದರ್ಭ ಉಂಟಾಗಬಲ್ಲುದಾಗಿದೆ! ವೀರಶೈವ ಮಹಾಸಭೆಯವರು ಭಿನ್ನ ಧರ್ಮದ ಮಾತನ್ನಾಡುತ್ತಿರುವುದರಲ್ಲಿ ತಾತ್ವಿಕ ಪ್ರಶ್ನೆ ಎಷ್ಟಿದೆ, ವ್ಯಾವಹಾರಿಕ ಪ್ರಶ್ನೆ ಎಷ್ಟಿದೆ ಎಂಬುದು ಶಿವಪ್ರಕಾಶರಿಗೆ ಗೊತ್ತಿಲ್ಲದಿಲ್ಲ. ಆದರೂ ಅರು ಹೀಗೇಕೆ ವಾದಿಸುತ್ತಾರೆಂಬುದನ್ನು ಓದುಗರೇ ತೀರ್ಮಾನಿಸಬಲ್ಲರು.



ಮೂಡುಬಿದ್ರೆಯ ಮೋಹನ ಆಳ್ವರು ಈ ಬಾರಿಯ ವಿಶ್ವ ನುಡಿಸಿರಿಯ ಸಂದರ್ಭದಲ್ಲಿ ಹೊರ ತಂದಿರುವ 'ಸಿರಿಗನ್ನಡ' ಸಂಪುಟ ನನ್ನ ಮುಂದಿದೆ. ಅದರ ಸೊಬಗನ್ನು ನೋಡುತ್ತಿದ್ದಂತೆ, ಅದರ ಪುಟಗಳನ್ನು ತಿರುವಿ ಹಾಕುತ್ತಿದ್ದಂತೆ ಆಳ್ವರ ಮೇಲೆ ನಮ್ಮ ಪ್ರಗತಿಪರ ಸಾಹಿತಿಗಳೆನಿಸಿ ಕೊಂಡವರು ಮಾಡುತ್ತಿರುವ ಆರೋಪಗಳು ನನ್ನ ಮನಸ್ಸಿನ ಹಿನ್ನೆಲೆಗೆ ಸರಿದು ಹೋಗುತ್ತಿವೆ. ಅವರು ಹಣ ಮಾಡುತ್ತಿರಬಹುದು. ಆದರೆ ಇಂದು ಹಣ ಮಾಡುತ್ತಿರುವ ಎಷ್ಟು ಜನ ಉದ್ಯಮಿಗಳು ಅದನ್ನು ಹೀಗೆ ಈ ಗುಣಮಟ್ಟದಲ್ಲಿ ಸಾಹಿತ್ಯ ಸಂಸ್ಕೃತಿಗಳ ಪೋಷಣೆಗೆ ಬಳಸುತ್ತಿದ್ದಾರೆ? ಅಚ್ಚ ತುಳುವರಾಗಿದ್ದು ಕೊಂಡೂ ಅವರು ತಮ್ಮ ನುಡಿಸಿರಿ ಮತ್ತು ವಿರಾಸತ್‌ಗಳ ಮೂಲಕ ಮಾಡುತ್ತಿರುವ ಕನ್ನಡ ನಾಡು ನುಡಿಗಳ ಸೇವೆಗೆ ಕನ್ನಡ ಸಾರಸ್ವತ ಲೋಕ ಮೊದಲು ಕೃತಜ್ಞತೆ ಸಲ್ಲಿಸಬೇಕು. ಆ ಮೇಲೆ ಪ್ರಶ್ನೆಗಳು. ಅವರ ಆರ್ಥಿಕ ಮೂಲಗಳು ಪ್ರಶ್ನಾರ್ಹವಾಗಿದ್ದರೆ, ಅದನ್ನು ಪ್ರಶ್ನಿಸಬೇಕಾದವರು ಆರ್ಥಿಕ ಅಪರಾಧಗಳ ಇಲಾಖೆಯವರು. ಸಾಹಿತಿಗಳಲ್ಲ.


ಸುಮಾರು ಒಂಬೈನೂರು ಪುಟಗಳ ಡಬಲ್ ಡೆಮಿ ಆಕಾರದ ಈ ವರ್ಣಮಯ ಸಂಪುಟ ಬಹುಕಾಲ ನಮ್ಮ ನಾಡು–ನುಡಿ–ಸಂಸ್ಕೃತಿಗಳನ್ನು ಕುರಿತ ಒಂದು ಮಹತ್ವದ ಆಕರ ಗ್ರಂಥವಾಗಿ ಉಳಿಯುವುದರಲ್ಲಿ ಸಂಶಯವಿಲ್ಲ. ಮೋಹನ ಆಳ್ವರಿಗೆ ನಮ್ಮ ಅಭಿನಂದನೆಗಳು.

**–ಡಿ.ಎಸ್. ನಾಗಭೂಷಣ.**

## ಪುಸ್ತಕ ಪರಿಚಯ

ಪು: ಆರ್‌ಎಸ್‌ಎಸ್ ಅಂತರಂಗ ಲೇ: ಎ.ಕೆ. ಸುಬ್ಬಯ್ಯ ಪ್ರ: ಕಲ್ಲುಗುಂಡಿ ಎಸ್ಟೇಟ್, ಕೊಡಗು ಪು: ೧೧೬ ಬೆಲೆ: ರೂ.೬೦/-

# ಸುಬ್ಬಯ್ಯನವರ ಸ್ಫೋಟಗಳು




**ಸ**ಮಕಾಲೀನ ಕರ್ನಾಟಕದ ರಾಜಕಾರಣ ಕಂಡ ಜಾತ್ಯತೀತ ನೆಲೆಯ ಅಪ್ರತಿಮ ಹೋರಾಟಗಾರ ಎ.ಕೆ. ಸುಬ್ಬಯ್ಯನವರು ಸುಮಾರು ೩೦ ವರ್ಷಗಳಷ್ಟು ಹಿಂದೆ ಬರೆದು ಪ್ರಕಟಿಸಿದ ಕೃತಿ 'ಆರ್.ಎಸ್.ಎಸ್. ಅಂತರಂಗ' ಇದೀಗ ಮೂರನೇ ಮುದ್ರಣ ಕಂಡು ನಾಲ್ಕು ಹೊಸ ಅನುಬಂಧಗಳೊಂದಿಗೆ ಹೊರಬಂದಿದೆ.

ವಿದ್ಯಾರ್ಥಿ ದೆಸೆಯಲ್ಲಿ ಇದ್ದಾಗಲೇ ತಮ್ಮ ಸ್ವಕ್ಷೇತ್ರವಾದ ವಿರಾಜಪೇಟೆಯಲ್ಲಿ ೧೯೫೪ರ ಒಂದು ಉಪಚುನಾಣೆಯಲ್ಲಿ ಕಾಂಗ್ರೆಸ್ ವಿರೋಧಿ ಪ್ರಜಾ ಸೋಶಿಯಲಿಸ್ಟ್ ಪಾರ್ಟಿಯ ಕಾರ್ಯಕರ್ತರಾಗಿ ಆ ಪಕ್ಷದ ಅಭ್ಯರ್ಥಿಯ ಗೆಲುವಿಗೆ ಶ್ರಮಿಸಿದ್ದ ಸುಬ್ಬಯ್ಯನವರು ನಂತರ ಅಲ್ಲಿ ಪಿ.ಎಸ್.ಪಿ. ಕಣ್ಮರೆಯಾದ ಬಳಿಕ ಜನಸಂಘವನ್ನು ಜಿದ್ದಿನಿಂದ ಕಟ್ಟಿ ಬೆಳೆಸಿ ೧೯೬೭ ರ ಹೊತ್ತಿಗೆ 'ಸಂಘ ರಾಜಕಾರಣ' ಕೊಡಗಿಗೆ ದೊಡ್ಡ ಪ್ರಮಾಣದಲ್ಲಿ ಪ್ರವೇಶಿಸಲು ಕಾರಣರಾದವರು. ಆದರೆ ೧೯೭೫ರ ಹೊತ್ತಿಗೆ ಜನಸಂಘದಲ್ಲಿ ತೀಕ್ಷ್ಣ ಭಿನ್ನಮತೀಯ ನಾಯಕರಾಗಿದ್ದುಕೊಂಡು ೧೯೭೭ರಲ್ಲಿ ಜಯಪ್ರಕಾಶ್ ನಾರಾಯಣರ ನಾಯಕತ್ವದಲ್ಲಿ ಜನತಾ ಪಕ್ಷದ ರಚನೆ ಮತ್ತು ಅದರ ವಿಘಟನೆಯ ನಂತರ ಬಿ.ಜೆ.ಪಿ. ಸೇರುವ ಇವರು ೧೯೮೭ರವರೆಗೂ 'ಸಂಘ' ರಾಜಕಾರಣದಲ್ಲಿ ಉಳಿದುಬಿಡುತ್ತಾರೆ. ಕೊನೆಗೆ ಅಲ್ಲಿರಲಾರದೆ ಹೊರಬಂದು ಬರೆದ ಪುಸ್ತಕ 'ಆರ್.ಎಸ್.ಎಸ್. ಅಂತರಂಗ'.

ಈ ಪುಸ್ತಕ ಪುರೋಹಿತಶಾಹಿಯ ಸಂಸರ್ಗದಲ್ಲಿದ್ದೂ ತನ್ನ ಅಸ್ಮಿತೆಯ ಬಗ್ಗೆ ಸದಾ ಎಚ್ಚರವಿದ್ದ ಶೂದ್ರ ನಾಯಕನೊಬ್ಬನ ಕಥನ ಕೂಡ ಆಗಿದೆ. ಸುಬ್ಬಯ್ಯನವರಂತಹ ಸುಬ್ಬಯ್ಯನವರನ್ನೇ ಒಂದೂವರೆ ದಶಕದಷ್ಟು ಕಾಲ ಬಂಧಿಸಿಟ್ಟುಕೊಂಡಿತ್ತೆಂದರೆ, ಆರ್.ಎಸ್.ಎಸ್. ಅವರ ಪಾಲಿಗೆ ಎಷ್ಟು ಎಂಬ ದುರ್ಭೇದ್ಯ 'ಸೈದ್ಧಾಂತಿಕ ಸೆರೆಮನೆ' ಯಾಗಿತ್ತು ಎಂಬುದರ ಅಂದಾಜು ಈ ಪುಸ್ತಕವನ್ನು ಓದಿದಲ್ಲಿ ಗೊತ್ತಾಗುತ್ತದೆ.

ಸಾಧಾರಣ ಗಾತ್ರದ ಟಿಪ್ಪಣಿಗಳೋಪಾದಿಯಲ್ಲಿರುವ ಸುಮಾರು ೧೬ ಅಧ್ಯಾಯಗಳಲ್ಲಿ ಈ ಪುಟ್ಟ ಕೃತಿ ಬಿಚ್ಚಿಕೊಳ್ಳುತ್ತದೆ. ಈ ಟಿಪ್ಪಣಿಗಳು ಸರಳವಾಗಿವೆ, ನೇರವಾಗಿದ್ದು ಆಧಾರಸಹಿತ ನಿರೂಪಣೆ ಹೊಂದಿವೆ. ಆರ್.ಎಸ್.ಎಸ್. ಅನ್ನು ಅತ್ಯಂತ ಹತ್ತಿರದಿಂದ ಕಂಡು ಬೆಚ್ಚಿದ ಪ್ರಜಾಪ್ರಭುತ್ವದ ಪ್ರತಿಪಾದಕನೊಬ್ಬನ; ಮಾನವ ಘನತೆ ಮತ್ತು ರಾಷ್ಟ್ರಹಿತದ ಕುರಿತು ಬದ್ಧತೆ ಹೊಂದಿರುವ ಸೂಕ್ಷ್ಮಮತಿ ರಾಜಕಾರಣಿಯೊಬ್ಬನ ತೀಕ್ಷ್ಣ ಟಿಪ್ಪಣಿಗಳು ಇವಾಗಿವೆ.

ಜೆ.ಪಿ.ಯವರ ಪ್ರಯೋಗ ವಿಫಲಗೊಂಡು ಜನತಾಪಕ್ಷ ಒಡೆದು ಹೋದಾಗ ಮತ್ತೆ ಬಿ.ಜೆ.ಪಿ.ಯಲ್ಲಿ ಮುಂದುವರೆಯುವ ನಿರ್ಧಾರ ತಾಳುವ ಸುಬ್ಬಯ್ಯನವರು "ನಂಬಿ ಮತ್ತೆ ಅದೇ ಹೊಂಡದಲ್ಲೇ ಬಿದ್ದ ಮನುಷ್ಯ ನಾನು" ಎಂದು ತಮ್ಮನ್ನೇ ತಾವು ಹಳಿದುಕೊಳ್ಳುತ್ತಾರೆ.

ಈ ಪುಸ್ತಕದ 'ಒಳನೋಟ'ಗಳನ್ನು ಹೀಗೆ ಸಂಗ್ರಹಿಸಬಹುದು:

೧) 'ಸಂಘ' ದ ಶಾಖೆಗಳಲ್ಲಿ ಮಕ್ಕಳಿಗೆ ಆಡಿಸುವ 'ಮೈಂ ಶಿವಾಜಿ ಹೂಂ' ಎಂದು ಕೂಗುವ ಆಟದಲ್ಲಿ ಇದ್ದಕ್ಕಿದ್ದಂತೆ 'ಮೈಂ ಔರಂಗಜೇಬ್ ಹೂಂ' ಎಂದು ಕೂಗುವ ಹುಡುಗನ ಮೇಲೆ 'ಮೈಂ ಶಿವಾಜಿ ಹೂಂ' ಎನ್ನುತ್ತಿದ್ದ ಹುಡುಗರು ಬಿದ್ದು ಥಳಿಸುವ ಈ ಆಟ ಎಳೆಯ ಮಕ್ಕಳ ಮನಸ್ಸಿನಲ್ಲಿ ಕೋಮು ವಿಷ ಬೀಜ ಬಿತ್ತುವ ರಾಷ್ಟ್ರಘಾತುಕ ಆಟವಾಗಿದೆ.

೨) 'ವಂಚಿಕಾ' ಎಂದರೆ ವಂಚಿಸುವುದನ್ನು ತಮ್ಮ ತಾತ್ವಿಕತೆಯ ಭಾಗವೆನ್ನುವ ಆರ್.ಎಸ್.ಎಸ್. ತನ್ನ ಸಂಘದ ಶಾಖೆಗಳಲ್ಲಿ ವಂಚನೆಯನ್ನೇ ಮಕ್ಕಳಿಗೆ ಬಾಲ್ಯದಿಂದ ಕಲಿಸಲಾಗುತ್ತದೆ. ಇದು ಪರೋಕ್ಷ ಯುದ್ಧತಂತ್ರದ ಭಾಗವಾಗಿ ಮಾನ್ಯ ಮಾಡಲಾದ ಸ್ವೀಕೃತ ತಾತ್ವಿಕ ಅಂಶವಾಗಿದೆ.

೩) ಸ್ನೇಹಿತರೊಬ್ಬರನ್ನು ಆರ್.ಎಸ್.ಎಸ್. ಕಾರ್ಯಕರ್ತನೊಬ್ಬ ಇನ್ನೊಬ್ಬ ಕಾರ್ಯಕರ್ತನಿಗೆ ಪರಿಚಯಿಸುವಾಗ "ಇವರು ಇಂತಹ ಕಡೆ ಇರುತ್ತಾರೆ, ಬಳಸಿಕೊಳ್ಳಿ" ಎಂದು ಹೇಳುತ್ತಾನೆ. ಈ 'ಬಳಸಿಕೊಳ್ಳಿ' ಎನ್ನುವ ವಿಕೃತ ಶಬ್ದ ಆರ್.ಎಸ್.ಎಸ್.ನಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದೆ. ತನ್ನ ಉದ್ದೇಶಕ್ಕೆ 'ಬಳಸಿ ಬಿಸಾಡುವುದು' ಆರ್.ಎಸ್.ಎಸ್.ನಲ್ಲಿ ಸ್ವೀಕೃತ ತಾತ್ವಿಕತೆಯ ಪ್ರಧಾನ ಅಂಶ.

೪) ಆರ್.ಎಸ್.ಎಸ್.ನಲ್ಲಿ ಸಾರ್ವಜನಿಕ ಹಣಕ್ಕೆ ಲೆಕ್ಕ ಇಡುವ ಪರಿಪಾಠವೇ ಇಲ್ಲ. 'ಹುಂಡಿ' ಲೆಕ್ಕದ ಆರ್.ಎಸ್.ಎಸ್. ಇದುವರೆಗೆ ಸಾರ್ವಜನಿಕ ದೇಣಿಗೆಯನ್ನು ತನ್ನಿಷ್ಟ ಬಂದಂತೆ ಉಡಾಯಿಸಿದೆ. ಈ ಸಂಬಂಧದಲ್ಲಿ ಲೇಖಕರು ತಮ್ಮ 'ಸಂಘ' ಸಹೋದ್ಯೋಗಿಗಳ ಅನೇಕ ವಂಚನೆಯ ಪ್ರಕರಣಗಳನ್ನು ಉಲ್ಲೇಖಿಸುತ್ತಾರೆ.

೫) ತುರ್ತುಪರಿಸ್ಥಿತಿಯನ್ನು ಆರ್.ಎಸ್.ಎಸ್. ನಿಜವಾಗಿ ವಿರೋಧಿಸಲೇ ಇಲ್ಲ. ಬದಲಾಗಿ ಇಂದಿರಾ ಗಾಂಧಿಯವರ ೨೦ ಅಂಶಗಳ ಕಾರ್ಯಕ್ರಮಗಳನ್ನು ಗೋಳ್ವಾಲ್ಕರ್ ಹೊಗಳಿ ಇಂದಿರಾ ಗಾಂಧಿಯವರಿಗೆ ಜೈಲಿನಿಂದ ಪತ್ರ ಬರೆಯುತ್ತಾರೆ ಮತ್ತು ಈ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರಲು ಆರ್.ಎಸ್.ಎಸ್. ಕಾರ್ಯಕರ್ತರನ್ನು ಜೈಲಿನಿಂದ ಬಿಡುಗಡೆ ಮಾಡಲು ವಿನಂತಿ ಮಾಡುತ್ತಾರೆ. ಇಷ್ಟಲ್ಲದೆ ಸರ್ವೋಚ್ಚ ನ್ಯಾಯಾಲಯದಲ್ಲಿ ಇಂದಿರಾ ಗಾಂಧಿ ತಮ್ಮ ಸಂಸತ್ ಸದಸ್ಯತ್ವ ವಜಾ ಆದ ಕೇಸಿನಲ್ಲಿ ಗೆದ್ದದ್ದನ್ನು ಅಭಿನಂದಿಸುತ್ತಾ ಅವರಿಗೆ ಜೈಲಿನಿಂದ ಪತ್ರ ಬರೆಯುತ್ತಾರೆ.

೬) ಆರ್.ಎಸ್.ಎಸ್.ನಲ್ಲಿ ಆಂತರಿಕ ಪ್ರಜಾಪ್ರಭುತ್ವವೇ ಇಲ್ಲ. ಕಳೆದ ೯೦ ವರ್ಷಗಳಿಂದ ಅಲ್ಲಿ ಚುನಾವಣೆಗಳೇ ನಡೆದಿಲ್ಲ. ಅಧಿಕಾರಕ್ಕೆ ಅಂಟಿಕೊಳ್ಳುವ ರಾಜಕಾರಣಿಗಳ ಪ್ರವೃತ್ತಿಯನ್ನು ಗೇಲಿ ಮಾಡುವ ಗೋಳ್ವಾಲ್ಕರ್ ತಾವು ಸಾಯುವವರೆಗೆ ಆರ್.ಎಸ್.ಎಸ್. ಸರಸಂಘ ಸಂಚಾಲಕರಾಗಿದ್ದರು.

೭) 'ಆರ್.ಎಸ್.ಎಸ್. ಎಣ್ಣೆ ಸುರಿಯದ ಕೋಮು ಗಲಭೆಯ ಕಿಚ್ಚು ಇಲ್ಲವೇ ಇಲ್ಲವೆನ್ನಬಹುದು.' ಎಂದು ಖಚಿತವಾಗಿ ದೃಢ ದನಿಯಲ್ಲಿ ಹೇಳುವ ಸುಬ್ಬಯ್ಯನವರು ಹುಬ್ಬಳ್ಳಿ ಮತ್ತು ಮಂಗಳೂರಿನ ವಿವಿಧ ಕೋಮು ಗಲಭೆಗಳ ಹಿಂದೆ ಆರ್.ಎಸ್.ಎಸ್. ಹೇಗೆ ಕೆಲಸ ಮಾಡಿದೆ ಎಂಬ ಸತ್ಯಾಂಶಗಳನ್ನು ದಾಖಲಿಸುತ್ತಾರೆ.

ಹೀಗೆ ಆರ್.ಎಸ್.ಎಸ್. ಅಂತರಂಗವನ್ನು ಬಯಲು ಮಾಡುವ ಎ.ಕೆ.ಸುಬ್ಬಯ್ಯನವರ ಈ ಪುಸ್ತಕದ ಒಳನೋಟಗಳ ಜೊತೆಗೆ ಇದರಲ್ಲಿ ಸೇರ್ಪಡೆಗೊಂಡಿರುವ ನಾಲ್ಕು ಅನುಬಂಧಗಳಲ್ಲಿ ಸ್ವತಃ ಅವರೇ ನರೇಂದ್ರ ಮೋದಿಯ ರಾಜಕಾರಣದ ಬಗ್ಗೆ ಬರೆದಿರುವ ಎರಡು ಲೇಖನಗಳಿವೆ. ಇನ್ನೊಂದು ಇದೇ ವಿಷಯದ ಬಗ್ಗೆ ನೂರ್ ಶ್ರೀಧರ್ ಎಂಬುವವರು ಬರೆದಿರುವ ಲೇಖನ. ಇನ್ನೊಂದು ಅನುಬಂಧ ಹಿರಿಯ ಸಮಾಜವಾದಿ ನಾಯಕ ಮಧು ಲಿಮಯೆ ಅವರು 'ಆರ್.ಎಸ್.ಎಸ್. ಎಂದರೆ ಏನು?' ಎಂಬ ಶೀರ್ಷಿಕೆಯಲ್ಲಿ ಆರೆಸ್ಸೆಸ್ ತನ್ನ ಮೊದಲ ೪೦ ವರ್ಷಗಳಲ್ಲಿ ರಾಷ್ಟ್ರಜೀವನದಲ್ಲಿ ಉಂಟು ಮಾಡಿದ ಅನಾಹುತಗಳನ್ನು ವಿಶ್ಲೇಷಿಸಿರುವ ಲೇಖನ.(ಇದನ್ನು ಇಡಿಯಾಗಿ ಈ ಸಂಚಿಕೆಯ ೧೨ನೇ ಪುಟದಲ್ಲಿ ಪ್ರಕಟಿಸಲಾಗಿದೆ ನೋಡಿ-ಸಂ)

ಈ ಮೂರನೇ ಮುದ್ರಣ ಈ ಪುಸ್ತಕದ ಮೊದಲೆರಡು ಆವೃತ್ತಿಗಳ ಮುನ್ನುಡಿ, ಲೇಖಕರ ಮಾತು ಹಾಗೂ ಓದುಗರ ಅಥವಾ ವಿಮರ್ಶಕರ ಪ್ರತಿಕ್ರಿಯೆ ಯಾವುದೂ ಇಲ್ಲದೆ ಭಣಗುಡುತ್ತಿದ್ದು, ಮುಂದಿನ ಆವೃತ್ತಿಯಲ್ಲಾದರೂ ಈ ಕೊರತೆಗಳು ನೀಗಬೇಕಾದ ಅವಶ್ಯಕತೆಯಿದೆ.

**-ಕೆ.ಪಿ.ನಟರಾಜ**

# ಪತ್ರಿಕೆಯ ಎಲ್ಲ ಓದುಗರಿಗೂ

# ಹಾರ್ದಿಕ ಶುಭಾಶಯಗಳು



**ಗೋಪಾಲಕೃಷ್ಣ ಪಿ**

ಮತ್ತು **ಹೇಮಲತಾ ಜಿ ಕೃಷ್ಣ**

ಸಿವಿಲ್ ಗುತ್ತಿಗೆದಾರರು

ಮೇದರಕೇರಿ, ಗಂಗಾಪರಮೇಶ್ವರಿ ನಗರ

ಸಾಗರ(ಶಿವಮೊಗ್ಗ ಜಿಲ್ಲೆ)

'ಹೊಸ ಮನುಷ್ಯ'ದ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು

–ಪ್ರೊ. ಎಂ. ಚಂದ್ರಶೇಖರಯ್ಯ
ಶ್ರೀಮತಿ ರೇಣುಕಾ
ಭದ್ರಾವತಿ

**ತಿಂಗಳ ಸಾಲುಗಳು...**



ನಿರ್ಮಲ ಮನಸ್ಸೇ ಧರ್ಮ.

ಇನ್ನುಳಿದಿದ್ದೆಲ್ಲ ಬರಿಯ ತೋರಿಕೆ, ಡಂಭಾಚಾರ.

**–ತಿರುವಳ್ಳುವರ್**

**ಪತ್ರಿಕೆಗೆ ಶುಭವನ್ನು ಕೋರುವ...**

**– ಬಿ.ಸುರೇಶ**
**ಡಾ. ವಿಜಯಾ**

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**Regd. News Paper** RNI No. KARKAN/2012/47568
Rgd No. KA/SK/SMG-1209/2013-15
ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204 (Karnataka)